ಬುಧವಾರ, ಜೂನ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 158 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಗರಗಳಲ್ಲಿ ಸಂಚಾರ ವ್ಯವಸ್ಥೆಯೇ ಜನರ ಪಾಲಿಗೆ ತೊಡಕಾಗಿದೆ. ಮೆಷಿನ್ ಲರ್ನಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡರೆ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಬಹುದು



ಆಳ-ಅಗಲ
ದ್ವೇಷದ ಹೇಳಿಕೆ ಸೌಹಾರ್ದ ಕದಡೀತೇ?

ಪ್ರವಾದಿಗೆ ಅವಮಾನ: ಹೆಚ್ಚಿದ ಆಕ್ಷೇಪ 8

ಕೂಲಿ ವೇಷದಲ್ಲಿದ್ದ 'ಎ ದರ್ಜೆ' ಉಗ್ರ ! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,107 ▼	16,416 ▼	₹52,700 (ಬೆಂಗಳೂರು) ▼	₹63,500 (ಬೆಂಗಳೂರು) ▼	77.78 ▼

ರೋಹಿತ್ ಚಕ್ರತೀರ್ಥ ಸಮಿತಿಗೆ ನೀಡಿದ್ದ ಜವಾಬ್ದಾರಿ • ನಿರ್ಧಾರ ಕೈಬಿಟ್ಟ ಸರ್ಕಾರ

ಪಿಯು ಪಠ್ಯ ಪರಿಷ್ಕರಣೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ವಿವಾದ ತೀವ್ರಗೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ, ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಗೆ ಪಿಯು ತರಗತಿಯ ಪಠ್ಯವನ್ನು ಪರಿಷ್ಕರಿಸುವ ಹೊಣೆಯನ್ನು ನೀಡುವ ನಿರ್ಧಾರದಿಂದ ಹಿಂದಕ್ಕೆ ಸರಿದಿದೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, 'ಪಿಯು ತರಗತಿಯ ಒಂದೇ ಒಂದು ಪಾಠ ಪರಿಷ್ಕರಿಸಬೇಕು ಎಂಬ ಮನವಿ ಬಂದಿತ್ತು. ಒಂದು ಪಠ್ಯಕ್ಕಾಗಿ ಸಮಿತಿ ರಚಿಸುವುದು ಬೇಡವೆಂದು ಈ ಸಮಿತಿಗೇ ವಹಿಸಿದ್ದೆವು. ಈಗ ಸಮಿತಿಯೇ ವಿಸರ್ಜನೆ ಆಗಿದೆ. ಹೀಗಾಗಿ, ಪಿಯು ಪಠ್ಯದಲ್ಲಿ ಸದ್ಯ ಯಾವ ಪರಿಷ್ಕರಣೆ ಇಲ್ಲ. ಈಗಿರುವ ಪಠ್ಯವೇ ಮುಂದುವರಿಯಲಿದೆ' ಎಂದರು.

ದ್ವಿತೀಯ ಪಿಯುಸಿ ಇತಿಹಾಸ ವಿಷಯದ ಪಠ್ಯದಲ್ಲಿ ಅಧ್ಯಾಯ 4.2ರ 'ಹೊಸ ಧರ್ಮಗಳ ಉದಯ' ಪಠ್ಯ-ಭಾಗವನ್ನು ಪರಿಷ್ಕರಿಸಲು ಸರ್ಕಾರ ಮುಂದಾಗಿತ್ತು. ಪಠ್ಯ ಪರಿಷ್ಕರಣೆಯ ಹೊಣೆಯನ್ನು ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಗೆ ವಹಿಸಲಾಗಿತ್ತು. ಈ ಸಮಿತಿ ಪಠ್ಯವನ್ನು ಪರಿಷ್ಕರಿಸಿ ವರದಿಯನ್ನೂ ಸಿದ್ಧಪಡಿಸಿತ್ತು.

ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ ಶಾಲಾ ಪಠ್ಯ ಪುಸ್ತಕಗಳ ಬಗ್ಗೆ ವಿವಿಧ ವಲಯಗಳಿಂದ ತೀವ್ರ ಆಕ್ಷೇಪ, ವಿರೋಧ ವ್ಯಕ್ತವಾಗುತ್ತಿದ್ದಂತೆ, ಈ ಸಮಿತಿಯನ್ನು ವಿಸರ್ಜಿಸಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದರು. 'ಸಮಿತಿಯನ್ನು ವಿಸರ್ಜಿಸಿರುವುದರಿಂದ ಪಿಯುಸಿ ಪಠ್ಯಪುಸ್ತಕ ಪರಿಷ್ಕರಿಸಿದ ವರದಿ ಪಡೆಯುವುದಿಲ್ಲ' ಎಂದು ಸಚಿವ ನಾಗೇಶ್ ಸ್ಪಷ್ಟಪಡಿಸಿದರು.

2021ರ ಫೆಬ್ರುವರಿ 17 ರಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿದ್ದ ಬಿ.ಸಿ.ನಾಗೇಶ್ ಅವರು, ದ್ವಿತೀಯ ಪಿಯುಸಿ ಪಠ್ಯಪುಸ್ತಕ ಪರಿಷ್ಕರಣೆ ಜವಾಬ್ದಾರಿಯನ್ನು ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಗೆ ನೀಡುವಂತೆ ನಿರ್ದೇಶನ ನೀಡಿದ್ದರು.

12ನೇ ಪುಟ ನೋಡಿ

'ಜನಾಭಿಪ್ರಾಯ ಆಧರಿಸಿ ಮರು ಪರಿಷ್ಕರಣೆ'

ಸಾರ್ವಜನಿಕ ಅಭಿಪ್ರಾಯ ಆಧರಿಸಿ ಪರಿಷ್ಕೃತ ಪಠ್ಯವನ್ನು ಮರು ಪರಿಷ್ಕರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಉದ್ದೇಶದಿಂದ ಈ ಹಿಂದಿನ ಎಲ್ಲ ಮೂರೂ ಸಮಿತಿಗಳು ಪರಿಷ್ಕರಿಸಿದ ಪಠ್ಯಗಳ ಕರಡನ್ನು ಎಲ್ಲರಿಗೂ ಲಭ್ಯವಾಗುವಂತೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮಂಗಳವಾರ ಭೇಟಿ ಮಾಡಿದ ಬಳಿಕ ಈ ವಿಷಯ ತಿಳಿಸಿದ ಸಚಿವ ಬಿ.ಸಿ.ನಾಗೇಶ್, 'ಈ ಹಿಂದಿನ ಮೂರೂ ಸಮಿತಿಗಳು ಪರಿಷ್ಕರಿಸಿದ್ದ ಪಠ್ಯ ಪುಸ್ತಕಗಳನ್ನು ಶೀಘ್ರದಲ್ಲಿ ಜನರ ಮುಂದಿಡುತ್ತೇವೆ. ಯಾರು ಯಾವುದನ್ನು ಸೇರಿಸಿದರು, ಯಾವುದನ್ನು ಕೈಬಿಟ್ಟಿದ್ದರು ಎನ್ನುವುದನ್ನು ಅವರೇ ತೀರ್ಮಾನಿಸಲಿ. ತಪ್ಪುಗಳು ಅಥವಾ ಆಕ್ಷೇಪಗಳಿದ್ದರೆ ಅದನ್ನು ಕರ್ನಾಟಕ ಪಠ್ಯಪುಸ್ತಕ ಸೊಸೈಟಿಗೆ ಸಲ್ಲಿಸಲಾಗುವುದು' ಎಂದರು.

'ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸಿದ ಪಠ್ಯ ಪುಸ್ತಕಗಳು ಆನ್‌ಲೈನ್‌ನಲ್ಲಿ ಈಗಾಗಲೇ ಲಭ್ಯವಿದೆ. ಉಳಿದ ಸಮಿತಿಗಳು (ಮುಡಂಬಡಿತ್ತಾಯ ಮತ್ತು ಬರಗೂರು ರಾಮಚಂದ್ರಪ್ಪ) ಪರಿಷ್ಕರಿಸಿದ ಪಠ್ಯ-ಪುಸ್ತಕಗಳನ್ನು 10 ದಿನಗಳಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ' ಎಂದರು.

ಕಾಂಗ್ರೆಸ್‌ನಿಂದ ನಾಳೆ ಧರಣಿ: ಡಿಕೆಶಿ

'ಪಠ್ಯ ಪರಿಷ್ಕರಣೆ ನೆಪದಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಸಾಂಸ್ಕೃತಿಕ ಅತ್ಯಾಚಾರ ನಡೆಸುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಸರ್ಕಾರದ ಈ ನಡೆಯ ವಿರುದ್ಧ ಧ್ವನಿ ಎತ್ತಿರುವ ಮಠಾಧೀಶರು, ಸಾಹಿತಿಗಳು, ಚಿಂತಕರು ಹಾಗೂ ವಿವಿಧ ಸಂಘಟನೆಗಳನ್ನು ಬೆಂಬಲಿಸಿ ಗುರುವಾರ (ಜೂನ್ 9) ಬೆಳಿಗ್ಗೆ 10 ಗಂಟೆಗೆ ವಿಧಾನಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ಪಕ್ಷದ ಶಾಸಕರು ಧರಣಿ ನಡೆಸಲಿದ್ದಾರೆ' ಎಂದರು.

'ಪಠ್ಯಪುಸ್ತಕದಲ್ಲಿ ಕುವೆಂಪು ಸೇರಿದಂತೆ ಅನೇಕ ಮಹನೀಯರ ವಿಚಾರಗಳನ್ನು ತಿರುಚಲಾಗಿದೆ. ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರಾಜಕೀಯ ನಾಯಕರನ್ನು ಹೊರತುಪಡಿಸಿ ಎಲ್ಲ ಮಠಗಳ ಪೀಠಾಧ್ಯಕ್ಷರು, ಸಾಹಿತಿಗಳು, ಸಂಘಟನೆಗಳು ಒಟ್ಟಾಗಿ ಪಠ್ಯ ಪರಿಷ್ಕರಣೆಯಲ್ಲಿ ಸರ್ಕಾರದ ಮನಸ್ಥಿತಿ ಹಾಗೂ ಧೋರಣೆಯನ್ನು ತೀವ್ರವಾಗಿ ಖಂಡಿಸುತ್ತಿದ್ದಾರೆ. ಹೀಗಾಗಿ, ಪರಿಷ್ಕೃತ ಪಠ್ಯ ಪುಸ್ತಕಗಳನ್ನು ಕಸದ ಬುಟ್ಟಿಗೆ ಎಸೆಯಬೇಕು' ಎಂದರು.

12ನೇ ಪುಟ ನೋಡಿ

ಸಿದ್ಧಗಂಗಾ, ಆದಿಚುಂಚನಗಿರಿ ಸ್ವಾಮೀಜಿ ಮಾಹಿತಿಗೂ ಕತ್ತರಿ

ಬೆಂಗಳೂರು: ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯು 6 ನೇ ತರಗತಿಯ ಸಮಾಜವಿಜ್ಞಾನ ಭಾಗ 1ರಲ್ಲಿದ್ದ ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿ, ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು ಕುರಿತ ವಿವರಗಳನ್ನು ಮರು ಪರಿಷ್ಕರಣೆ ಮಾಡುವಾಗ ಒಂದೇ ವಾಕ್ಯಕ್ಕೆ ಸೀಮಿತಗೊಳಿಸಿದೆ!

12ನೇ ಪುಟ ನೋಡಿ

ಪಂಜಾಬ್ ಮಾಜಿ ಸಚಿವ ಧರ್ಮಸೋತ್ ಬಂಧನ

ಚಂಡೀಗಢ (ಪಿಟಿಐ): ಭ್ರಷ್ಟಾಚಾರ ಆರೋಪದ ಮೇರೆಗೆ ಪಂಜಾಬ್‌ನ ಮಾಜಿ ಅರಣ್ಯ ಸಚಿವ ಸಾಧು ಸಿಂಗ್ ಧರ್ಮಸೋತ್ ಅವರನ್ನು ಪಂಜಾಬ್ ವಿಚಕ್ಷಣ ದಳ ಮಂಗಳವಾರ ಬಂಧಿಸಿದೆ.

ಸಾಧು ಸಿಂಗ್ ಅವರು ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ಸಂಪುಟದಲ್ಲಿ ಅರಣ್ಯ ಮತ್ತು ಸಮಾಜ ಕಲ್ಯಾಣ ಸಚಿವರಾಗಿದ್ದರು.

12ನೇ ಪುಟ ನೋಡಿ

ಜೈನ್ ಮನೆಯಿಂದ ₹2.85 ಕೋಟಿ ವಶ

ನವದೆಹಲಿ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧನ-ಕ್ಕೊಳಗಾಗಿರುವ ದೆಹಲಿಯ ಸಚಿವ ಸತ್ಯೇಂದ್ರ ಜೈನ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ನಡೆಸಿ ₹2.85 ಕೋಟಿ ನಗದು ಮತ್ತು 133 ಚಿನ್ನದ ನಾಣ್ಯಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಮಂಗಳವಾರ ತಿಳಿಸಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ಜೈನ್ ಅವರ ನಿವಾಸ ಮತ್ತು ಸಂಬಂಧಿತ ಇತರ ಸ್ಥಳಗಳಲ್ಲಿ ಶೋಧ ನಡೆಸಲಾಗಿತ್ತು. ವಶಕ್ಕೆ ಪಡೆದ ನಗದು ಮತ್ತು ಚಿನ್ನವನ್ನು ರಹಸ್ಯ ಸ್ಥಳದಲ್ಲಿ ಇರಿಸಲಾಗಿತ್ತು ಎಂದು ತಿಳಿಸಿದೆ.

ಒಳ ಪುಟ
ಭಾರತದ ಜಿಡಿಪಿ ಅಂದಾಜು ತಗ್ಗಿಸಿದ ವಿಶ್ವ ಬ್ಯಾಂಕ್ 13

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮೂರು ದಿನಗಳ ಬಳಿಕ ಮಳೆ ಬಿರುಸು ಸಾಧ್ಯತೆ

ರಾಜ್ಯ: ದುರ್ಬಲಗೊಂಡ ಮುಂಗಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಮುಂಗಾರು ಪ್ರವೇಶಿಸಿ ವಾರವಾದರೂ ವ್ಯಾಪಕವಾಗಿ ಮಳೆ ಸುರಿಯುತ್ತಿಲ್ಲ. ಚದುರಿದಂತೆ ಮಳೆ ಬೀಳುತ್ತಿದೆ. ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮುಂಗಾರು ದುರ್ಬಲಗೊಂಡಿದೆ.

'ಇಡಿ ದೇಶದಲ್ಲೇ ಮುಂಗಾರು ದುರ್ಬಲಗೊಂಡಿದೆ. ರಾಜ್ಯದಲ್ಲಿ ಮುಂಗಾರು ಅವಧಿಯಲ್ಲಿ ವಾಡಿಕೆಯಂತೆ ಮಳೆ ಆಗಲು ಇನ್ನೂ ಕೆಲವು ದಿನಗಳು ಬೇಕಾಗಬಹುದು' ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

'ರಾಜ್ಯಕ್ಕೆ ಮೇ 27ಕ್ಕೆ ಮುಂಗಾರು ಪ್ರವೇಶಿಸಲಿದೆ' ಎಂದು ಹವಾಮಾನ ಇಲಾಖೆ ಈ ಹಿಂದೆ ಮುನ್ಸೂಚನೆ ನೀಡಿತ್ತು. ಅವಧಿಗೆ ಮೊದಲೇ ಮುಂಗಾರು ಮಳೆ ಬರುವ ನಿರೀಕ್ಷೆಯಲ್ಲಿ ಕೃಷಿ ಚಟುವಟಿಕೆಗಳೂ ಗರಿಗೆದರಿದ್ದವು. ಈಗ ರಾಜ್ಯದಲ್ಲಿ ಮಳೆಯಾದ ಸ್ಥಳದಲ್ಲಿಯೇ ಧಾರಾಕಾರ ಮಳೆ ಸುರಿದರೆ, ಉಳಿದೆಡೆ ಸಾಧಾರಣ ಮಳೆ ಬೀಳುತ್ತಿದೆ. ರಾಜ್ಯದಾದ್ಯಂತ ಮುಂಗಾರು ಸಿಂಚನವಾಗುವುದು ತಡವಾಗುತ್ತಿದೆ.

ಮಂಗಳೂರಿನ ಪಣಂಬೂರು ಕಡಲ ತೀರದಲ್ಲಿ ಕಾಣಿಸಿದ ಚದುರಿದ ಮೋಡ
–ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

'ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಮುಂಗಾರು ಪೂರ್ವ ಮಳೆ ವಾಡಿಕೆಗೂ ಮೀರಿ ಸುರಿದಿತ್ತು. ಈಗ ಮುಂಗಾರು ಮಾರುತಗಳ ಪ್ರವೇಶ ವಿಳಂಬವಾಗುತ್ತಿದೆ. ಕೇರಳದಲ್ಲೂ ಇದೇ ಸ್ಥಿತಿಯಿದೆ' ಎಂದು ಹವಾಮಾನ ತಜ್ಞ ಡಾ.ಜಿ.ಎಸ್.ಶ್ರೀನಿವಾಸ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜ್ಯದಲ್ಲಿ ಮುಂಗಾರು ಪೂರ್ವದಲ್ಲಿ, ಸರಾಸರಿ 11.5 ಸೆಂ.ಮೀನಷ್ಟು ವಾಡಿಕೆ ಮಳೆ ಸುರಿಯಬೇಕಿತ್ತು. ಆದರೆ, 23.6 ಸೆಂ.ಮೀನಷ್ಟು ಮಳೆಯಾಗಿದೆ ಎಂದು ತಿಳಿಸಿದರು.

ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಹಾಸನ ಹಾಗೂ ಕರಾವಳಿ ಪ್ರದೇಶವಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡದಲ್ಲಿ ಗಾಳಿಯು ಜೋರಾಗಿ ಬೀಸುತ್ತಿದ್ದರೂ ಮಳೆ ಸುರಿಸುವ ಮೋಡಗಳನ್ನು ಹೊತ್ತು ತರುತ್ತಿಲ್ಲ. ಈ ಜಿಲ್ಲೆಗಳಲ್ಲಿ ಬಿರುಸು ಪಡೆಯದೇ ಮುಂಗಾರು ನಿರಾಸೆ ಮೂಡಿಸಿದೆ.

'ಈಗಿನ ಮುನ್ಸೂಚನೆ ಗಮನಿಸಿದರೆ ಮೂರು ದಿನಗಳ ಬಳಿಕ ಮಳೆ ಬಿರುಸು ಪಡೆಯುವ ನಿರೀಕ್ಷೆಯಿದೆ. ಒಳನಾಡು ಜಿಲ್ಲೆಗಳಲ್ಲಿ ಬಿತ್ತನೆ ಚಟುವಟಿಕೆಗೆ ಬೇಕಿರುವಷ್ಟು ಮಳೆಯಾಗಿದೆ. ಕೃಷಿಗೆ ತೊಂದರೆ ಆಗಿಲ್ಲ' ಎಂದು ರೆಡ್ಡಿ ಹೇಳಿದ್ದಾರೆ.

ಕತ್ತೆಗಳೊಂದಿಗೆ ಐಸಿರಿ ಫಾರ್ಮ್ ಮಾಲೀಕ ಶ್ರೀನಿವಾಸ ಗೌಡ –ಪ್ರಜಾವಾಣಿ ಚಿತ್ರ

ಕತ್ತೆ ಸಾಕಾಣಿಕೆ: ರಾಜ್ಯದ ಮೊದಲ ಕೇಂದ್ರ ಆರಂಭ

• ಹರ್ಷ

ಮಂಗಳೂರು: ಬಂಟ್ವಾಳ ತಾಲ್ಲೂಕು ಇರಾ ಗ್ರಾಮ ಪಂಚಾಯಿತಿಯ ಪರ್ಲಡ್ಕ-ದಲ್ಲಿ ರಾಜ್ಯದ ಮೊದಲ ಕತ್ತೆ ಸಾಕಾಣಿಕೆ ಮತ್ತು ತರಬೇತಿ ಕೇಂದ್ರ ಬುಧವಾರ ಉದ್ಘಾಟನೆಗೊಳ್ಳಲಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲವು ವರ್ಷಗಳ ಕಾಲ ದುಡಿದು, ಅನಂತರ ಇರಾದಲ್ಲಿ 'ಐಸಿರಿ ಫಾರ್ಮ್' ಆರಂಭಿಸಿರುವ, ರಾಮನಗರ ಮೂಲದ ಶ್ರೀನಿವಾಸ ಗೌಡ ಅವರು ಈ ಕೇಂದ್ರ ಸ್ಥಾಪಿಸಿದ್ದಾರೆ. ಪ್ರಸಕ್ತ ಈ ಕೇಂದ್ರದಲ್ಲಿ 20 ಕತ್ತೆಗಳಿವೆ. ಅವುಗಳಲ್ಲಿ 12 ಕತ್ತೆಗಳು ಹಾಲು ಕೊಡುತ್ತಿವೆ. ಒಂದು ಕತ್ತೆ ಸಾಧಾರಣವಾಗಿ ಅರ್ಧ ಲೀಟರ್ ಹಾಲು ಕೊಡುತ್ತಿದ್ದು, ನಿತ್ಯ 6ರಿಂದ 7 ಲೀಟರ್ ಹಾಲು ಸಂಗ್ರಹವಾಗುತ್ತಿದೆ.

ಶ್ರೀನಿವಾಸ ಅವರು ಈಗಾಗಲೇ ಖಡಕನಾಥ ಕೋಳಿ, ಕುರಿ ಮತ್ತು ಮೇಕೆ ಸಾಕಾಣಿಕೆ ಮಾಡುತ್ತಿದ್ದಾರೆ.

'ಕತ್ತೆ ಹಾಲಿನಲ್ಲಿ ಕೊಬ್ಬಿನ ಅಂಶ ಹಾಗೂ ಕ್ಯಾಲೊರಿ ಪ್ರಮಾಣ ಕಡಿಮೆ ಇರುತ್ತದೆ. ಜನಸಾಮಾನ್ಯರಿಗೂ ಇದು ಲಭ್ಯವಾಗುವಂತೆ ಮಾಡಲು ಯೋಜನೆ ರೂಪಿಸಿದ್ದೇನೆ. ಸ್ವತಃ ಬಾಟ್ಲಿಂಗ್ ಘಟಕ ಆರಂಭಿಸಿ, 30, 60, 100 ಹಾಗೂ 200 ಮಿ.ಲೀ ಬಾಟಲ್‌ಗಳನ್ನು ಮಾರುಕಟ್ಟೆಗೆ ಬಿಡಲಾಗುವುದು. 30 ಮಿ.ಲೀ ಹಾಲು ಸುಮಾರು ₹150 ದರಕ್ಕೆ ಲಭ್ಯವಾಗಲಿದೆ' ಎಂದು ಶ್ರೀನಿವಾಸಗೌಡ ತಿಳಿಸಿದರು.

'ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಆ್ಯಂಡ್ ವೆಟರ್ನರಿ ಬಯಲಾಜಿಕಲ್ಸ್ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಆರ್.ಎನ್. ಶ್ರೀನಿವಾಸ ಗೌಡ ಅವರಿಂದ ಪ್ರೇರಣೆ ಪಡೆದು ಇದನ್ನು ಆರಂಭಿಸಿದ್ದೇನೆ. ದೇಶದಲ್ಲಿ ಕತ್ತೆಗಳ ಸಂಖ್ಯೆಯಲ್ಲಿ ಶೇ 61.2ರಷ್ಟು ಇಳಿಕೆಯಾಗಿರುವುದನ್ನು ಗಮನಿಸಿದ್ದ ಡಾ. ಶ್ರೀನಿವಾಸ ಗೌಡ ಅವರು, ಕತ್ತೆ ಸಾಕಾಣಿಕೆಯನ್ನು ಉತ್ತೇಜಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದರು. ದೇಶದಲ್ಲಿ ಪ್ರಸಕ್ತ 1.2 ಲಕ್ಷ ಕತ್ತೆಗಳು ಇವೆ' ಎಂದು ಅವರು ತಿಳಿಸಿದರು.

ಗುಜರಾತ್‌ನ (ಹಲರಿ) ಹಾಗೂ ಆಂಧ್ರದ ತಳಿಗಳ ಕತ್ತೆಗಳನ್ನು ಶ್ರೀನಿವಾಸ ಗೌಡ ಅವರು ತಮ್ಮ ಫಾರ್ಮ್‌ನಲ್ಲಿ ಸಾಕುತ್ತಿದ್ದಾರೆ. ಪ್ರಸಕ್ತ 2.5 ಎಕರೆ ವಿಸ್ತೀರ್ಣದಲ್ಲಿ ಐಸಿರಿ ಫಾರ್ಮ್ ಹಬ್ಬಿದೆ.

ಸ್ವ ಉದ್ಯೋಗ ಆರಂಭಿಸಲು ಬಯಸುವ, ಆಸಕ್ತ ಯುವಕರಿಗೆ ಕತ್ತೆ ಸಾಕಾಣಿಕೆ ಬಗ್ಗೆ ಉಚಿತವಾಗಿ ತರಬೇತಿ ನೀಡಲು ಸಹ ಶ್ರೀನಿವಾಸಗೌಡ (ಮೊ.96322 64308) ಮುಂದಾಗಿದ್ದಾರೆ.

ಉತ್ಪನ್ನ ದುಬಾರಿ: 'ಕತ್ತೆ ಹಾಲಿಗೆ ಲೀಟರ್‌ಗೆ ₹5,000ದಿಂದ ₹7,000 ವರೆಗೆ ದರ ಇದೆ. ಮೂತ್ರಕ್ಕೆ ಲೀಟರ್‌ಗೆ ₹500– ₹600 ಹಾಗೂ ಲದ್ದಿಗೆ ಕೆ.ಜಿ.ಗೆ ₹600ರಿಂದ ₹700ರಷ್ಟು ದರ ಇದೆ' ಎಂದು ಶ್ರೀನಿವಾಸ ಗೌಡ ತಿಳಿಸಿದರು.

ಈ ಹಾಲು ಮಧುಮೇಹ ನಿಯಂತ್ರಣ, ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಅಲ್ಲದೇ ಈ ಹಾಲನ್ನು ಸೌಂದರ್ಯವರ್ಧಕ ತಯಾರಿಕೆಗೂ ಬಳಸಲಾಗುತ್ತಿದೆ ಎಂದು ಹೇಳಿದರು.

ಈದ್ಗಾ ಮೈದಾನ: ಹಿಂದೂ ಸಂಘಟನೆಗಳಿಂದ ಬಿಬಿಎಂಪಿಗೆ ಮನವಿ ಸಲ್ಲಿಕೆ

‘ಅನ್ಯ ಕಾರ್ಯಕ್ರಮಕ್ಕೂ ಅವಕಾಶ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್ಗಾ ಮೈದಾನದಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ಕೋರಿ ಮೂರು ಹಿಂದೂಪರ ಸಂಘಟನೆಗಳು ಬಿಬಿಎಂಪಿ ಬಾಗಿಲು ತಟ್ಟಿವೆ.

ಶ್ರೀರಾಮ ಸೇನೆ, ವಿಶ್ವ ಸನಾತನ ಪರಿಷದ್, ವಂದೇ ಮಾತರಂ ಸಮಾಜ ಸೇವಾ ಸಂಸ್ಥೆಗಳು ಬಿಬಿಎಂಪಿ ಪಶ್ಚಿಮ ವಲಯ ಕಚೇರಿಗೆ ಪ್ರತ್ಯೇಕವಾಗಿ ಮನವಿ ಸಲ್ಲಿಸಿವೆ. ‘ಜೂನ್ 21ರಂದು ಯೋಗ ದಿನ, ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವ, ಆಗಸ್ಟ್ 14 ಮತ್ತು 15ರಂದು ಆಜಾದಿ ಕಾ ಅಮೃತ್ ಮಹೋತ್ಸವ ಆಚರಿಸಲು ಅವಕಾಶ ನೀಡಬೇಕು’ ಎಂದು ಕೋರಿವೆ.

‘ಈದ್ಗಾ ಮೈದಾನ ಸಾರ್ವಜನಿಕ ಆಸ್ತಿ. ಸ್ವಾತಂತ್ರ್ಯ ದಿನದಂದು ಧ್ವಜಾರೋಹಣಕ್ಕೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದ್ದೇವೆ. ಅದೇ ಜಾಗದಲ್ಲಿ ಸ್ವಾತಂತ್ರ್ಯ ದಿನ ಆಚರಣೆಗೆ ಮುಸ್ಲಿಂ ಸಮುದಾಯ ಯೋಜನೆ ರೂಪಿಸಿದ್ದರೆ, ನಮ್ಮ ಮನವಿ ಕೈ ಬಿಡುತ್ತೇವೆ’ ಎಂದು ವಿಶ್ವ ಸನಾತನ ಪರಿಷದ್‌ನ ಅಧ್ಯಕ್ಷ ಎಸ್. ಭಾಸ್ಕರನ್ ತಿಳಿಸಿದರು.

‘ಈದ್ಗಾ ಮೈದಾನ ಬಿಬಿಎಂಪಿ ಆಸ್ತಿ. ಪಶ್ಚಿಮ ವಲಯದ ಜಂಟಿ ಆಯುಕ್ತರ ಉಸ್ತುವಾರಿಯಲ್ಲಿ ಈ ಮೈದಾನ ಇದೆ. ಮುಸ್ಲಿಂ ಸಮುದಾಯ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಎರಡು ದಿನಗಳನ್ನು ಹೊರತುಪಡಿಸಿ ಬೇರೆ ದಿನಗಳಲ್ಲಿ ಬೇರೆ ಕಾರ್ಯಕ್ರಮಗಳಿಗೆ ಅನುಮತಿ ನೀಡಲು ಅವಕಾಶ ಇದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ಹರೀಶ್‌ಕುಮಾರ್ ಸೋಮವಾರ ಸ್ಪಷ್ಟಪಡಿಸಿದ್ದಾರೆ.

ಈದ್ಗಾ ಮೈದಾನ

ಪೊಲೀಸರಿಗೆ ಈ ರೀತಿಯ ಮನವಿಗಳು ಬರುತ್ತಿದ್ದರೂ, ಕೋಮು ಗಲಭೆ ನಡೆಯುವ ನಿರೀಕ್ಷೆಯಿಂದ ಅನುಮತಿ ನಿರಾಕರಿಸುತ್ತಿದ್ದರು. ಚಾಮರಾಜಪೇಟೆಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಆರ್‌ಎಸ್‌ಎಸ್ 2013ರಲ್ಲಿ ಈದ್ಗಾ ಮೈದಾನದ ಮೂಲಕ ಮೆರವಣಿಗೆ ನಡೆಸಲು ಅವಕಾಶ ಕೇಳಿತ್ತು. ಕಾನೂನು ಸುವ್ಯವಸ್ಥೆ ಹದಗೆಡುವ ಸಾಧ್ಯತೆ ಇರುವುದರಿಂದ ಪೊಲೀಸರು ಅನುಮತಿ ನಿರಾಕರಿಸಿದ್ದರು.

‘ಆಟದ ಮೈದಾನದಲ್ಲಿ ಕ್ರೀಡಾ ಚಟುವಟಿಕೆ ಬದಲು ಯಾವುದೇ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಅವಕಾಶ ನೀಡಿದರೆ ಕೋಮು ಸೌಹಾರ್ದಕ್ಕೆ ಧಕ್ಕೆ ಆಗಬಹುದು. ನಾವು ಪ್ರತಿವರ್ಷ ಈ ಜಾಗದಲ್ಲಿ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ಆಚರಿಸುತ್ತೇವೆ. ಪ್ರತ್ಯೇಕವಾಗಿ ರಾಷ್ಟ್ರಧ್ವಜ ಹಾರಿಸುವ ಬದಲು ನಮ್ಮೊಂದಿಗೆ ಸೇರಿಕೊಳ್ಳಲಿ’ ಎಂದು ಈದ್ಗಾ ಮೈದಾನ ಮತ್ತು ಅಂಜುಮನ್-ಎ-ಇಸ್ಲಾಮಿಯಾದ ಪ್ರಧಾನ ಕಾರ್ಯದರ್ಶಿ ಅಬ್ದುಲ್ ರಜಾಕ್ ಖಾನ್ ಹೇಳಿದರು.

ಮಾಲೀಕತ್ವಕ್ಕಾಗಿ ನಡೆದಿತ್ತು ವ್ಯಾಜ್ಯ

ಈ ಜಾಗದ ಮಾಲೀಕತ್ವ ವಿವಾದ ಹಲವು ವರ್ಷಗಳಿಂದಲೂ ಇದೆ. 1952ರಲ್ಲಿ ರುಕ್-ಉಲ್-ಮುಲ್ಕ್ ಎಸ್. ಅಬ್ದುಲ್ ವಾಜಿದ್ ಎಂಬುವರು ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅವರ ಪರವಾಗಿಯೇ ನ್ಯಾಯಾಲಯ ಆದೇಶ ನೀಡಿತ್ತು.

1959ರಲ್ಲಿ ಮೈಸೂರು ಹೈಕೋರ್ಟ್, ನಗರ ಪಾಲಿಕೆ ಪರ ತೀರ್ಪು ನೀಡಿತ್ತು. 1962ರಲ್ಲಿ ಅವರು ಸುಪ್ರೀಂ ಕೋರ್ಟ್ ಮೊರೆಹೋದರು. ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

ಈದ್ಗಾ ಮೈದಾನದಲ್ಲಿ ಸಾರ್ವಜನಿಕ ಸಭೆ-ಸಮಾರಂಭ ನಡೆಸಲು ಅನುಮತಿ ಕೋರಿ ಇದುವರೆಗೂ ಯಾವುದೇ ಅರ್ಜಿ ಬಂದಿಲ್ಲ. ಬಂದರೆ ಕಾನೂನಿನಡಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಪ್ರತಾಪ್ ರೆಡ್ಡಿ
ನಗರ ಪೊಲೀಸ್ ಕಮಿಷನರ್

‘ಆಟದ ಮೈದಾನದ ಬಲ ಭಾಗದಲ್ಲಿ ದಶಕಗಳಿಂದ ಈದ್ಗಾ ಗೋಡೆ ಇದೆ. ಆದ್ದರಿಂದ ಈ ಜಾಗದಲ್ಲಿ ಯಾವುದೇ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವುದನ್ನು ಮುಸ್ಲಿಂ ಸಮುದಾಯ ವಿರೋಧಿಸುತ್ತದೆ’ ಎಂದರು.

‘ಕರ್ನಾಟಕ ಧಾರ್ಮಿಕ ಕಟ್ಟಡಗಳ ಸಂರಕ್ಷಣೆ ಕಾಯ್ದೆ-2021 ಪ್ರಕಾರ ಈದ್ಗಾ ಗೋಡೆಯನ್ನು ಸಂರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ. ಸರ್ಕಾರಿ ಅಥವಾ ಖಾಸಗಿ ಜಾಗದಲ್ಲಿದ್ದರೂ ಅದನ್ನು ಉಳಿಸಬೇಕಾಗುತ್ತದೆ. ನೂರಾರು ದೇವಸ್ಥಾನಗಳು ಸರ್ಕಾರದ ಜಾಗದಲ್ಲಿವೆ. ಸರ್ಕಾರಿ ಜಾಗ ಎಂಬ ಕಾರಣಕ್ಕೆ ನಾವು ದೇವಸ್ಥಾನದ ಬಳಿ ಸಾಮೂಹಿಕ ಪ್ರಾರ್ಥನೆ ಮಾಡಲು ಹೋಗುವುದಿಲ್ಲ’ ಎಂದು ಅವರು ಹೇಳಿದರು.

ಎಪಿಪಿ ಹುದ್ದೆ ಭರ್ತಿಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಖಾಲಿಯಿರುವ 205 ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ (ಎಪಿಪಿ) ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಲು ಸರ್ಕಾರಕ್ಕೆ ಹೈಕೋರ್ಟ್ ಆರು ವಾರಗಳ ಗಡುವು ವಿಧಿಸಿದೆ.

ಈ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಎರಡು ತಿಂಗಳು ಕಾಲಾವಕಾಶ ಕೊಟ್ಟರೆ ಪರೀಕ್ಷೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಕೋರಿದರು. ಇದಕ್ಕೆ ನ್ಯಾಯಪೀಠ, ‘ಈಗಾಗಲೇ ಸಾಕಷ್ಟು ಹೆಚ್ಚಿನ ಸಮಯ ನೀಡಲಾಗಿದೆ. ಆರು ವಾರಗಳಲ್ಲಿ ಪರೀಕ್ಷೆ ನಡೆಸಿ, ಫಲಿತಾಂಶ ಪ್ರಕಟಿಸಬೇಕು. ತಪ್ಪಿದರೆ ಪ್ರಾಸಿಕ್ಯೂಷನ್ ಇಲಾಖೆಯ ನಿರ್ದೇಶಕರು ಮುಂದಿನ ವಿಚಾರಣೆಗೆ ಖುದ್ದು ಹಾಜರಿರಬೇಕು’ ಎಂದು ಸೂಚಿಸಿ ವಿಚಾರಣೆ ಮುಂದೂಡಿದೆ.

₹20 ಕೋಟಿ ಮೌಲ್ಯದ ಬಿಡಿಎ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಿ, ₹20 ಕೋಟಿ ಮೌಲ್ಯದ ಆಸ್ತಿಯನ್ನು ಬಿಡಿಎ ವಶಕ್ಕೆ ಪಡೆದಿದೆ.

‘ಇಂದಿರಾನಗರ 2ನೇ ಹಂತದಲ್ಲಿನ ಬಿನ್ನಮಂಗಲ ಸರ್ವೆ ನಂಬರ್ 13ರಲ್ಲಿ 11 ಗುಂಟೆ ಜಾಗದಲ್ಲಿ ಖಾಸಗಿಯವರು ಮೂರು ಶೆಡ್ ನಿರ್ಮಿಸಿಕೊಂಡಿದ್ದರು. ಸುಮಾರು ₹18 ಕೋಟಿ ಮೌಲ್ಯದ ಆಸ್ತಿ ಇದಾಗಿದ್ದು, ಹಲವು ಬಾರಿ ಮುನ್ನೆಚ್ಚರಿಕೆ ನೀಡಿದ್ದರೂ ಒತ್ತುವರಿದಾರರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಸುಪ್ರೀಂ ಕೋರ್ಟ್ ಬಿಡಿಎ ಪರ ತೀರ್ಪು ನೀಡಿತ್ತು. ಮಂಗಳವಾರ ವಿಶೇಷ ಕಾರ್ಯಪಡೆ ಸಿಬ್ಬಂದಿ ಶೆಡ್ ತೆರವುಗೊಳಿಸಿ ಆಸ್ತಿ ವಶಕ್ಕೆ ಪಡೆದರು’ ಎಂದು ಬಿಡಿಎ ತಿಳಿಸಿದೆ.

ಮತ್ತೊಂದು ಪ್ರಕರಣದಲ್ಲಿ ಲೀಲಾ ಪ್ಯಾಲೆಸ್ ಹೋಟೆಲ್ ಹಿಂಭಾಗ 1,600 ಚದರಡಿ ಜಾಗದಲ್ಲಿ ಹೋಟೆಲ್‌ನವರು ಅಕ್ರಮವಾಗಿ ಕಾಂಪೌಂಡ್ ನಿರ್ಮಿಸಿದ್ದರು. ಅದನ್ನು ತೆರವುಗೊಳಿಸಿ ₹2 ಕೋಟಿ ಮೌಲ್ಯದ ಆಸ್ತಿ ವಶಕ್ಕೆ ಪಡೆಯಲಾಗಿದೆ ಎಂದು ವಿವರಿಸಿದೆ.

‘ಬಿಡಿಎ ಆಸ್ತಿ ಒತ್ತುವರಿ ತೆರವುಗೊಳಿಸಿ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಈ ಜಾಗಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುತ್ತಿದ್ದು, ಇದರಿಂದ ಬಿಡಿಎಗೆ ಹೆಚ್ಚಿನ ವರಮಾನ ಬರುತ್ತಿದೆ’ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಹೇಳಿದರು.

ಧ್ವನಿವರ್ಧಕ ಬಳಕೆ: 959 ಅರ್ಜಿ, 121 ಅನುಮತಿ

ಬೆಂಗಳೂರು: ಮಸೀದಿ, ಮಂದಿರ ಹಾಗೂ ಚರ್ಚ್‌ಗಳಲ್ಲಿ ಧ್ವನಿವರ್ಧಕ ಬಳಕೆಗೆ ಅನುಮತಿ ಕೋರಿ 959 ಅರ್ಜಿ ಸಲ್ಲಿಕೆಯಾಗಿದ್ದು, ಈ ಪೈಕಿ 121 ಅರ್ಜಿ ವಿಲೇವಾರಿ ಮಾಡಿ ಪೊಲೀಸರು ಅನುಮತಿ ನೀಡಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ‘ಆಯಾ ಉಪವಿಭಾಗದ ಎಸಿಪಿ ಕಚೇರಿಗಳಿಗೆ ಸಲ್ಲಿಕೆಯಾಗುತ್ತಿರುವ ಅರ್ಜಿಗಳನ್ನು ಕಾನೂನಿನಡಿ ಪರಿಶೀಲಿಸಿ ಅನುಮತಿ ನೀಡಲಾಗುತ್ತಿದೆ’ ಎಂದರು.

‘ನ್ಯಾಯಾಲಯ ಆದೇಶ ಹಾಗೂ ಸರ್ಕಾರದ ಸೂಚನೆಗಳನ್ನು ಪರಿಗಣಿಸಿ 121 ಅರ್ಜಿಗಳನ್ನು ಸದ್ಯಕ್ಕೆ ವಿಲೇವಾರಿ ಮಾಡಲಾಗಿದೆ. ಉಳಿದ ಅರ್ಜಿಗಳ ಪರಿಶೀಲನೆ ಪ್ರಗತಿಯಲ್ಲಿದೆ’ ಎಂದು ತಿಳಿಸಿದರು.

WANTED
Marketing Executives
For a Leading Advertising Agency in Bangaluru
Innovative Advanced Media Management Pvt Ltd
CALL-080 68175212 E-mail : info@iampl.com
192 3rd floor Sri Sathya Arcade Service Road - West of Chord Road
2nd Stage Mahalakshmipuram Bengaluru 560086

hospitality
INCREDIBLE HOSPITALITY | I LOVE FOOD | INCREDIBLE FAIRS AND MEDIA
WORLD OF HOSPITALITY
BUSINESS EVENTS FOR HORECA PROFESSIONALS
8 9 10 JUNE 2022
TRIPURA VASINI PALACE GROUNDS
BENGALURU, INDIA
ದಕ್ಷಿಣ ಭಾರತದ
ಅತ್ಯಂತ ಸಮಗ್ರವಾದ B2B ಆಹಾರ, ಪಾನೀಯ ಮತ್ತು ಹಾಸ್ಪಿಟಾಲಿಟಿ ಪ್ರದರ್ಶನ
ಪ್ರತಿಯೊಬ್ಬರೂ
ಕಾಯುತ್ತಿರುವ ಪ್ರದರ್ಶನದ ಸಮಯ
200+ EXHIBITORS | 8000+ HoReCa TRADE PROFESSIONALS | 200+ HOSTED BUYERS | 10+ SPECIAL EVENTS & ENGAGEMENTS

RSVP : RAJAN NAIR - 9821076065 | E-MAIL: rajan@worldofhospitality.in | www.worldofhospitality.in
* This is a Trade Show, Children below 18 years of age are not allowed. Rights of admission reserved with Incredible Fairs & Media Pvt Ltd.

ಮಹಿಳೆಯರ ಆರೈಕೆಯಲ್ಲಿ ‘ಲವಣ ತೈಲಂ’
ಕರಿಣ
ವ್ಯಾಯಾಮಗಳಿಲ್ಲದೆ ಮತ್ತು ಪಥ್ಯದ ಆಹಾರಕ್ರಮವಿಲ್ಲದೆ
ಆಯುರ್ವೇದೀಯ ಪರಿಹಾರ


ಆಯು:ಕೇರ್
ಲವಣ ತೈಲಂ

ಆಯುರ್ವೇದಿಕ್ ಫಿಗರ್ ಕೇರ್
1999ರಿಂದಲೂ ಕೇರಳಾದ್ಯಂತ ಆಯುರ್‌ಕೇರ್ ಕೇಂದ್ರಗಳ ಮೂಲಕ ಬಹಳಷ್ಟು ಜನರಲ್ಲಿ ಇದು ಪರಿಣಾಮಕಾರಿ ಎಂದು ಸಾಬೀತಾಗಿದೆ.
ಲವಣ ತೈಲಂನಲ್ಲಿರುವ ಪ್ರಮುಖ ಪದಾರ್ಥವಾದ ಕಲ್ಲುಪ್ಪು, ಹೆಚ್ಚುವರಿ ಹೊರಾಂಗಣ ಜಲಾಂಶವನ್ನು ಹೀರಿ ಸ್ನಾಯುಗಳನ್ನು ಬಲಪಡಿಸುತ್ತದೆ. ಚರ್ಮದ ಕೆಳಗಿರುವ ಕೊಬ್ಬಿನ ಪದರವನ್ನು ತೆಳ್ಳಗಾಗಿಸಿ ಕಳೆದುಹೋದ ಆಕಾರವನ್ನು ಮರುಪಡೆಯಲು ಸಹಾಯ ಮಾಡುತ್ತದೆ. ಇದನ್ನು ನಿಯಮಿತವಾಗಿ ಬಳಸುವುದರಿಂದ ಅಧಿಕ ಮೈಭಾರವನ್ನು ಇಳಿಸಿಕೊಳ್ಳಬಹುದು.
ಅತಿಯಾದ ಹೊಟ್ಟೆಯ ಆಕಾರ ಮತ್ತು ಸೌಂದರ್ಯ ಕಾಪಾಡಿಕೊಳ್ಳಲು ದಿನಾಲೂ ಲವಣ ತೈಲದಿಂದ ಮಸಾಜ್ ಮಾಡಿ. ಹೆರಿಗೆಯ ನಂತರ ಹೊಟ್ಟೆಯನ್ನು ತಗ್ಗಿಸಲು ಇದು ಉತ್ತಮವಾಗಿದೆ.
ಉಪಯೋಗಿಸುವ ಕ್ರಮ : ತೈಲವನ್ನು ಕೈಗೆ ಸುರಿದುಕೊಂಡು ಹೊಟ್ಟೆಯ ಮೇಲೆ ಕೋಮಲವಾಗಿ ತೀಡಿ. ಕನಿಷ್ಠ 15 ನಿಮಿಷಗಳ ಬಳಿಕ ಬೆಚ್ಚಗಿನ ನೀರಿನ ಶಾಖ ಅಥವಾ ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದನ್ನು ಪುರುಷರು ಸಹ ಬಳಸಬಹುದು.
ಎಲ್ಲಾ ಆಲೋಪಥಿಕ್-ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್, ಸೂಪರ್ ಮಾರ್ಕೆಟ್ ಹಾಗೂ ಲೇಡೀಸ್ ಸ್ಟೋರ್ಸ್‌ನಲ್ಲಿ ಲಭ್ಯವಿದೆ.
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ
A & J Health Care, Bangalore
For a Healthy Society
Ph: 8762226000, 9243112373.



ACTIVA
ನಿಂತು ಸಾಗುವುದು ನಮಗೆ ತಿಳಿಯದು, ಸುಸ್ತು ಎನ್ನುವುದು ನಮಗಿಲ್ಲ, ಮುಂದೆ ಸಾಗುತ್ತಲೇ ಇರುತ್ತೇವೆ. ಅದೇ ಕಾರಣದಿಂದ ಇಂದು ನಮ್ಮ ದೇಶ ಮತ್ತೆ ತನ್ನ ಕಾಲ ಮೇಲೆ ನಿಲ್ಲುತ್ತಿದೆ. ಹಾಗಿದ್ದರೆ ಬನ್ನಿ ಇಂದು ನಾವೆಲ್ಲರೂ ಭಾರತದ ಎರಡು ಚಕ್ರಗಳಾಗಿ ಭಾರತ ಮೇಲೆ ಏಳುತ್ತಿರುವುದು ಮಾತ್ರವಲ್ಲ, ಮತ್ತೆ ಗಗನದೆತ್ತರದಲ್ಲಿ ಹಾರುತ್ತಿದೆ ಎನ್ನುವುದನ್ನು ತೋರಿಸೋಣ.
ನೀವು ಮತ್ತು Activa, ಭಾರತದ ಎರಡು ಚಕ್ರಗಳು.

ಗರಿಷ್ಠ ಕ್ಯಾಶ್‌ಬ್ಯಾಕ್ ₹5000# ವರೆಗೆ
ಕಡಿಮೆ ಡೌನ್ ಪೇಮೆಂಟ್ ₹5999*
ಬಡ್ಡಿ ದರ 8.99%*
HONDA joyclub
ಡೀಲರ್ ವಿಚಾರಣೆಗಳಿಗಾಗಿ ವಾಟ್ಸ್‌ಆಪ್ ಮಾಡಿ 7230032200 ಅಥವಾ QR ಕೋಡ್ ಸ್ಕ್ಯಾನ್ ಮಾಡಿ
1. ಇಯರ್‌ಫೋನ್ ಕನೆಕ್ಟ್ ಮಾಡಿ
2. QR Code ಸ್ಕ್ಯಾನ್ ಮಾಡಿ
3. ವೀಡಿಯೋ ಆನಂದಿಸಿ
ಹೆಚ್ಚಿನ ಮಾಹಿತಿಗಾಗಿ 7230032200 ಗೆ ಮಿಸ್ ಕಾಲ್ ನೀಡಿ.
BOOK ONLINE NOW! www.honda2wheelersindia.com
CLICK BOOK RELAX Honda 2Wheelers BOOK NOW
#ನಮೂದಿಸಿದ ಕ್ಯಾಶ್‌ಬ್ಯಾಕ್ ಕೊಡುಗೆಯು ಕನಿಷ್ಠ ವಹಿವಾಟು ರೂ. 30000 ಮೇಲೆ 5% ಆಗಿದ್ದು, ರೂ. 5000 ವರೆಗೆ ಇರುತ್ತದೆ ಮತ್ತು ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್‌ಗೆ ಕಾರ್ಡ್ ವಿತರಕರು/ಬ್ಯಾಂಕ್‌ಗಳ ನೀತಿ ಪ್ರಕಾರ ಆಯ್ದ ಕ್ರೆಡಿಟ್ ಕಾರ್ಡ್‌ಗಳ ಮೂಲಕ EMI ವಹಿವಾಟಿನ ಮೇಲೆ ಅನ್ವಯಿಸಲಾಗುತ್ತದೆ. ಕೊಡುಗೆ ಮಾನ್ಯತೆಯು 1 ಏಪ್ರಿಲ್ 2022 ರಿಂದ 30 ಜೂನ್ 2022 ರ ವರೆಗೆ ಇರುತ್ತದೆ. *ಹಣಕಾಸು ಸ್ಕೀಮ್ ಕೊಡುಗೆಗಳು ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಆಯ್ದ ಪ್ರೊಫೈಲ್‌ಗಳಿಗೆ ಆಯ್ದ ಮಾಡೆಲ್‌ಗಳ ಮೇಲೆ ಆಯ್ದ ಅದ್ಯತೆಯ ಹಣಕಾಸು ಪಾಲುದಾರರ ಮೂಲಕ ಲಭ್ಯವಿದೆ ಮತ್ತು ಇದು ಹಣಕಾಸು ಕಂಪನಿ ಪಾಲಿಸಿಗೆ ಒಳಪಟ್ಟಿದೆ. ಆಯ್ದ ಡೀಲರ್‌ಶಿಪ್‌ಗಳಲ್ಲಿ ಸ್ಕೀಮ್‌ಗಳು 30 ಜೂನ್ 2022 ರ ವರೆಗೆ ಮಾತ್ರ ಲಭ್ಯವಿದೆ ಮತ್ತು ಮೊದಲು ನೋಟಿಸ್ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಯಾವುದೇ ಎರಡು ಕೊಡುಗೆಗಳನ್ನು ಒಟ್ಟಾಗಿ ಸೇರಿಸಲಾಗದು. ಕ್ರಿಯಾಶೀಲ ಚಿತ್ರಣದಲ್ಲಿ ಬಳಸಿದ ವಿವಿಧ ವೃತ್ತಿಯ ಚಿತ್ರಗಳು ಪ್ರತಿನಿಧಿತ್ವದ ಉದ್ದೇಶಕ್ಕಾಗಿ ಮಾತ್ರವಾಗಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.
Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda2wheelersindia.com
Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 25320623, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397; Haiku Honda - **DOMLUR:** 49656565, 9342432156; **INDIRANAGAR:** 9343796289, 080 - 41133737; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BANNERAGHATTA RD:** 08068818881; **BTM LAYOUT:** 7353252007; **KANAKAPURA RD:** 08068818881; **PUTTENAHALLI:** 08068818881; **GOTTIGERE:** 08068818881; VFM Honda - **KR PURAM:** 49499299, 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 8105597877, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 9731414444.
For Bulk/Institutional enquiries, please write us at: institutionalsales@honda2wheelersindia.com

ಪಿಎಸ್ಐ ಅಕ್ರಮ: ಸಿಐಡಿ ಕಸ್ಟಡಿಗೆ ದರ್ಶನ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅಕ್ರಮ ಆರೋಪ: 3 ಪಿಎಸ್ಐಗಳು ನ್ಯಾಯಾಲಯಕ್ಕೆ ಹಾಜರು
- ಮಧ್ಯವರ್ತಿಗಳಿಗೆ ಲಂಚ ನೀಡಿದ ಆರೋಪ

ಬೆಂಗಳೂರು: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಅಭ್ಯರ್ಥಿ ದರ್ಶನ್ ಗೌಡ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಸಿಐಡಿ ಅಧಿಕಾರಿಗಳು ಮುಂದಿನ 14 ದಿನಗಳವರೆಗೆ ಕಸ್ಟಡಿಗೆ ಪಡೆದಿದ್ದಾರೆ.

ಯಲಹಂಕ ನ್ಯೂ ಟೌನ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಸೋಮವಾರ ಬಂಧಿಸಲಾಗಿದ್ದ ದರ್ಶನ್ ಗೌಡ ಅವರನ್ನು ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ಸಿಐಡಿ ಅಧಿಕಾರಿಗಳು, ದರ್ಶನ್ ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ಆರಂಭಿಸಿದ್ದಾರೆ.

ರಾಮಮೂರ್ತಿನಗರ ಹಾಗೂ ಕೋರಮಂಗಲ ಠಾಣೆಯಲ್ಲೂ ಪ್ರತ್ಯೇಕ ಎಫ್ಐಆರ್‌ಗಳು ದಾಖಲಾಗಿವೆ. ಈ ಪ್ರಕರಣದಲ್ಲಿ ಆರೋಪಿಗಳಾದ ಕಲಾಪಿಸಾಬ್, ಠಾಣೆ ಹೆಡ್ ಕಾನ್‌ಸ್ಟೆಬಲ್ ಎಚ್.ಪಿ. ಹರೀಶ್, ನೆಲಮಂಗಲ ಠಾಣೆ ಕಾನ್‌ಸ್ಟೆಬಲ್ ಎಚ್.ಎ. ಮೋಹನ್ ಕುಮಾರ್ ಹಾಗೂ ದಿಲೀಪ್‌ಕುಮಾರ್ ಅವರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಮೂವರನ್ನೂ ಪೊಲೀಸರೇ ಸದ್ಯಕ್ಕೆ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

'ಬಂಧಿತ ಆರೋಪಿಗಳು, ಮಧ್ಯವರ್ತಿಗಳ ಮೂಲಕ ಲಕ್ಷಾಂತರ ರೂಪಾಯಿ ಹಣ ನೀಡಿದ್ದರು. ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿ ಜೊತೆ ಶಾಮೀಲಾಗಿ, ಒಎಂಆರ್ ಪ್ರತಿ ತಿದ್ದುಪಡಿ ಮಾಡಿ ಅಕ್ರಮವಾಗಿ ಆಯ್ಕೆಯಾಗಿದ್ದರು. ಈ ಎಲ್ಲ ಅಂಶಗಳನ್ನು ಪುರಾವೆ ಸಮೇತ ನ್ಯಾಯಾಲಯಕ್ಕೆ ತಿಳಿಸಿ ಆರೋಪಿ ದರ್ಶನ್‌ನನ್ನು ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಉಳಿದ ಮೂವರು ಆರೋಪಿಗಳನ್ನು ಬುಧವಾರ ಅಥವಾ ಗುರುವಾರ ಕಸ್ಟಡಿಗೆ ಪಡೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದೂ ತಿಳಿಸಿವೆ.

ವಿಚಾರಣೆ ನಡೆಸಿ, ನೋಟಿಸ್: 'ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿಯು ಬಂಧಿತ ಆರೋಪಿಗಳಿಂದ ಹಣ ಪಡೆದಿರುವ ಮಾಹಿತಿ ಇದೆ. ಆರೋಪಿಗಳ ವಿಚಾರಣೆ ನಡೆಸಿದ ಬಳಿಕವೇ ಮತ್ತಷ್ಟು ಮಂದಿಗೆ ನೋಟಿಸ್ ನೀಡಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

'ಅಕ್ರಮ ಎಸಗಿದ 22 ಅಭ್ಯರ್ಥಿಗಳ ವಿರುದ್ಧ ಈ ಹಿಂದೆ ಹೈಗ್ರೌಂಡ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಲಾಗಿತ್ತು. ಈ ಪ್ರಕರಣದಲ್ಲಿ ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ನೌಕರರನ್ನು ಬಂಧಿಸಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದು, ಅಗತ್ಯವೆನಿಸಿದರೆ ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆಯಲಾಗುವುದು' ಎಂದೂ ತಿಳಿಸಿವೆ.

'ಮಾಫಿಯಾ ಜೊತೆ ಸರ್ಕಾರ ಶಾಮೀಲು'

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರ ಗೊಬ್ಬರವನ್ನು ಕಾಳಸಂತೆಯಲ್ಲಿ ಮಾರಲು ಬಿಟ್ಟಿದೆ. ರೈತರಿಗೆ ಕಲಬೆರಕೆ ಗೊಬ್ಬರ ನೀಡಲಾಗುತ್ತಿದೆ. ದೊಡ್ಡ ಮಾಫಿಯಾ ಜೊತೆ ಈ ಸರ್ಕಾರ ಶಾಮೀಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರೈತ ಮುಖಂಡರು ಈ ಸಮಸ್ಯೆಗಳ ಬಗ್ಗೆ ಪ್ರಜಾತಂತ್ರವಾಗಿ ಹೋರಾಡಲು ಸಜ್ಜಾಗಬೇಕು. ರೈತರ ಹೋರಾಟಕ್ಕೆ ಪಕ್ಷ ಕೈ ಜೋಡಿಸಲಿದೆ' ಎಂದರು.

'ಬಿತ್ತನೆ ಬೀಜದಿಂದ ರಸಗೊಬ್ಬರದವರೆಗೆ ರೈತರಿಗೆ ಪ್ರತಿ ಹಂತದಲ್ಲಿ ಮೋಸ ಮಾಡಲಾಗುತ್ತಿದೆ. ಶೇ 40 ಕಮಿಷನ್ ಜೊತೆಗೆ ಶೇ 50 ರಷ್ಟು ಹೆಚ್ಚಿನ ಬೆಲೆಗೆ ಗೊಬ್ಬರ ಮಾರಾಟ ಮಾಡಲಾಗುತ್ತಿದೆ. ಬೇರೆ ದೇಶದಲ್ಲಿ ಯುದ್ಧ ನಡೆಯುತ್ತಿದೆ ಎಂಬ ನೆಪ ಹೇಳಿ, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆ ಮೂಲಕ ವಂಚಿಸಿದ ರೀತಿ ರಸಗೊಬ್ಬರದಲ್ಲೂ ಲೂಟಿ ಮಾಡಲಾಗುತ್ತಿದೆ. ಖಾಸಗಿ, ಬೇರೆ ಸಂಸ್ಥೆಗಳ ಮೂಲಕ ರಸಗೊಬ್ಬರವನ್ನು ಕಾಳಸಂತೆಯಲ್ಲಿ ಸರ್ಕಾರ ಮಾರಾಟ ಮಾಡುತ್ತಿದೆ' ಎಂದರು.

ವ್ಯಾಪಾರಿ, ಜನರ ವೇಷ ಧರಿಸಿ ಕಾರ್ಯಾಚರಣೆ

ಉಗ್ರನ ಖಚಿತತೆಗೆ ನಿರಂತರ ಗಸ್ತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಉಗ್ರನ ಬಗ್ಗೆ ಜಮ್ಮು-ಕಾಶ್ಮೀರ ಪೊಲೀಸರಿಂದ ಮಾಹಿತಿ
- ತಾಲಿಬ್ ಮೇಲೆ ಹೆಚ್ಚಿನ ನಿಗಾ ವಹಿಸಿದ್ದ ಪೊಲೀಸರು

ಬೆಂಗಳೂರು: 'ಮಸೀದಿ ಪಕ್ಕದ ಮನೆಯಲ್ಲಿ ಉಗ್ರ ನೆಲೆಸಿದ್ದಾನೆ' ಎಂಬ ಮಾಹಿತಿ ಬರುತ್ತಿದ್ದಂತೆ ಗುಪ್ತದಳ ಹಾಗೂ ಪೊಲೀಸ್ ಸಿಬ್ಬಂದಿ ಮೇ 28ರಿಂದಲೇ ಹಗಲು-ರಾತ್ರಿ ಗಸ್ತು ತಿರುಗಲಾರಂಭಿಸಿದ್ದರು. ಉಗ್ರ ತಾಲಿಬ್ ಎಂಬುದು ಖಚಿತವಾಗುತ್ತಿದ್ದಂತೆ ಬಂಧಿಸಿದ್ದಾರೆ.

ಓಕಳಿಪುರ ಮಸೀದಿ ಹಾಗೂ ಸುತ್ತಮುತ್ತ ಪೊಲೀಸರು ನಡೆಸಿದ ಗಸ್ತಿನಿಂದಾಗಿ ಉಗ್ರ ಬಲೆಗೆ ಬಿದ್ದಿದ್ದು, ಆತನ ಬಂಧನದಿಂದಾಗಿ ಸದ್ಯ ಸ್ಥಳೀಯರಲ್ಲಿ ಆತಂಕ ಉಂಟಾಗಿದೆ.

ಕಾರ್ಯಾಚರಣೆ ಬಗ್ಗೆ ಮಾತನಾಡಿದ ಪೊಲೀಸ್ ಅಧಿಕಾರಿಯೊಬ್ಬರು, 'ಜಮ್ಮುವಿನಿಂದ ತಲೆಮರೆಸಿಕೊಂಡಿದ್ದ ಉಗ್ರ ತಾಲಿಬ್ ಬೆಂಗಳೂರಿನಲ್ಲಿರುವ ಮಾಹಿತಿ ಜಮ್ಮು-ಕಾಶ್ಮೀರ ಪೊಲೀಸರಿಂದ ಗೊತ್ತಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಹಾಗೂ ಪೊಲೀಸ್ ಕಮಿಷನರ್ ಗುಪ್ತದಳದ ಸಿಬ್ಬಂದಿ ಹಾಗೂ ಪೊಲೀಸರ ವಿಶೇಷ ತಂಡ ರಚಿಸಿ ಕಾರ್ಯಾಚರಣೆಗೆ ಇಳಿಸಿದ್ದರು' ಎಂದರು.

ಉಗ್ರ ತಾಲಿಬ್ ನೆಲೆಸಿದ್ದ ಓಕಳಿಪುರ ಮಸೀದಿ ಬಳಿಯ ಮನೆ

ನಕಲಿ ದಾಖಲೆ ನೀಡಿ ಸಿಮ್ ಕಾರ್ಡ್

'ನಗರದ ವ್ಯಕ್ತಿಯೊಬ್ಬ ನಕಲಿ ದಾಖಲೆ ಸೃಷ್ಟಿಸಿ ಸಿಮ್ ಕಾರ್ಡ್ ಖರೀದಿಸಿ, ಉಗ್ರ ತಾಲಿಬ್‌ಗೆ ನೀಡಿದ್ದ. ಅದೇ ಸಿಮ್‌ಕಾರ್ಡ್‌ನಿಂದ ಜಮ್ಮುವಿಗೆ ಕರೆಗಳು ಹೋಗಿದ್ದವೆಂಬ ಮಾಹಿತಿ ಇದೆ. ಸಿಮ್ ಕಾರ್ಡ್ ಕೊಟ್ಟವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಳೀಯರಲ್ಲಿ ಭಯ: ಉಗ್ರ ತಾಲಿಬ್ ಸ್ಥಳೀಯರ ಜೊತೆ ಚೆನ್ನಾಗಿದ್ದ. ಮಸೀದಿ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ. ಅಡುಗೆ ಮಾಡುವುದು ಹಾಗೂ ಇತರೆ ಕೆಲಸಗಳಲ್ಲೂ ಮುಂಚೂಣಿಯಲ್ಲಿರುತ್ತಿದ್ದ. ಆತ ಉಗ್ರ ಎಂಬುದನ್ನು ಕೇಳಿ ಭಯವಾಗುತ್ತಿದೆ' ಎಂದು ಸ್ಥಳೀಯರೊಬ್ಬರು ಹೇಳಿದರು.

'ತಾರಿಕ್ ಹೆಸರಿನಿಂದ ಸ್ಥಳೀಯರಿಗೆ ಪರಿಚಿತನಾಗಿದ್ದ. ಸದ್ಯ ಮನೆ ಹಾಗೂ ಮಸೀದಿ ಬಳಿ ಪೊಲೀಸರ ಭದ್ರತೆ ಇದೆ' ಎಂದೂ ತಿಳಿಸಿದರು.

'ಶ್ರೀರಾಮಪುರ ಠಾಣೆ ವ್ಯಾಪ್ತಿಯ ಓಕಳಿಪುರ ಮಸೀದಿಗೆ ಹೊಂದಿಕೊಂಡು ತಾಲಿಬ್ ಮನೆ ಇತ್ತು. ಹೀಗಾಗಿ, ಮಸೀದಿ ಸುತ್ತಮುತ್ತ ಗಸ್ತು ಹೆಚ್ಚಿಸುವಂತೆ ಠಾಣೆ ಸಿಬ್ಬಂದಿಗೆ ಸೂಚಿಸಲಾಗಿತ್ತು. ತಾಲಿಬ್ ಫೋಟೊ ತೋರಿಸಿ, ಆತನ ಮೇಲೂ ನಿಗಾ ಇರಿಸುವಂತೆ ಹೇಳಲಾಗಿತ್ತು. ವಿಶೇಷ ತಂಡವೂ ಸಾರ್ವಜನಿಕರು ಹಾಗೂ ವ್ಯಾಪಾರಿಗಳ ಸೋಗಿನಲ್ಲಿ ಮಸೀದಿ ಅಕ್ಕ-ಪಕ್ಕದಲ್ಲೇ ಸುತ್ತಾಡುತ್ತಿತ್ತು.'

'ಜಮ್ಮು-ಕಾಶ್ಮೀರ ಪೊಲೀಸರು ನೀಡಿದ್ದ ಫೋಟೊ ಹಾಗೂ ತಾಂತ್ರಿಕ ಪುರಾವೆಗಳಿಂದ ಮಸೀದಿ ಪಕ್ಕದ ಮನೆಯಲ್ಲಿದ್ದ ನೆಲೆಸಿದ್ದ ವ್ಯಕ್ತಿ ಉಗ್ರ ತಾಲಿಬ್ ಎಂಬುದು ಖಾತ್ರಿಯಾಗಿತ್ತು. ಬಳಿಕವೇ ಜಂಟಿ ಕಾರ್ಯಾಚರಣೆ ನಡೆಸಿ ರಾತ್ರಿ ವೇಳೆ ಬಂಧಿಸಲಾಯಿತು' ಎಂದೂ ಅಧಿಕಾರಿ ಹೇಳಿದರು.

ಗೋವಾದ ಕೊಠಡಿಯಲ್ಲಿ 8 ಕೆ.ಜಿ. ಚಿನ್ನ

'ದೀಪಂ ಎಲೆಕ್ಟ್ರಿಕಲ್ಸ್' ಮಳಿಗೆ ಮಾಲೀಕನ ಹತ್ಯೆ • ಮತ್ತೆ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಪೂರನ್ ರಾಮ್ ದೇವಸಿ

ಮಹೇಂದ್ರ ದೇವಸಿ



ಓಂ ಪ್ರಕಾಶ್ ದೇವಸಿ



ಬಿಜರಾಮ್

ಬೆಂಗಳೂರು: ಚಿಕ್ಕಪೇಟೆಯಲ್ಲಿರುವ 'ದೀಪಂ ಎಲೆಕ್ಟ್ರಿಕಲ್ಸ್' ಮಳಿಗೆ ಮಾಲೀಕ ಜುಗರಾಜ್ ಜೈನ್ (74) ಕೊಲೆ ಪ್ರಕರಣದಡಿ ಕೆಲಸಗಾರ ಬಿಜರಾಮ್ (24) ಅವರನ್ನು ಬಂಧಿಸಿದ್ದ ಪಶ್ಚಿಮ ವಿಭಾಗದ ಪೊಲೀಸರು, ಇದೀಗ ಅವರ ಮೂವರು ಸ್ನೇಹಿತರನ್ನು ಸೆರೆ ಹಿಡಿದಿದ್ದಾರೆ.

'ಪೂರನ್ ರಾಮ್ ದೇವಸಿ (26), ಮಹೇಂದ್ರ ದೇವಸಿ (27), ಓಂ ಪ್ರಕಾಶ್ ದೇವಸಿ (24) ಬಂಧಿತರು. ಇವರೆಲ್ಲ ಬಿಜರಾಮ್ ಜೊತೆ ಸೇರಿ ಜುಗರಾಜ್ ಅವರನ್ನು ಮೇ 24ರಂದು ಕೊಲೆ ಮಾಡಿದ್ದರು. ಪ್ರಮುಖ ಆರೋಪಿ ಬಿಜರಾಮ್, ಗುಜರಾತ್‌ನಲ್ಲಿ ಇತ್ತೀಚೆಗೆ ಸಿಕ್ಕಿಬಿದ್ದಿದ್ದ. ಆತನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿ, ಮೂವರು ಸ್ನೇಹಿತರನ್ನೂ ಬಂಧಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

'ನಾಲ್ವರು ಆರೋಪಿಗಳು ಕೊಲೆಗೆ ಸಂಚು ರೂಪಿಸಿದ್ದರು. ಮನೆಯಲ್ಲಿ ಒಂಟಿಯಾಗಿದ್ದ ಜುಗರಾಜ್ ಅವರ ಕಣ್ಣಿಗೆ ಖಾರದ ಪುಡಿ ಎರಚಿ, ಕೈಗಳನ್ನು ಪ್ಲಾಸ್ಟಿಕ್ ದಾರದಿಂದ ಕಟ್ಟಿದ್ದರು. ಕೂಗಾಡದಂತೆ ಬಾಯಿಗೆ ಬಟ್ಟೆ ತುರುಕಿದ್ದರು. ನಂತರ, ಕತ್ತು ಹಿಸುಕಿ ಕೊಲೆ ಮಾಡಿ ಚಿನ್ನಾಭರಣ ಹಾಗೂ ನಗದು ಸಮೇತ ಪರಾರಿಯಾಗಿದ್ದರು.'

'₹ 4.93 ಕೋಟಿ ಮೌಲ್ಯದ 8 ಕೆ.ಜಿ 752 ಗ್ರಾಂ ಚಿನ್ನಾಭರಣ, 3 ಕೆ.ಜಿ 870 ಗ್ರಾಂ ಬೆಳ್ಳಿ ಸಾಮಗ್ರಿ, ₹ 53.48 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದೂ ಕಮಿಷನರ್ ಹೇಳಿದರು.

'ಬಂಧಿತ ಪೂರನ್ ರಾಮ್ ದೇವಸಿ, ಗೋವಾದಲ್ಲಿ ಹಾರ್ಡ್‌ವೇರ್ ಮಳಿಗೆ ನಡೆಸುತ್ತಿದ್ದ. ಈತ ವಾಸವಿದ್ದ ಗೋವಾದ ಕೊಠಡಿಯಲ್ಲೇ 8 ಕೆ.ಜಿ 500 ಗ್ರಾಂ ಚಿನ್ನಾಭರಣ ಸಿಕ್ಕಿದೆ. ಇನ್ನೊಬ್ಬ ಆರೋಪಿ ಮಹೇಂದ್ರ ದೇವಸಿ, ರಾಜಸ್ಥಾನದ ಪಾಲಿ ಜಿಲ್ಲೆಯ ಕಿವಾಲ್ ಗ್ರಾಮದಲ್ಲಿ ಚಿನ್ನದ ಅಂಗಡಿ ಇಟ್ಟುಕೊಂಡಿದ್ದ. ರಾಜಸ್ಥಾನದವನೇ ಆದ ಮತ್ತೊಬ್ಬ ಆರೋಪಿ ಓಂ ಪ್ರಕಾಶ್ ದೇವಸಿ, ಚಿಕ್ಕಪೇಟೆಯ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ' ಎಂದೂ ತಿಳಿಸಿದರು.

ಹೆಂಡತಿ ಕಾಟಕ್ಕೆ ಕೊಲೆ

'ರಾಜಸ್ಥಾನದಿಂದ ಆರು ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ ಬಿಜರಾಮ್‌ನಿಗೆ, ಮೃತ ಜುಗರಾಜ್ ಜೈನ್ ಅವರ ಮಗನ ಪರಿಚಯವಾಗಿತ್ತು. ತಂದೆ ಜೊತೆ ಕೆಲಸಕ್ಕೆಂದು ಬಿಜರಾಮ್‌ನನ್ನು ಮಗನೇ ನೇಮಿಸಿದ್ದರು. ಇದಕ್ಕಾಗಿ ಪ್ರತಿ ತಿಂಗಳು ₹ 15 ಸಾವಿರ ಸಂಬಳ ನಿಗದಿಪಡಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜೀವನ ನಿರ್ವಹಣೆಗೆ ಸಂಬಳ ಸಾಲುತ್ತಿರಲಿಲ್ಲ. ಹೆಂಡತಿ ಹೆಚ್ಚು ಹಣ ತರುವಂತೆ ಪೀಡಿಸುತ್ತಿದ್ದಳು. ಇದೇ ಕಾರಣಕ್ಕೆ ಬಿಜರಾಮ್, ಸ್ನೇಹಿತರ ಜೊತೆ ಸೇರಿ ತನ್ನ ಮಾಲೀಕರನ್ನೇ ಕೊಲೆ ಮಾಡಿ ಚಿನ್ನಾಭರಣ ಹಾಗೂ ನಗದು ದೋಚಲು ಮುಂದಾಗಿದ್ದ' ಎಂದೂ ತಿಳಿಸಿವೆ.

₹ 5 ಲಕ್ಷ ಲಂಚ: ಬಿಡಿಎ ಎಇ ಬಂಧನ

ಬೆಂಗಳೂರು: ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ನಡೆಸದೇ ಬಳಸಿಕೊಂಡಿದ್ದ ಜಮೀನಿಗೆ ಬದಲಿ ನಿವೇಶನ ಮಂಜೂರು ಮಾಡಲು ಭೂಮಾಲೀಕರಿಂದ ₹ 1 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟು, ಮುಂಗಡವಾಗಿ ₹ 5 ಲಕ್ಷ ಪಡೆಯುತ್ತಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪಶ್ಚಿಮ ವಿಭಾಗದ ಸಹಾಯಕ ಎಂಜಿನಿಯರ್ (ಎಇ) ಬಿ.ಟಿ. ರಾಜು ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮಂಗಳವಾರ ಬಂಧಿಸಿದೆ.

ಬಿ.ಟಿ. ರಾಜು

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ರಾಮಸಂದ್ರ ನಿವಾಸಿಯಾಗಿರುವ ವ್ಯಕ್ತಿಯೊಬ್ಬರು ಕೆಂಗೇರಿ ಗ್ರಾಮದಲ್ಲಿ ಹೊಂದಿದ್ದ 33 ಗುಂಟೆ ಜಮೀನನ್ನು ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ರಸ್ತೆ ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ನಡೆಸಿ, ಭೂಮಾಲೀಕರಿಗೆ ಪರಿಹಾರ ನೀಡದೇ ಅವರ ಜಮೀನನ್ನು ಬಳಕೆ ಮಾಡಲಾಗಿತ್ತು. ಸೂಕ್ತ ಪ್ರಕ್ರಿಯೆ ನಡೆಸಿ ಬದಲಿ ನಿವೇಶನ ನೀಡುವಂತೆ ಭೂಮಾಲೀಕರು ಬಿಡಿಎಗೆ ಅರ್ಜಿ ಸಲ್ಲಿಸಿದ್ದರು.

'ಸ್ಥಳ ಪರಿಶೀಲನೆ ನಡೆಸಿ, ನಕ್ಷೆಯೊಂದಿಗೆ ವರದಿ ಸಲ್ಲಿಸುವಂತೆ ಕಡತವನ್ನು ಬಿಡಿಎ ಪಶ್ಚಿಮ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗೆ ಕಳುಹಿಸಲಾಗಿತ್ತು. ಈ ಸಂಬಂಧ ವಿಚಾರಿಸಲು ಅರ್ಜಿದಾರರು ಅಧಿಕಾರಿಯನ್ನು ಭೇಟಿ ಮಾಡಿದ್ದರು. ಆರಂಭದಲ್ಲಿ ₹ 1 ಕೋಟಿ ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಮುಂಗಡವಾಗಿ ₹ 60 ಲಕ್ಷ ನೀಡುವಂತೆ ಸಹಾಯಕ ಎಂಜಿನಿಯರ್ ಕೇಳಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ಸಲ್ಲಿಸಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಜಯನಗರದಲ್ಲಿರುವ ಬಿಡಿಎ ಪಶ್ಚಿಮ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯಲ್ಲಿ ಅರ್ಜಿದಾರರಿಂದ ₹ 5 ಲಕ್ಷ ಪಡೆಯುತ್ತಿದ್ದಾಗ ದಾಳಿಮಾಡಿದ ಎಸಿಬಿ ಅಧಿಕಾರಿಗಳು, ರಾಜು ಅವರನ್ನು ಲಂಚದ ಹಣದ ಸಮೇತ ಬಂಧಿಸಿದರು.

ಆನ್‌ಲೈನ್‌ನಲ್ಲಿ ಸ್ನೇಹ ಬೆಳೆಸಿ ವಂಚನೆ: ಆರೋಪಿ ಬಂಧನ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳ ಮೂಲಕ ಜನರ ಸ್ನೇಹ ಬೆಳೆಸಿ ವಂಚಿಸುತ್ತಿದ್ದ ಆರೋಪದಡಿ ಚರಣ್‌ರಾಜ್ (34) ಎಂಬುವರನ್ನು ಎಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ.

'ಕನಕಪುರದ ಚರಣ್‌ರಾಜ್, ಜೀವನ್‌ಬಿಮಾನಗರದಲ್ಲಿ ವಾಸವಿದ್ದ. ಈತನ ವಿರುದ್ಧ ಪತ್ನಿ ವರದಕ್ಷಿಣೆ ಪ್ರಕರಣ ದಾಖಲಿಸಿದ್ದರು. ಹೀಗಾಗಿ, ಈತ ಒಂಟಿಯಾಗಿ ನೆಲೆಸಿದ್ದ. ಅಕ್ರಮವಾಗಿ ಹಣ ಗಳಿಸಿ ಮೋಜು ಮಸ್ತಿ ಮಾಡಲು ವಂಚನೆಗೆ ಇಳಿದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಫೇಸ್‌ಬುಕ್ ಹಾಗೂ ಇತರೆ ಜಾಲತಾಣಗಳಲ್ಲಿ ಖಾತೆ ತೆರೆದಿದ್ದ ಆರೋಪಿ, ಜನರಿಂದ ಕಾರು, ಕ್ಯಾಮೆರಾ ಪಡೆದು ಮಾರಾಟ ಮಾಡಿ ಪರಾರಿಯಾಗಿದ್ದ. ಎರಡು ತಿಂಗಳಿನಿಂದ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

'ಅಪರಿಚಿತ ವ್ಯಕ್ತಿಗಳಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸುತ್ತಿದ್ದ ಆರೋಪಿ, ಅದನ್ನು ಸ್ವೀಕರಿಸುತ್ತಿದ್ದಂತೆ ಚಾಟಿಂಗ್ ಮಾಡಲಾರಂಭಿಸುತ್ತಿದ್ದ. ಸ್ನೇಹ ಬೆಳೆಸಿ ಆತ್ಮಿಯನಾಗುತ್ತಿದ್ದ. 'ತಂದೆ- ತಾಯಿಗೆ ಹುಷಾರಿಲ್ಲ. ಆಸ್ಪತ್ರೆಗೆ ಕರೆದೊಯ್ಯಬೇಕು' ಎಂಬುದಾಗಿ ಹೇಳಿ ಕಾರು ಪಡೆಯುತ್ತಿದ್ದ. ಅದೇ ಕಾರನ್ನು ಒಎಲ್‌ಎಕ್ಸ್ ಹಾಗೂ ಇತರೆ ಜಾಲತಾಣಗಳ ಮೂಲಕ ಮಾರಾಟ ಮಾಡಿ ನಾಪತ್ತೆಯಾಗುತ್ತಿದ್ದ' ಎಂದೂ ತಿಳಿಸಿವೆ.

'ಪದೇ ಪದೇ ಸಿಮ್‌ಕಾರ್ಡ್ ಬದಲಿಸುತ್ತಿದ್ದ ಆರೋಪಿ ಬಗ್ಗೆ ಸುಳಿವು ಸಿಗುತ್ತಿರಲಿಲ್ಲ. ಫೇಸ್‌ಬುಕ್ ಬಳಕೆದಾರರ ಸೋಗಿನಲ್ಲೇ ಆರೋಪಿಯನ್ನು ಪತ್ತೆ ಮಾಡಲಾಗಿದೆ. ಆರೋಪಿಯಿಂದ 8 ಕಾರು ಹಾಗೂ ಕ್ಯಾಮೆರಾ ಜಪ್ತಿ ಮಾಡಲಾಗಿದೆ' ಎಂದೂ ಹೇಳಿವೆ.

ಗೋಶಾಲೆ ಆರಂಭ ಪಂಚವಾರ್ಷಿಕ ಯೋಜನೆಯೇ?: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋಶಾಲೆ ಆರಂಭಿಸುವುದು ನಿಮ್ಮ ಪಾಲಿಗೆ ಪಂಚವಾರ್ಷಿಕ ಯೋಜನೆಯೇ' ಎಂದು ಖಾರವಾಗಿ ಪ್ರಶ್ನಿಸಿರುವ ಹೈಕೋರ್ಟ್, 'ಎಂದಿನಿಂದ ಗೋಶಾಲೆ ಕಾರ್ಯಾರಂಭ ಮಾಡಲಿದ್ದೀರಿ ಎಂಬುದನ್ನು ತಿಳಿಸಿ' ಎಂದು ರಾಜ್ಯ ಸರ್ಕಾರಕ್ಕೆ ಖಡಕ್ ನಿರ್ದೇಶನ ನೀಡಿದೆ.

ಈ ಸಂಬಂಧ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ಸರ್ಕಾರದ ಪರ ವಕೀಲರು, 'ಬೆಂಗಳೂರು ಮಹಾನಗರದಲ್ಲಿ ಜಮೀನು ವರ್ಗಾವಣೆ ವಿಚಾರದಲ್ಲಿ ಕೆಲವು ಸಮಸ್ಯೆಗಳಿವೆ. ಇದರಿಂದ ಬೆಂಗಳೂರು ಹೊರತುಪಡಿಸಿದಂತೆ ಉಳಿದ 29 ಜಿಲ್ಲೆಗಳಲ್ಲಿ ಗೋಶಾಲೆ ಆರಂಭಿಸಲಾಗುತ್ತಿದೆ. ಈ ಸಂಬಂಧ ಈಗಾಗಲೇ ಜಿಲ್ಲಾ ಮಟ್ಟದ ಸಮಿತಿಗಳನ್ನೂ ರಚಿಸಲಾಗಿದೆ' ಎಂದರು.

'ಕೆಲವು ಕಡೆ ನೀರಿನ ಸೌಲಭ್ಯ ಕಲ್ಪಿಸಲು ಕೊಳವೆ ಬಾವಿ ಕೊರೆಸಲಾಗಿದ್ದು, ಶೆಡ್‌ಗಳನ್ನೂ ನಿರ್ಮಾಣ ಮಾಡಲಾಗುತ್ತಿದೆ. ಜುಲೈ 15ರ ವೇಳೆಗೆ 5 ಮತ್ತು ಆಗಸ್ಟ್ 1ರ ಹೊತ್ತಿಗೆ 10 ಗೋಶಾಲೆ ಆರಂಭಗೊಳ್ಳಲಿವೆ' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ತಾಲ್ಲೂಕು ಮತ್ತು ಪ್ರತಿ ಗ್ರಾಮ ಮಟ್ಟದಲ್ಲಿ ಒಂದು ಗೋಶಾಲೆ ಇರಬೇಕು. ಪ್ರತಿ ಜಿಲ್ಲೆಯಲ್ಲಿ ಒಂದು ಗೋಶಾಲೆ ಆರಂಭಿಸುತ್ತೀರಾ, ಹಾಗಾದರೆ ಎಷ್ಟು ಬಿಡಾಡಿ ದನಗಳು ಅಲ್ಲಿ ಆಶ್ರಯಪಡೆಯಲಿವೆ' ಎಂದು ಪ್ರಶ್ನಿಸಿತು.

ಇದಕ್ಕೆ ಸರ್ಕಾರಿ ವಕೀಲರು, 'ಖಾಸಗಿಯವರು 197 ಗೋಶಾಲೆಗಳನ್ನು ಆರಂಭಿಸಿದ್ದಾರೆ. ಅವುಗಳಿಗೂ ಸರ್ಕಾರ ಹಣಕಾಸಿನ ನೆರವು ನೀಡುತ್ತಿದೆ. ಗೋಶಾಲೆ ಆರಂಭಿಸುವುದಕ್ಕೆ ಸಂಬಂಧಿಸಿದ ವಸ್ತುಸ್ಥಿತಿ ವರದಿ ಸಿದ್ಧವಾಗಿದೆ. ಅದನ್ನು ಎರಡು ದಿನಗಳಲ್ಲಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ತಿಳಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಮುಂದಿನ ವಾರಕ್ಕೆ ಮುಂದೂಡಿದೆ.

ಲೋಕಾಯುಕ್ತ ಹುದ್ದೆ: ವಿಚಾರಣೆ ಮುಂದಕ್ಕೆ

ಬೆಂಗಳೂರು: 'ಕರ್ನಾಟಕ ಲೋಕಾಯುಕ್ತ ಹುದ್ದೆ ಭರ್ತಿ ಮಾಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿದೆ.

ಈ ಕುರಿತಂತೆ ವಕೀಲ ಎಸ್.ಉಮಾಪತಿ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿಗಳು, 'ಲೋಕಾಯುಕ್ತರ ನೇಮಕಾತಿ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಜೊತೆಗೆ ಸಮಾಲೋಚನೆ ನಡೆಸಬೇಕಾದ ಪ್ರಕ್ರಿಯೆ ಚಾಲನೆಯಲ್ಲಿದೆ. ಒಂದು ವಾರದಲ್ಲಿ ಈ ಬಗ್ಗೆ ನಿಮಗೆ ಮಾಹಿತಿ ತಿಳಿಯಲಿದೆ' ಎಂದರು. ವಿಚಾರಣೆಯನ್ನು ಹತ್ತು ದಿನಗಳ ಕಾಲ ಮುಂದೂಡಲಾಗಿದೆ.

'ಕಳೆದ ನಾಲ್ಕು ತಿಂಗಳಿಂದ ಲೋಕಾಯುಕ್ತರ ಹುದ್ದೆ ಖಾಲಿಯಿದ್ದು, ಕೂಡಲೇ ಲೋಕಾಯುಕ್ತರನ್ನು ನೇಮಕ ಮಾಡುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ನಕಲಿ ಶ್ಯೂರಿಟಿ; ರೌಡಿ ಸೇರಿ ನಾಲ್ವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಜಾಮೀನು ಮಂಜೂರು ಮಾಡಿಸಲು ನಕಲಿ ಶ್ಯೂರಿಟಿ ನೀಡಿದ್ದ ಆರೋಪದಡಿ ರೌಡಿ ಸೇರಿ ನಾಲ್ವರನ್ನು ಯಶವಂತಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ನಕಲಿ ದಾಖಲೆ ಹಾಜರುಪಡಿಸಿದ್ದ ರೌಡಿ ಆಕಾಶ್, ಮಹೇಶ್, ಲೋಕೇಶ್ ಹಾಗೂ ರಾಮಲಿಂಗಯ್ಯ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣವೊಂದರಲ್ಲಿ ಆರೋಪಿ ಆಗಿದ್ದ ರೌಡಿ ಆಕಾಶ್‌ಗೆ ಜಾಮೀನು ಮಂಜೂರು ಮಾಡಿಸಿಕೊಳ್ಳಲು ಆರೋಪಿಗಳು ಉತ್ತರ ವಿಭಾಗದ ಡಿಸಿಪಿ ಕಚೇರಿಗೆ ಬಂದಿದ್ದರು. ಶ್ಯೂರಿಟಿಗಾಗಿ ದಾಖಲೆಗಳನ್ನು ಹಾಜರುಪಡಿಸಿದ್ದರು. ದಾಖಲೆಗಳು ನಕಲಿ ಎಂದು ಪರಿಶೀಲನೆ ವೇಳೆ ಗೊತ್ತಾಯಿತು. ಸಿಬ್ಬಂದಿಯಿಂದ ದೂರು ಪಡೆದು ಆರೋಪಿಗಳ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದೂ ತಿಳಿಸಿವೆ.

ತಪಾಸಣೆಗೆ ಹೆದರಿದ ಸವಾರ: ಉರುಳಿ ಬಿದ್ದ ಬೈಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮನಹಳ್ಳಿ ಹೊರ ವರ್ತುಲ ರಸ್ತೆಯಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದ ಸಂಚಾರ ಪೊಲೀಸರಿಗೆ ಹೆದರಿದ ಸವಾರರೊಬ್ಬರು, ವೇಗವಾಗಿ ಬೈಕ್ ಚಲಾಯಿಸಲು ಹೋಗಿ ಉರುಳಿ ಬಿದ್ದು ಗಾಯಗೊಂಡಿದ್ದಾರೆ.

'ಬೈಕ್‌ನಿಂದ ಬಿದ್ದು ಗಾಯಗೊಂಡಿರುವ ಸವಾರ ಹಾಗೂ ಹಿಂಬದಿ ಸವಾರನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂಚಾರ ನಿಯಮ ಉಲ್ಲಂಘನೆ ಪತ್ತೆಗಾಗಿ ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಸುಮನಹಳ್ಳಿ ಹೊರವರ್ತುಲ ರಸ್ತೆ ಬಳಿ ಮಂಗಳವಾರ ಬೆಳಿಗ್ಗೆ ವಾಹನಗಳ ತಪಾಸಣೆ ನಡೆಸುತ್ತಿದ್ದರು. ಇದೇ ಮಾರ್ಗವಾಗಿ ಹೊರಟಿದ್ದ ಸವಾರರು ದೂರದಿಂದಲೇ ಪೊಲೀಸರನ್ನು ನೋಡಿ ಹೆದರಿದ್ದರು. ತಪ್ಪಿಸಿಕೊಂಡು ಹೋಗುವುದಕ್ಕಾಗಿ ವೇಗವಾಗಿ ಬೈಕ್ ಚಲಾಯಿಸಿದ್ದರು. ಅದೇ ವೇಳೆ ನಿಯಂತ್ರಣ ತಪ್ಪಿ ಬೈಕ್ ಉರುಳಿಬಿದ್ದಿತ್ತು' ಮೂಲಗಳು ತಿಳಿಸಿವೆ.

'ಕರ್ತವ್ಯದಲ್ಲಿದ್ದ ಪೊಲೀಸರು, ಸಾರ್ವಜನಿಕರ ಸಹಾಯದಿಂದ ಸವಾರರನ್ನು ವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು' ಎಂದೂ ತಿಳಿಸಿವೆ.

ಸಾರ್ವಜನಿಕರ ಆಕ್ರೋಶ: 'ನಿತ್ಯವೂ ರಸ್ತೆಯಲ್ಲಿ ನಿಲ್ಲುವ ಪೊಲೀಸರು, ಎಲ್ಲ ದಾಖಲೆ ಸರಿ ಇದ್ದರೂ, ದಂಡ ಕೇಳುತ್ತಾರೆ. ಇದರಿಂದಾಗಿ ವಾಹನ ಸವಾಲರು ಆತಂಕದಲ್ಲೇ ಸಂಚರಿಸುವಂತಾಗಿದೆ. ಪೊಲೀಸರ ವರ್ತನೆಯಿಂದ ಈ ಅವಘಡ ಸಂಭವಿಸಿದೆ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಐಸಿಎಆರ್-ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು-560030
ಫೋನ್: (ಕಚೇರಿ) +91-80-25711304, 25711164, ಫ್ಯಾಕ್ಸ್: +91-80-25711420
ವೆಬ್‌ಸೈಟ್: www.nianp.res.in
ಸರ್ದಾರ್ ಪಟೇಲ್ ಅತ್ಯುತ್ತಮ ಐಸಿಎಆರ್ ಸಂಸ್ಥೆ ಪ್ರಶಸ್ತಿ 2012
ಜಾಹೀರಾತು ಸಂ. 4/ಎನ್‌ಐಎಎನ್‌ಪಿ/ಸಿಡಿಎನ್/ಮೇ-2022
ಸಿವಿಲ್ ಗುತ್ತಿಗೆದಾರರ ನೇಮಕಾತಿಗಾಗಿ ಆಹ್ವಾನ
ಕಾರ್ಯದರ್ಶಿ, ಐಸಿಎಆರ್, ನವದೆಹಲಿ ಇವರ ಪರವಾಗಿ, ನಿರ್ದೇಶಕರು, ಎನ್‌ಐಎಎನ್‌ಪಿ, ಬೆಂಗಳೂರು ಇವರು ಅಗತ್ಯ ಪ್ರಕ್ರಿಯೆಗಳ ನಂತರ ನಿಗದಿಪಡಿಸಲಾಗುವ ಸಿವಿಲ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶದಿಂದ ಸಿವಿಲ್ ಗುತ್ತಿಗೆದಾರರನ್ನು ಎಂಪಾನೆಲ್‌ಮೆಂಟ್ ಮಾಡಿಕೊಳ್ಳಲು ರಾಜ್ಯದ ಪಿಡಬ್ಲ್ಯುಡಿ/ಸಿಪಿಡಬ್ಲ್ಯುಡಿ ಇವರೊಂದಿಗೆ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ (ಕ್ಲಾಸ್ 2, 3 ಮತ್ತು 4 ಗ್ರೇಡ್) ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ಸದರಿ ಎಂಪಾನೆಲ್‌ಮೆಂಟ್ ಅವಧಿಯು ಎಂಪಾನೆಲ್‌ಮೆಂಟ್ ದಿನಾಂಕದಿಂದ **ಮೂರು ವರ್ಷಗಳ** ಅವಧಿಯದ್ದಾಗಿರುತ್ತದೆ.
ಆಸಕ್ತಿಯುಳ್ಳ ಸಿವಿಲ್ ಗುತ್ತಿಗೆದಾರರು, ಸಂಬಂಧಿತ ಮಾಹಿತಿ ಮತ್ತು ಅಗತ್ಯ ದಾಖಲಾತಿಗಳ (ಸಕಾಲದಲ್ಲಿ ದೃಢೀಕೃತ) ಜೊತೆಗೆ ಅನುಭವ, ಕೈಗೊಂಡಿರುವ ಕಾಮಗಾರಿಗಳ ಪಟ್ಟಿ/ಇತರೆ ರಾಜ್ಯ/ಕೇಂದ್ರ ಸರ್ಕಾರ/ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳೊಂದಿಗಿನ ಎಂಪಾನೆಲ್‌ಮೆಂಟ್ ಕುರಿತಾದ ದಾಖಲಾತಿಗಳನ್ನು 30/06/2022 ರೊಳಗೆ ಸದರಿ ಕಚೇರಿಗೆ ಸಲ್ಲಿಸುವುದು.
ಆಡಳಿತಾಧಿಕಾರಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂಖ್ಯೆ:ಬೆಂಅಪ್ರಾ/ವಿಭೂಸ್ವಾಅ-5/473/2022-23 ದಿನಾಂಕ: 07.06.2022
ಸಾರ್ವಜನಿಕ ಪ್ರಕಟಣೆ
ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ದೊಡ್ಡಬೆಟ್ಟಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಜಮೀನುಗಳ ಅಧಿಸೂಚಿತ ಖಾತಾದಾರರು, ಅನುಭವದಾರರು, ಆಕ್ಷೇಪಣೆದಾರರು ಹಾಗೂ ಎಲ್ಲಾ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಾ|| ಕೆ.ಶಿವರಾಮಕಾರಂತ ಬಡಾವಣೆ ರಚಿಸುವ ಸಲುವಾಗಿ ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ:ಬಿಡಿಎ/ಕಮೀಷನರ್/ಡಿಸಿ(ಎಲ್‌ಎ)/ಎಸ್‌ಎಲ್‌ಎಒ/ಎ5/ಪಿಆರ್/283/2008-09, ದಿನಾಂಕ:30.12.2008 ನ್ನು ಹೊರಡಿಸಿದ್ದು, ಅದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 31.12.2008 ರ ಭಾಗ-3, ಪುಟ ಸಂಖ್ಯೆ 1368 ರಲ್ಲಿ ಪ್ರಕಟಣೆ ಮಾಡಲಾಗಿರುತ್ತದೆ.
ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ **Civil Appeal No. 7661-63/2018(Arising out of SLP(C) No. 10216-218/2018) Dated 03/08/2018** ರ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ/553/ಬೆಂಭೂಸ್ವಾ/2018 ದಿನಾಂಕ 29/10/2018 ರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ|| ಕೆ.ಶಿವರಾಮ ಕಾರಂತ ಬಡಾವಣೆಯನ್ನು 3546 ಎಕರೆ 12 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸುವ ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಕಲಂ 18(3) ರಡಿಯಲ್ಲಿ ಯೋಜನಾ ಮಂಜೂರಾತಿಯನ್ನು ನೀಡಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/553/ಎಂಎನ್‌ಎಕ್ಸ್/2018, ದಿನಾಂಕ 29.10.2018 ರಂದು ಬಿಡಿಎ ಕಾಯ್ದೆ 1976 ಕಲಂ 19(1) ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 01.11.2018 ರಂದು ಪ್ರಕಟಿಸಲಾಗಿರುತ್ತದೆ. ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ಜಮೀನನ್ನು ಆಯಾ ಸರ್ವೆ ನಂಬರಿನ ಮುಂದೆ ನಮೂದಿಸಿರುವ ದಿನಾಂಕಗಳಂದು ಹಸ್ತಾಂತರ ಮಾಡಿಕೊಳ್ಳಲಾಗುವುದು.

ಕೋಷ್ಟಕ

ಗ್ರಾಮ	ಸರ್ವೆ ನಂ.	ಹಸ್ತಾಂತರ ಮಾಡಿಕೊಳ್ಳುವ ದಿನಾಂಕ
ದೊಡ್ಡಬೆಟ್ಟಹಳ್ಳಿ	24/2, 29/3	16.06.2022
ದೊಡ್ಡಬೆಟ್ಟಹಳ್ಳಿ	32, 36, 40	17.06.2022

ಆದ್ದರಿಂದ ಸಂಬಂಧಪಟ್ಟ ಎಲ್ಲಾ ಖಾತೆದಾರರು, ಅನುಭವದಾರರು ಮತ್ತು ಆಸಕ್ತ ವ್ಯಕ್ತಿಗಳಿಗೆ ಈಗಾಗಲೇ ಭೂಸ್ವಾಧೀನ ಕಾಯ್ದೆ 12(2) ರಡಿ ಅವಾರ್ಡ್ ನೋಟಿಸನ್ನು ಲಭ್ಯವಿರುವ ವಿಳಾಸಗಳಿಗೆ ಸ್ಪೀಡ್ ಪೋಸ್ಟ್ ಮೂಲಕ ಈಗಾಗಲೇ ಜಾರಿ ಮಾಡಲಾಗಿದ್ದು, ಒಂದು ವೇಳೆ 12(2) ನೋಟಿಸ್ ತಲುಪದಿದ್ದಲ್ಲಿ, ಸದರಿ ಪ್ರಕಟಣೆಯನ್ನೇ ಭೂಸ್ವಾಧೀನ ಕಾಯ್ದೆ 12(2) ನೋಟಿಸ್ ಎಂದು ಪರಿಗಣಿಸಿ, ಮೇಲ್ಕಂಡ ಸರ್ವೆ ನಂಬರುಗಳ ಸ್ವತ್ತುಗಳನ್ನು ಮರ-ಮಾಲ್ಕಿ, ಕಟ್ಟಡಗಳ ಸಮೇತವಾಗಿ ಜಮೀನಿನ ಸ್ವಾಧೀನವನ್ನು ಭೂಸ್ವಾಧೀನ ಕಾಯ್ದೆ 16(1) ರನ್ವಯ ಹಸ್ತಾಂತರಿಸಲು ಹಾಗೂ ಸದರಿ ದಿನಾಂಕದಂದು ಸ್ಥಳದಲ್ಲಿ ಹಾಜರಿದ್ದು ಜಮೀನನ್ನು ಸ್ವಾಧೀನಕ್ಕೆ ನೀಡುವಲ್ಲಿ ಸಹಕರಿಸಲು ಕೋರಿದೆ.
ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ-5,
(ಡಾ|| ಕೆ. ಶಿವರಾಮಕಾರಂತ ಬಡಾವಣೆ), ಬೆಂಅಪ್ರಾ, ಬೆಂಗಳೂರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ಇ-ಮೇಲ್: eerdwsd.ckb2@gmail.com ದೂ: 08156-270058
ಸಂ: ಕಾಪಾಅ/ಗ್ರಾ.ಕು.ನೀ&ನೈರ್ಮಲ್ಯ ವಿಭಾಗ/ಚಿ.ಪುರ/ತಾ.ಶಾ/ಟೆಂಡರ್ 2022-23 ದಿನಾಂಕ: 02.06.2022
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 03/ 2022-23 ದಿನಾಂಕ: 02.06.2022
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು 2022-23 ನೇ **JJM** ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಅಮಾನಿ ಬೈರಸಾಗರ ಕೆರೆಯಿಂದ 28 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಮತ್ತು ಬಂದರು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ **KW-5** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ **(Credit Card/Direct Debit/ NEFT & OTC ಮುಖೇನ)** ಅಥವ ಚಾಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. **(Indent No: RWSSD/2022-23/WS/WORK_INDENT40160** (1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **02.06.2022 ರ ಸಂಜೆ 4.30 ಗಂಟೆಯ ನಂತರ** (2) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ: **09.06.2022 ಸಂಜೆ 5.30 ಗಂಟೆಯವರೆಗೆ.** (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **04.07.2022ರ ಸಂಜೆ 5.30 ಗಂಟೆಯ ವರೆಗೆ.**(4) ಟೆಂಡರ್ ಪೂರ್ವ ಸಭೆಯ ದಿನಾಂಕ: ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು: **10.06.2022ರ ಬೆಳಿಗ್ಗೆ 12.00 ಗಂಟೆಗೆ.** (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **06.07.2022 ರಂದು ಬೆಳಿಗ್ಗೆ 11.00 ಗಂಟೆಗೆ.** (6) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **11.07.2022 ರಂದು ಬೆಳಿಗ್ಗೆ 11.00 ಗಂಟೆಗೆ.**
ಸಹಿ/- ಕಾರ್ಯಪಾಲಕ ಅಭಿಯಂತರರು,,
ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾ.ಸಾ.ಸಂ.ಇ/ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ.111/ ಎಂಸಿಎ/ 2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುರಸಭಾ ಕಾರ್ಯಾಲಯ, ಮಾಗಡಿ
ಕಛೇರಿ ದೂರವಾಣಿ ಸಂಖ್ಯೆ: 77 45221, ಸಹಾಯವಾಣಿ: 77 46748
ಫ್ಯಾಕ್ಸ್: 77 45199 ಇ-ಮೇಲ್: tmc_2007magadi@yahoo.co.in
itstaffl_ulb_magadi@yahoo.com
ವೆಬ್‌ಸೈಟ್: http://www.magaditown.mrc.gov.in
ಸಂಖ್ಯೆ: ಪುಕಾಮಾ/ನೈ.ಶಾ(ಪ.ಅ)/ಎಸ್.ಎಫ್.ಸಿ/ಪೌ.ಕ(ಬೆಳಗಿನ ಉಪಹಾರ)/ ಸಿಆರ್/22/2021-22 ದಿನಾಂಕ: 07-06-2022
ಟೆಂಡರ್ ಪ್ರಕಟಣೆ
ಮಾಗಡಿ ಪುರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ (ಮುಕ್ತ ನಿಧಿ) 2021-22ನೇ ಸಾಲಿನ ಶೇ. 24.10% ಯೋಜನೆಯಡಿ ಪೌರ ಕಾರ್ಮಿಕರಿಗೆ ಬೆಳಗಿನ ಉಪಹಾರವನ್ನು ಒದಗಿಸುವ ಸಂಬಂಧ ಆಸಕ್ತಿಯುಳ್ಳ ಏಜೆನ್ಸಿ / ಸರಬರಾಜುದಾರರು, ಹೋಟೆಲ್ ಮಾಲೀಕರು ಅಥವಾ ನೋಂದಾಯಿತ ಕೇಟರರ್ಸ್ ರವರುಗಳು ತಮ್ಮ ದರ ನಮೂದಿಸಿದ ಟೆಂಡರ್‌ನ್ನು ಕೆ.ಜಿ-1 ರ ನಿಯಮದಂತೆ ಈ ಕೆಳಗೆ ನಿಗದಿಪಡಿಸಿದ ದಿನಾಂಕದಂದು ಟೆಂಡರ್ ಸಲ್ಲಿಸತಕ್ಕದ್ದು, ಹೆಚ್ಚಿನ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರವನ್ನು ಪುರಸಭೆ ಮಾಗಡಿ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್: **www.magaditown.mrc.gov.in** ನಲ್ಲಿ ವೀಕ್ಷಿಸಬಹುದಾಗಿದೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಪೌರ ಕಾರ್ಮಿಕರಿಗೆ ಬೆಳಗಿನ ಉಪಹಾರಕ್ಕಾಗಿ ಮೀಸಲಿರಿಸಿದ ಅನುದಾನ.	3.00	7500/-

ಕೆಲಸ ಪೂರ್ತಿಗೊಳಿಸುವ ಅವಧಿ: **30 ದಿನಗಳು,** ಟೆಂಡರ್ ಫಾರಂ ಶುಲ್ಕ: **ರೂ. 1000 + ತೆರಿಗೆ (ಶೇ. 14.5%)**
1) ಖಾಲಿ ಟೆಂಡರ್ ಫಾರಂಗಾಗಿ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **20-06-2022ರಂದು ಸಂಜೆ 5.00 ಗಂಟೆಗೆ.** 2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವವರು ಫಾರಂಗಳನ್ನು ದಿನಾಂಕ: **22-06-2022ರಂದು ಮಧ್ಯಾಹ್ನ 3.00 ಗಂಟೆಯೊಳಗಾಗಿ ಮುಖ್ಯಾಧಿಕಾರಿಗಳು, ಪುರಸಭೆ, ಮಾಗಡಿ ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.** 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **22-06-2022ರಂದು ಸಂಜೆ 4.00 ಗಂಟೆಗೆ.**
ಸಹಿ/-
ಮುಖ್ಯಾಧಿಕಾರಿ
ಪುರಸಭೆ, ಮಾಗಡಿ.
ವಾಸಾಸಂಇ/ರಾನ/ಅಡ್ವರ್ಟೋರ್/92/2022-23

PUBLIC NOTICE
My client is intending to purchase Schedule Property from **Sri. K. Veeregowda,** S/o. K. Chikka nnappa and his legal heirs, residing at No.1941, 1st Main Road, M.C. Layout, Vijayanagar, Bangalore – 560 040. This Notice is hereby given for the information of General Public that any persons or Banks or Financial Institutions having any right, title, interest or claim against the Schedule Property, may contact with documentary proof in support of his/her/their claim. If no claim is so lodged with us within the said period of 15 days from this date of publication, it shall be presumed by my client that no one has any claim against the Schedule Property.
SCHEDULE PROPERTY
All that piece and parcel of immovable Property of agricultural dry land in Survey No.13/3, presently assigned as New Survey No.13/4 situated at Moogenahalli Village, Doddabelavangala Hobli, Doddaballapura Taluk, Bangalore Rural District, measuring 1 Acre 31.04 Guntas, **Bounded on:** East By : Survey No.14 and 15, West By : Survey No. 13/2, North By : Survey No.16, South By: National Highway No.207.
Sd/- P. Narasimhaiah, Advocate,
No.1, 18th Cross, Malleswaram,
Bangalore- 560055
Ph: 080 23343461/23343467
Mob: 94482 73366
Mail: p.narasimhaiah@yahoo.co.in
www.pnarasimhaiah-advocate.com
Date:07.06.2022 Place:- Bangalore

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101
ದೂರವಾಣಿ ಸಂಖ್ಯೆ: ಕಛೇರಿ: 08156-295427 ಫ್ಯಾಕ್ಸ್: 08156-295427 । ಇಮೇಲ್-eemidcbpura@gmail.com
4702 ಸರ್ವೆ ಕೆಲಸಗಳು ಯೋಜನೆ ಅಡಿಯಲ್ಲಿನ ಟೆಂಡರ್ ಪ್ರಕಟಣೆ ಸಂಖ್ಯೆ : 06/2022-23 ದಿನಾಂಕ : 06/06/2022.
ಭಾಗ-1: ಅಲ್ಪಾವಧಿ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನ- ಕೆ.ಸಿ.-5
1. ಇ-ಪ್ರೊಕ್ಯೂರ್‌ಮೆಂಟ್ ಅನ್ವಯ ಕಾಮಗಾರಿಗೆ ಟೆಂಡರ್ ಅನ್ನು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರ ರವರು ಟೆಂಡರ್ ಕರೆಯಲಾಗಿದ್ದು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ರಲ್ಲಿ ಟೆಂಡರ್‌ಗಳನ್ನು ಒಂದು ಕವರ್ ಪದ್ಧತಿಯಲ್ಲಿ (1) ಸರ್ಕಾರದಿಂದ ನೋಂದಣಿ ಮಾಡಿದ ವಿವರದ ಪ್ರತಿ (2) ಇ.ಎಂ.ಡಿ. ಬಗ್ಗೆ (3) ಆದಾಯ ತೆರಿಗೆ ತೀರುವಳಿ ಬಗ್ಗೆ, 4) ಟೆಂಡರ್‌ನಲ್ಲಿ ಕರೆದಿರುವ ಅದೇ ಮಾದರಿಯ ಒಂದು ಕಾಮಗಾರಿ ನಿರ್ವಹಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು 5) ಟೆಂಡರ್‌ನ್ನು ಅನುಮೋದಿಸುವ ಹಾಗೂ ತಿರಸ್ಕರಿಸುವ ಅಧಿಕಾರ ಸಂಪೂರ್ಣವಾಗಿ ಈ ಕೆಳ ಸಹಿದಾರರದ್ದಾಗಿರುತ್ತದೆ. ಗುತ್ತಿಗೆದಾರರು ಸದರಿ ಕಾಮಗಾರಿಗೆ ಬೇಕಾಗಿರುವ ಪೂರ್ವಾರ್ಹತೆಗಳ ಬಗ್ಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಸಿ.-5 ರಂತೆ (Instructions to Tenders to award of the contract) ಪರಿಶೀಲಿಸಿ ಅದರಂತೆ ಭಾಗವಹಿಸಬಹುದು.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್ ಫಾರಂನ ಮಾದರಿ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರ್ ಫಾರಂ ಬೆಲೆ	ಕಾಲಾವಧಿ (ಮಳೆಗಾಲವು ಸೇರಿ)	ಗುತ್ತಿಗೆದಾರರ ದರ್ಜೆ
1	ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಿಂಡಿ ಅಣೆಕಟ್ಟಿನ ಪುನರುಜ್ಜೀವನ ಕಾಮಗಾರಿಯ ಡಿ.ಪಿ.ಆರ್ ತಯಾರಿಸಲು ಸಮಾಲೋಚಕರನ್ನು ನೇಮಿಸುವ ಕಾಮಗಾರಿ.	ಕೆ.ಸಿ.-5	5.00	10000.00	ಇ-ಪ್ರೊಕ್ಯೂರ್‌ಮೆಂಟ್ ದರದಂತೆ	03 ತಿಂಗಳು	ಕರ್ನಾಟಕ ಸರ್ಕಾರದಿಂದ ನೊಂದಾಯಿತ ಅರ್ಹ ಸಮಾಲೋಚಕರು

1) ಸದರಿ ಟೆಂಡರ್‌ನಲ್ಲಿ ಕರೆದಿರುವ ಕಾಮಗಾರಿಗೆ ಸಂಬಂಧಿಸಿದ ಇಎಂಡಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವ ಯಾವುದಾದರೊಂದು ರೂಪದಲ್ಲಿ ಟೆಂಡರ್ ಊರ್ಜಿತ ಅವಧಿಯನ್ನು ಬಿಟ್ಟು ಹೆಚ್ಚುವರಿಯಾಗಿ 45 ದಿನಗಳನ್ನು ಒಳಗೊಂಡಂತೆ ಸಲ್ಲಿಸಬೇಕಾಗಿರುತ್ತದೆ. 2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz., http://eproc.karnataka.gov.in) ಗೆ ದಿನಾಂಕ: 20/06/2022 ರಂದು ಸಂಜೆ 16.00 ಗಂಟೆವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಕೆಲಸ ನಿರ್ವಹಿಸಿದ ಬಗ್ಗೆ ಅನುಭವ ಕೆಲಸ ಅರ್ಹತೆ ಬಗ್ಗೆ ಇತ್ಯಾದಿ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಟೆಂಡರ್ ಮೌಲ್ಯಮಾಪನ ಸಮಯದಲ್ಲಿ ಪರಿಶಿಲನೆಗೆ ಸಲ್ಲಿಸತಕ್ಕದ್ದು. 3) ಭರ್ತಿ ಮಾಡಿದ ತಾಂತ್ರಿಕ ಬಿಡ್‌ನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 23/06/2022 ರಂದು ತೆರೆಯಲಾಗುವುದು. 4) ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080-23010900, 080-23010901 ಮತ್ತು 080-38013000 ನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಮೆರವಣಿಗೆ: ಮಠಾಧೀಶರ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಸಮಿತಿಯು ನಾಡಗೀತೆ, ನಾಡಧ್ವಜಕ್ಕೆ ಅಪಮಾನ ಖಂಡಿಸಿ ಇದೇ 18 ರಂದು ನಗರದಲ್ಲಿ ಮೆರವಣಿಗೆ ಹಾಗೂ ಸಮಾವೇಶ ಹಮ್ಮಿಕೊಂಡಿದೆ. ಈ ಸಂಬಂಧ ಸಮಿತಿಯ ಪದಾಧಿಕಾರಿಗಳು ಮಠಾಧೀಶರನ್ನು ಮಂಗಳವಾರ ಭೇಟಿ ಮಾಡಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ನಂಜಾವಧೂತ ಸ್ವಾಮೀಜಿ ಅವರನ್ನು ಭೇಟಿ ಮಾಡಿದ ಸಮಿತಿಯ ಪದಾಧಿಕಾರಿಗಳು, ಸಮಾವೇಶದ ಬಗ್ಗೆ ಮಾಹಿತಿ ನೀಡಿದರು.

‘ನಾಡಗೀತೆ, ನಾಡಧ್ವಜಕ್ಕೆ ಅವಮಾನ ಮಾಡಿ, ಪಠ್ಯಪುಸ್ತಕಗಳಲ್ಲಿ ಕುವೆಂಪು, ನಾರಾಯಣ ಗುರು, ಅಂಬೇಡ್ಕರ್, ಬಸವಣ್ಣ ಮುಂತಾದ ಮಹಾತ್ಮರ ವಿಷಯಗಳನ್ನು ತಿರುಚಿ, ಉದ್ಧಟತನ ಮೆರೆಯುತ್ತಿರುವ ವ್ಯಕ್ತಿಗಳು, ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಗುತ್ತಿದೆ’ ಎಂದು ಪದಾಧಿಕಾರಿಗಳು ತಿಳಿಸಿದರು.

ಸಮಿತಿಯ ಪದಾಧಿಕಾರಿಗಳಾದ ಜಿ.ಬಿ. ಪಾಟೀಲ್, ಬಿ.ಟಿ. ಲಲಿತಾ ನಾಯಕ್, ಜಾಣಗೆರೆ ವೆಂಕಟರಾಮಯ್ಯ, ನಾಗರಾಜ್, ಶ್ರೀನಿವಾಸ ಜಿ. ಕಪ್ಪಣ್ಣ, ಹ.ರಾ. ಮಹೇಶ್, ಕೆ.ಎಚ್. ಕುಮಾರ್, ಎ.ಪಿ. ರಂಗನಾಥ್, ಎನ್.ಜಿ. ರಾಮಚಂದ್ರ, ಗೋವಿಂದಸ್ವಾಮಿ, ಎಲ್.ಎನ್. ಮುಕುಂದರಾಜ್ ಮತ್ತಿತರರು ನಿಯೋಗದಲ್ಲಿ ಇದ್ದರು.

‘ಸಾಂಸ್ಕೃತಿಕ ನಾಯಕರಾಗಿ ಬಸವಣ್ಣನ ಹೆಸರು ಘೋಷಿಸಿ’

ಸಾಹಿತ್ಯ ಅಕಾಡೆಮಿ ಅಧ್ಯಕ್ಷ ವಸಂತಕುಮಾರ್ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸಾಂಸ್ಕೃತಿಕ ನಾಯಕರಾಗಿ ಬಸವಣ್ಣನವರ ಹೆಸರು ಘೋಷಿಸುವಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಇಲ್ಲಿ ಒತ್ತಾಯಿಸಿದರು.

ವಿ.ಸೋಮಣ್ಣ ಪ್ರತಿಷ್ಠಾನ ಹಾಗೂ ಬಸವ ಕೇಂದ್ರದ ಆಶ್ರಯದಲ್ಲಿ ಮಂಗಳವಾರ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಶಿವಮೂರ್ತಿ ಮುರುಘಾ ಶರಣರಿಗೆ ಅಭಿನಂದನೆ ಹಾಗೂ ‘ವಚನ ಸಂಸ್ಕೃತಿಯ ಸಮುದಾಯ ತತ್ವ ಮತ್ತು ಸಮಕಾಲೀನ ಸಂದರ್ಭ’ ಎಂಬ ಡಿ.ಲಿಟ್ (ಡಾಕ್ಟರ್ ಆಫ್ ಲಿಟರೇಚರ್) ಗ್ರಂಥದ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾಂಸ್ಕೃತಿಕ ಮೇರು ಪ್ರಜ್ಞೆಯಾಗಿರುವ ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕರೆಂದು ಘೋಷಣೆ ಮಾಡುವಂತೆ ಮುರುಘಾ ಶರಣರು ಸಹ ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡುವಂತೆ ಕೋರಿದರು.

‘ಕೋವಿಡ್‌ಗೆ ಲಸಿಕೆ ಬಂದಿದೆ. ಮನಸ್ಸಿಗೆ ಹಾಗೂ ಸಮುದಾಯಕ್ಕೆ ಕಾಯಿಲೆ ಬಂದರೆ ಔಷಧ ನೀಡುವವರು ಯಾರು’ ಎಂದು ಪ್ರಶ್ನಿಸಿದ ಅವರು, ‘ಸಂತರ ಸಂದೇಶಗಳಲ್ಲಿ ಮನಸ್ಸಿನ ಕಾಯಿಲೆಗಳಿಗೆ ಪರಿಹಾರವಿದೆ. ಆದರೆ, ಸಂದೇಶಗಳನ್ನು ಯಾರೂ ಪಾಲಿಸುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ತಮ್ಮನ್ನೇ ವಿಮರ್ಶೆಗೆ ಒಳಪಡಿಸಿಕೊಳ್ಳಬೇಕು. ವಿಮರ್ಶೆಗೆ ಒಳಗಾಗದಿದ್ದರೆ ಕ್ರೂರಿ ಆಗುತ್ತೇವೆ. ಧರ್ಮವು ಕೇಡಲ್ಲ; ಅಮೃತ. ಧರ್ಮ, ಮತ ಎರಡೂ ಒಂದೇ ಎಂದು ಭಾವಿಸಿರುವುದೇ ಈ ಸಮಾಜದಲ್ಲಿ ನಡೆಯುತ್ತಿರುವ ಸಮಸ್ಯೆಗಳಿಗೆ ಕಾರಣ. ನುಡಿದಂತೆಯೇ ಬದುಕಬೇಕು. ಅದು ಸಾಧ್ಯವಾಗುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ಸೋಮಣ್ಣ ಪ್ರತಿಷ್ಠಾನ ಹಾಗೂ ಬಸವ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಪಡೆದ ಶಿವಮೂರ್ತಿ ಮುರುಘಾ ಶರಣರನ್ನು ಅಭಿನಂದಿಸಲಾಯಿತು. ಕಸಾಪ ರಾಜ್ಯ ಅಧ್ಯಕ್ಷ ಮಹೇಶ ಜೋಷಿ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತ ಕುಮಾರ್, ಬಸವ ರಮಾನಂದ ಸ್ವಾಮೀಜಿ, ಸಾಹಿತಿ ಓ.ಎಲ್. ನಾಗಭೂಷಣಸ್ವಾಮಿ, ಶೈಲಜಾ ಸೋಮಣ್ಣ ಇದ್ದಾರೆ – ಪ್ರಜಾವಾಣಿ ಚಿತ್ರ

> **ನಾನೂ ವೈಯಕ್ತಿಕ ಸಂಘರ್ಷ, ಸವಾಲುಗಳನ್ನು ಎದುರಿಸುತ್ತಿದ್ದೇನೆ. ಅದರಿಂದ ಶೀಘ್ರವೇ ಹೊರಬರುತ್ತೇನೆ**
> **ಶಿವಮೂರ್ತಿ ಮುರುಘಾ ಶರಣರು,** ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ

ಮುರುಘಾ ಶರಣರು ಮಾತನಾಡಿ, ‘ಸಂತೋಷ, ಸಂಘರ್ಷ ಹಾಗೂ ಶೋಷಣೆಯಲ್ಲೂ ಸಾಹಿತ್ಯ ರಚನೆಯಾಗುತ್ತದೆ. ಅಂಬೇಡ್ಕರ್ ಅವರು ಶೋಷಣೆಯನ್ನೇ ಏಣಿ ಮಾಡಿಕೊಂಡು ಮೇಲೆದ್ದವರು. ಶೋಷಣೆಯ ನೋವು ಉಣ್ಣುತ್ತಲೇ ಸಂವಿಧಾನ ರಚಿಸಿ, ಎಲ್ಲರಿಗೂ ದಾರಿದೀಪವಾದರು’ ಎಂದು ಹೇಳಿದರು.

‘ಸಮಾಜದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಅಸಮಾನತೆಯಿದೆ. ಮಹನೀಯರು ಹೋರಾಟ ನಡೆಸಿದರೂ ಈ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ’ ಎಂದು ಹೇಳಿದರು.

ಸಾಹಿತಿ ಡಾ.ಓ.ಎಲ್. ನಾಗಭೂಷಣ್ ಮಾತನಾಡಿ, ‘ಬದಲಾವಣೆ ಎಂಬುದು ಮಾತಿಗಷ್ಟೆ ಸೀಮಿತವಾಗಿದೆ’ ಎಂದು ಹೇಳಿದರು.

‘ಮುರುಘಾ ಶರಣರು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದವರು. ಸಾಮಾಜಿಕ ಮೌಲ್ಯಗಳನ್ನು ಉಳಿಸಲು ಶ್ರಮಿಸುತ್ತಿದ್ದಾರೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹೇಶ ಜೋಷಿ ಹೇಳಿದರು.

ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ ವರು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಲಮಂಡಳಿಯಿಂದ ₹2.50 ಕೋಟಿ ವೆಚ್ಚದ ಯೋಜನೆ

ನಾಯಂಡಹಳ್ಳಿ ಕೆರೆಗೆ ಶುದ್ಧೀಕರಿಸಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲುಷಿತ ನೀರಿನಿಂದ ಹಾಳಾಗಿರುವ ನಾಯಂಡಹಳ್ಳಿ ಕೆರೆಗೆ ತ್ಯಾಜ್ಯನೀರು ಸಂಸ್ಕರಣಾ ಘಟಕದಿಂದ (ಎಸ್‌ಟಿಪಿ) ಶುದ್ಧೀಕರಿಸಿದ ನೀರು ಹರಿಸಲು ಜಲ ಮಂಡಳಿ ಯೋಜನೆ ರೂಪಿಸಿದೆ.

ನಾಯಂಡಹಳ್ಳಿ ಕೆರೆಯು ಸುಮಾರು 15 ಎಕರೆ ಪ್ರದೇಶದಲ್ಲಿ ವ್ಯಾಪಿಸಿದ್ದು, ಈ ಕೆರೆಯನ್ನು ₹10 ಕೋಟಿ ವೆಚ್ಚದಲ್ಲಿ ಬಿಬಿಎಂಪಿ ಅಭಿವೃದ್ಧಿಪಡಿಸುತ್ತಿದೆ. ಸುತ್ತಲೂ ಏರಿಗಳನ್ನು ನಿರ್ಮಿಸಿ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಿದೆ.

ಪಾದಚಾರಿ ಮಾರ್ಗದ ಎರಡೂ ಬದಿಯಲ್ಲಿ ಚೈನ್‌ಲಿಂಕ್ ತಂತಿ ಬೇಲಿ ನಿರ್ಮಿಸಿದೆ. ಆದರೂ ಕಲುಷಿತ ನೀರು ಹರಿದು ಕೆರೆ ಸಂಪೂರ್ಣ ಹಾಳಾಗಿದೆ. ನೀರು ಹಸಿರು ಬಣ್ಣಕ್ಕೆ ತಿರುಗಿದ್ದು, ಕೆರೆಯ ತುಂಬೆಲ್ಲಾ ಜೊಂಡು ತುಂಬಿಕೊಂಡಿದೆ. ಅದನ್ನು ತೆಗೆದು ಮತ್ತೊಮ್ಮೆ ಅಭಿವೃದ್ಧಿಪಡಿಸಲು ಬಿಬಿಎಂಪಿ ಯೋಜನೆ ರೂಪಿಸಿದೆ.

ವೃಷಭಾವತಿ ಕಾಲುವೆಯಲ್ಲಿ ಹರಿಯುವ ನೀರನ್ನು ಶುದ್ಧೀಕರಿಸಿ ಕೆರೆಗೆ ಬಿಡುವ ಕಾಮಗಾರಿಯೂ ಇದರಲ್ಲಿ ಸೇರಿದೆ. ಯೋಗ ಕೇಂದ್ರ, ಬೋಟಿಂಗ್, ಮಕ್ಕಳ ಆಟದಂಗಳ, ವಯಸ್ಕರಿಗೆ ಹೊರಾಂಗಣ ವ್ಯಾಯಾಮ ಶಾಲೆ ನಿರ್ಮಿಸಲು ಪಾಲಿಕೆ ಉದ್ದೇಶಿಸಿದೆ.

ನಾಯಂಡಹಳ್ಳಿ ಕೆರೆಯಲ್ಲಿ ಜೊಂಡು ಬೆಳೆದಿರುವುದು – ಪ್ರಜಾವಾಣಿ ಚಿತ್ರ

‘ನಾಯಂಡಹಳ್ಳಿ ಕೆರೆಗೆ ದಿನವೊಂದಕ್ಕೆ 6 ಕೋಟಿಯಿಂದ 8 ಕೋಟಿ ಲೀಟರ್ ನೀರು ಬೇಕಾಗುತ್ತದೆ. ಸಮೀಪದಲ್ಲೇ ಇರುವ ಎಸ್‌ಟಿಪಿಯಿಂದ ಪೈಪ್‌ಲೈನ್ ಮೂಲಕ ತರಲಾಗುತ್ತದೆ. ಇದಕ್ಕಾಗಿ ₹2.50 ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದ್ದು, ಟೆಂಡರ್ ಕರೆಯಲಾಗಿದೆ’ ಎಂದು ಜಲ ಮಂಡಳಿ ಮುಖ್ಯ ಎಂಜಿನಿಯರ್ (ತ್ಯಾಜ್ಯ ನೀರು ನಿರ್ವಹಣೆ) ಜಿ.ಸಿ. ಗಂಗಾಧರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಎಸ್‌ಟಿಪಿಯಿಂದ ಶುದ್ಧೀಕರಿಸಿದ ನೀರನ್ನು ಕೆರೆ ಹರಿಸುತ್ತಿರುವುದು ಇದೇ ಮೊದಲಲ್ಲ. ಕಲ್ಕೆರೆ ಮತ್ತು ರಾಚೇನಹಳ್ಳಿ ಕೆರೆಯಲ್ಲೂ ಈ ಪ್ರಯೋಗ ಮಾಡಲಾಗಿದೆ. ನಾಯಂಡಹಳ್ಳಿ ಕೆರೆಗೆ ನೀರು ಹರಿಸುವ ಯೋಜನೆಗೆ ಬಿಬಿಎಂಪಿ ಹಣಕಾಸು ಒದಗಿಸಿದೆ. ಪೈಪ್‌ಲೈನ್ ಅಳವಡಿಸಿ ಕೆರೆಗೆ ನೀರು ಹರಿಸುವುದಷ್ಟೇ ನಮ್ಮ ಕೆಲಸ’ ಎಂದು ಸ್ಪಷ್ಟಪಡಿಸಿದರು.

ಕೆಪಿಸಿಎಲ್ ಎಂ.ಡಿಯಾಗಿ ಶ್ರೀಕರ್

ಬೆಂಗಳೂರು: ಐಎಎಸ್ ಅಧಿಕಾರಿ ಎಂಎಸ್. ಶ್ರೀಕರ್ ಅವರನ್ನು ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಿ ಮಂಗಳವಾರ ಆದೇಶ ಹೊರಡಿಸಲಾಗಿದೆ.

ಐಎಎಸ್ ಅಧಿಕಾರಿ ವಿ. ಪೊನ್ನುರಾಜ್ ಅವರನ್ನು ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರದಿಂದ ಬಿಡುಗಡೆ ಮಾಡಲಾಗಿದೆ. ಶ್ರೀಕರ್ ಅವರಿಗೆ ಮುಖ್ಯಮಂತ್ರಿಯವರ ಕಾರ್ಯದರ್ಶಿ ಹುದ್ದೆಯನ್ನೂ ಹೆಚ್ಚುವರಿಯಾಗಿ ನೀಡಲಾಗಿದೆ.

ಐಎಎಸ್ ಅಧಿಕಾರಿಗಳಾಗಿ ಬಡ್ತಿ ಹೊಂದಿರುವ ಸಿ.ಎನ್. ಶ್ರೀಧರ ಅವರನ್ನು ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ ಹೆಚ್ಚುವರಿ ನಿರ್ದೇಶಕರನ್ನಾಗಿ, ಟಿ.ಕೆ. ಸ್ವರೂಪ ಅವರನ್ನು ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂಸ್ಥೆಯ ಹೆಚ್ಚುವರಿ ಯೋಜನಾ ನಿರ್ದೇಶಕರನ್ನಾಗಿ ಮತ್ತು ಎಂ.ಎಸ್. ದಿವಾಕರ ಅವರನ್ನು ಕೃಷಿ ಇಲಾಖೆಯ ಹೆಚ್ಚುವರಿ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಎಎಪಿ ಸೇರಿದ ‘ಮುಖ್ಯಮಂತ್ರಿ’ ಚಂದ್ರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗಷ್ಟೇ ಕಾಂಗ್ರೆಸ್ ಪಕ್ಷ ತೊರೆದಿದ್ದ ಚಿತ್ರನಟ ‘ಮುಖ್ಯಮಂತ್ರಿ’ ಚಂದ್ರು ಮಂಗಳವಾರ ಆಮ್ ಆದ್ಮಿ ಪಕ್ಷ (ಎಎಪಿ) ಸೇರಿದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ, ಉಪಾಧ್ಯಕ್ಷ ಭಾಸ್ಕರ್ ರಾವ್ ಪಕ್ಷದ ಬಾವುಟ ನೀಡಿ ಚಂದ್ರು ಅವರನ್ನು ಸ್ವಾಗತಿಸಿದರು. ಕೆ.ಮಥಾಯಿ, ವಿಜಯ್ ಶರ್ಮಾ, ಶಾಂತಲಾ ದಾಮ್ಲೆ ಸೇರಿ ಪಕ್ಷದ ಇತರ ಮುಖಂಡರಿದ್ದರು.

ಜನತಾ ಪರಿವಾರದಲ್ಲಿ ರಾಜಕೀಯ ಆರಂಭಿಸಿದ್ದ ಚಂದ್ರು, ಗೌರಿ ಬಿದನೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. ನಂತರ ಬಿಜೆಪಿ ಸೇರಿ ವಿಧಾನ ಪರಿಷತ್ ಸದಸ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. 2013ರಲ್ಲಿ ಕಾಂಗ್ರೆಸ್ ಪಕ್ಷ ಸೇರಿದ್ದರು. ಸೂಕ್ತ ಸ್ಥಾನಮಾನ ನೀಡಿಲ್ಲ ಎಂಬ ಕಾರಣಕ್ಕೆ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಮೇ 28ರಂದು ರಾಜೀನಾಮೆ ಸಲ್ಲಿಸಿದ್ದರು.

ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘದಿಂದ ದತ್ತಿಗಳ ಸಹಯೋಗದಲ್ಲಿ ಭಾನುವಾರ ನಗರದ ಶೇಷಾದ್ರಿಪುರಂ ಈಡಿಗ ಸಂಘದ ಸಭಾಂಗಣದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು

ಈಡಿಗ ವಿದ್ಯಾರ್ಥಿವೇತನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘದ ವತಿಯಿಂದ ದತ್ತಿಗಳ ಸಹಯೋಗದಲ್ಲಿ ಭಾನುವಾರ ನಗರದ ಶೇಷಾದ್ರಿಪುರಂ ಈಡಿಗ ಸಂಘದ ಸಭಾಂಗಣದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಎಂ.ನಾಗರಾಜ್ ಅವರು ಕಳೆದ ಸಾಲಿನಲ್ಲಿ ಅಗ್ರ ಶ್ರೇಯಾಂಕಿತ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕ ನೆರವು ನೀಡಿದರು.

ಗೌರವ ಡಾಕ್ಟರೇಟ್ ಪಡೆದಿರುವ ನಳಿನಾಕ್ಷಿ ಸಣ್ಣಪ್ಪ, ಡಾಕ್ಟರೇಟ್ ಗಳಿಸಿದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಎಸ್. ಕುನಾಲ್, ಸಾಫ್ಟ್‌ವೇರ್ ಕಂಪನಿ ತಾಂತ್ರಿಕ ಮುಖ್ಯಸ್ಥ ಡಾ.ಎಸ್. ಅನಿಲ್ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮುಖ್ಯ ಅತಿಥಿಗಳಾಗಿ ಕೆಪಿಎಸ್‌ಸಿ ಮಾಜಿ ಸದಸ್ಯ ಡಾ.ಲಕ್ಷ್ಮೀನರಸಯ್ಯ, ಜನತಾ ಶಿಕ್ಷಣ ಸಂಸ್ಥೆಯ ಟ್ರಸ್ಟಿ ಇಂದಿರಾ ಗೋಪಾಲಕೃಷ್ಣ, ಸೇಂಟ್ ಫಿಲೋಮಿನಾಸ್ ಪಬ್ಲಿಕ್ ಸ್ಕೂಲ್ ಅಧ್ಯಕ್ಷ ಟಿ.ವಿ. ಶ್ರೀನಿವಾಸಮೂರ್ತಿ, ಸಂಘದ ಉಪಾಧ್ಯಕ್ಷ ಇ.ವಿ.ಸತ್ಯನಾರಾಯಣ, ಕಾರ್ಯದರ್ಶಿ ಎಸ್.ಜೆ. ಕಾಳೇಗೌಡ, ಪತ್ರಕರ್ತ–ಸಾಹಿತಿ ಲಕ್ಷ್ಮಣ ಕೊಡಸೆ ಸೇರಿ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

ನೆಲಮಂಗಲ ನಗರಸಭೆ: ಲತಾ ಅಧ್ಯಕ್ಷೆ, ಸುಜಾತಾ ಉಪಾಧ್ಯಕ್ಷೆ

ಬೆಂಗಳೂರು: ನೆಲಮಂಗಲ ನಗರಸಭೆಯ ನೂತನ ಅಧ್ಯಕ್ಷೆಯಾಗಿ ಜೆಡಿಎಸ್‌ನ ಲತಾ ಹೇಮಂತಕುಮಾರ್, ಉಪಾಧ್ಯಕ್ಷೆಯಾಗಿ ಕಾಂಗ್ರೆಸ್‌ನ ಸುಜಾತಾ ಮುನಿಯಪ್ಪ ಅವರು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನ ಸಾಮಾನ್ಯ ಹಾಗೂ ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೆ ಮೀಸಲಿತ್ತು. ನೂತನ ಅಧ್ಯಕ್ಷೆ ಹಾಗೂ ಉಪಾಧ್ಯಕ್ಷರು ಹಾಗೂ ಸದಸ್ಯರು ವಿಜಯೋತ್ಸವ ಆಚರಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಲತಾ ಹೇಮಂತಕುಮಾರ್, ‘23 ಸದಸ್ಯರ ಮೂರು ವರ್ಷಗಳ ನಿರಂತರ ಹೋರಾಟಕ್ಕೆ ಜಯ ಸಿಕ್ಕಿದೆ’ ಎಂದರು.

ನೆಲಮಂಗಲ ನಗರಸಭೆ ನೂತನ ಅಧ್ಯಕ್ಷೆ ಲತಾ ಹೇಮಂತಕುಮಾರ್, ಉಪಾಧ್ಯಕ್ಷೆ ಸುಜಾತಾ ಮುನಿಯಪ್ಪ (ಮಧ್ಯದಲ್ಲಿ ದೊಡ್ಡ ಹಾರ ಹಾಕಿರುವವರು) ಹಾಗೂ ಸದಸ್ಯರು ಮಂಗಳವಾರ ವಿಜಯೋತ್ಸವ ಆಚರಿಸಿದರು.

ಉಪ ವಿಭಾಗಾಧಿಕಾರಿ ತೇಜಸ್, ತಹಶೀಲ್ದಾರ್ ಕೆ.ಮಂಜುನಾಥ್, ಹೆಚ್ಚುವರಿ ತಹಶೀಲ್ದಾರ್ ಪ್ರಕಾಶ್, ಪೌರಾಯುಕ್ತ ರಾಜಶೇಖರ್ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು.

ಕಾನ್ಪುರ ಹಿಂಸಾಚಾರ ಪ್ರಕರಣ: ಬಿಜೆಪಿ ನಾಯಕ ಸೆರೆ

ಕಾನ್ಪುರ: ನಗರದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಜಿಲ್ಲಾ ಯುವ ಮೋರ್ಚಾದ ಮಾಜಿ ಕಾರ್ಯದರ್ಶಿ ಹರ್ಷಿತ್ ಶ್ರೀವಾಸ್ತವ ಸೇರಿದಂತೆ 12 ಮಂದಿಯನ್ನು ಬಂಧಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ 10 ಮಂದಿ ಶಂಕಿತರನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ನಕ್ಷೆ ಉಲ್ಲಂಘಿಸಿರುವ 36,759 ಕಟ್ಟಡಗಳನ್ನು ಗುರುತಿಸಿರುವ ಬಿಬಿಎಂಪಿ

ಅಕ್ರಮ ಕಟ್ಟಡ: ಶೇ 50ರಷ್ಟು ಸರ್ವೆ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಮಂಜೂರಾತಿ ಪಡೆದ ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳ ಬಗ್ಗೆ ಆರು ವರ್ಷಗಳಿಂದ ಸರ್ವೆ ನಡೆಸುತ್ತಿರುವ ಬಿಬಿಎಂಪಿ, ಶೇ 50ರಷ್ಟು ಕಟ್ಟಡಗಳನ್ನಷ್ಟೇ ಸರ್ವೆ ಮಾಡಿದೆ.

‘2016ರ ಜನವರಿ 1ರಿಂದ ಸರ್ವೆ ಕಾರ್ಯ ಆರಂಭಿಸಲಾಯಿತು. ನಕ್ಷೆ ಉಲ್ಲಂಘಿಸಿರುವ 36,759 ಕಟ್ಟಡಗಳನ್ನು ಗುರುತಿಸಲಾಗಿದ್ದು, ಅವುಗಳ ಪೈಕಿ 16,086 ಕಟ್ಟಡಗಳ ಸರ್ವೆ ಪೂರ್ಣಗೊಳಿಸಲಾಗಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಯೋಜನೆ) ಪಿ.ಎನ್. ರವೀಂದ್ರ ತಿಳಿಸಿದರು.

‘ಮಂಜೂರಾತಿಯನ್ನೇ ಪಡೆಯದೆ ಕಟ್ಟಡ ನಿರ್ಮಿಸಿರುವ 1,81,236 ಕಟ್ಟಡಗಳನ್ನು ಗುರುತಿಸಲಾಗಿದೆ. ಅವುಗಳ ಸರ್ವೆ ಕಾರ್ಯವನ್ನು ಪೂರ್ಣಗೊಳಿಸುವುದು ನಮ್ಮ ಮೊದಲ ಆದ್ಯತೆ. ಈ ಕಾರ್ಯವನ್ನು ಚುರುಕುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಸೂಚನೆ ನೀಡಿದ್ದಾರೆ’ ಎಂದೂ ಹೇಳಿದರು.

3 ಲಕ್ಷ ಬೀದಿನಾಯಿ: ‘ಬಿಬಿಎಂಪಿ ವ್ಯಾಪ್ತಿಯಲ್ಲಿ 3 ಲಕ್ಷಕ್ಕೂ ಹೆಚ್ಚು ಬೀದಿ ನಾಯಿಗಳಿವೆ ಎಂದು ಗುರುತಿಸಲಾಗಿದ್ದು, ಶೇ 70ರಷ್ಟು ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ನಿತ್ಯ 240 ನಾಯಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ’ ಎಂದು ರವೀಂದ್ರ ತಿಳಿಸಿದರು. ‘ರೇಬಿಸ್ ಶಂಕಿತ ನಾಯಿಗಳಿದ್ದರೆ ಮಾಹಿತಿ ನೀಡಲು ಸಹಾಯವಾಣಿ (6364893322) ತೆರೆಯಲಾಗಿದೆ. ತಿಂಗಳಿಗೆ ಸರಾಸರಿ 10 ಪ್ರಕರಣಗಳು ವರದಿಯಾಗುತ್ತಿವೆ’ ಎಂದು ಹೇಳಿದರು.

ಪ್ರಹ್ಲಾದ್ ವಿರುದ್ಧದ ದೂರು: ವಾರದಲ್ಲಿ ವರದಿ

‘ರಸ್ತೆ ಗುಂಡಿ ಮುಚ್ಚಲು ಪೈಥಾನ್ ಯಂತ್ರ ಪೂರೈಸಿರುವ ಅಮೆರಿಕ್ ರೋಡ್ ಟೆಕ್ನಾಲಜೀಸ್ ಸಲ್ಯೂಷನ್ಸ್(ಎಆರ್‌ಟಿಸಿ) ಕಂಪನಿಯ ನಿರ್ದೇಶಕರ ಮೇಲೆ ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ ಮೂಲಸೌಕರ್ಯ) ಬಿ.ಎಸ್. ಪ್ರಹ್ಲಾದ್ ಹಲ್ಲೆ ನಡೆಸಿದ್ದಾರೆ ಎಂಬ ದೂರಿನ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪಿ.ಎನ್.ರವೀಂದ್ರ ತಿಳಿಸಿದರು. ‘ದೂರದಾರರು ಮತ್ತು ಪ್ರಹ್ಲಾದ್ ಅವರಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆ ನಡೆಸಿ ವಾರದಲ್ಲಿ ಮುಖ್ಯ ಆಯುಕ್ತರಿಗೆ ವರದಿ ನೀಡಲಾಗುವುದು. ಪ್ರಹ್ಲಾದ್ ಅವರ ವಿರುದ್ಧ ಕ್ರಮ ಕೈಗೊಳ್ಳದಂತೆ ಯಾರಿಂದಲೂ ಒತ್ತಡ ಬಂದಿಲ್ಲ. ನ್ಯಾಯ ಸಮ್ಮತ ವಿಚಾರಣೆ ನಡೆಸಲಾಗುವುದು’ ಎಂದು ಸ್ಪಷ್ಟಪಡಿಸಿದರು.

ನಗರದಲ್ಲಿ 339 ಮಂದಿಗೆ ಕೊರೊನಾ ಸೋಂಕು ದೃಢ

ಕೋವಿಡ್ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ಕೋವಿಡ್ ಪರೀಕ್ಷೆಗಳ ಹೆಚ್ಚಳದಿಂದ ಪ್ರಕರಣಗಳ ಸಂಖ್ಯೆಯೂ ಏರಿಕೆಕಂಡಿದ್ದು, ಮಂಗಳವಾರ 339 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ಇವು ಸುಮಾರು ಮೂರೂವರೆ ತಿಂಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳಾಗಿವೆ.

ಫೆ.26ರಂದು ನಗರದಲ್ಲಿ 345 ಪ್ರಕರಣಗಳು ವರದಿಯಾಗಿದ್ದವು. ನಂತರ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿ, ದೈನಂದಿನ ಸೋಂಕಿತರ ಸಂಖ್ಯೆ ಏಪ್ರಿಲ್, ಮೇ ತಿಂಗಳಲ್ಲಿ 50ರ ಆಸುಪಾಸಿನಲ್ಲಿತ್ತು. ಹೀಗಾಗಿ, ಪರೀಕ್ಷೆಗಳ ಸಂಖ್ಯೆಯನ್ನು ಇಳಿಕೆ ಮಾಡಲಾಗಿತ್ತು. ನೆರೆಯ ರಾಜ್ಯಗಳಲ್ಲಿ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ನಗರದಲ್ಲಿ ದೈನಂದಿನ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲಾಗಿದೆ. ಇದರಿಂದಾಗಿ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ.

ನಗರದಲ್ಲಿ ಮಂಗಳವಾರ 14,908 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1.84ಕ್ಕೆ ಏರಿಕೆಯಾಗಿದೆ. ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ. ಸೋಂಕಿತರಾದವರಲ್ಲಿ ತೀವ್ರ ನಿಗಾ ಘಟಕದಲ್ಲಿ ಮೂರು ಮಂದಿಯೂ ಸೇರಿ 21 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. ನಗರದಲ್ಲಿ ಮರಣ ದರ ಶೇ 0.06 ರಷ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 17.89 ಲಕ್ಷ ದಾಟಿದೆ. ಅವರಲ್ಲಿ 17.70 ಲಕ್ಷಕ್ಕೂ ಅಧಿಕ ಮಂದಿ ಚೇತರಿಸಿಕೊಂಡಿದ್ದಾರೆ.

8 ಜಿಲ್ಲೆಗಳಲ್ಲಿ ಪ್ರಕರಣ: ರಾಜ್ಯದಲ್ಲಿ ಮಂಗಳವಾರ 8 ಜಿಲ್ಲೆಗಳಲ್ಲಿ 348 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 2,478ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿಯೇ 2,390 ಸೋಂಕಿತರು ಇದ್ದಾರೆ. ಸಕ್ರಿಯ ಪ್ರಕರಣ ಮೂರು ಜಿಲ್ಲೆಗಳಲ್ಲಿ ಎರಡಂಕಿ ಹಾಗೂ 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ರಾಜ್ಯದಲ್ಲಿ ಒಂದು ದಿನದ ಅವಧಿಯಲ್ಲಿ 16,474 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 2.11 ರಷ್ಟು ಇದೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.53 ಲಕ್ಷ ದಾಟಿದೆ.

‘ಮಂಕಿಪಾಕ್ಸ್: ಎಲ್ಲೆಡೆ ಮುನ್ನೆಚ್ಚರಿಕೆ’

ಬೆಂಗಳೂರು: ‘ಜಗತ್ತಿನ ವಿವಿಧೆಡೆ ಹರಡುತ್ತಿರುವ ಮಂಕಿಪಾಕ್ಸ್ (ಮಂಗನ ಸಿಡುಬು) ತಡೆಗೆ ವಿಮಾನ ನಿಲ್ದಾಣಗಳಲ್ಲಿ ತಪಾಸಣೆ, ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸುವಿಕೆ ಸೇರಿದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಈ ಬಗ್ಗೆ ಅವರು ಟ್ವೀಟ್ ಮಾಡಿದ್ದು, ‘ರಾಜ್ಯದಲ್ಲಿ ಕಾಯಿಲೆಯ ಮುನ್ಸೂಚನೆ ದೊರೆತ ಕೂಡಲೇ ರೋಗ ತಡೆಗೆ ಕಾರ್ಯಗತವಾಗಿದ್ದೇವೆ. ರೋಗ ಲಕ್ಷಣ ಇರುವವರಿಗೆ ತಪಾಸಣೆ ನಡೆಸಲಾಗುತ್ತಿದೆ’ ಎಂದು ಹೇಳಿದ್ದಾರೆ.

ಈ ಬಗ್ಗೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. ‘ವಿದೇಶಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳು ಪತ್ತೆಯಾಗಿರುವುದರಿಂದ ರಾಜ್ಯದಲ್ಲಿ ಕಣ್ಗಾವಲು ಚಟುವಟಿಕೆಗಳನ್ನು ತೀವ್ರಗೊಳಿಸಲಾಗಿದೆ. ಪ್ರಕರಣಗಳು ವರದಿಯಾದಲ್ಲಿ ರೋಗ ಹರಡದಂತೆ ಕ್ರಮಕೈಗೊಳ್ಳಬೇಕಾಗುತ್ತದೆ’ ಎಂದಿದ್ದಾರೆ.

ಸ್ಟೇಜ್ ಬೆಂಗಳೂರು ಸಂಸ್ಥೆಯು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ‘ಮಕ್ಕಳ ನಾಟಕೋತ್ಸವ’ದಲ್ಲಿ ಕಲಾವಿದ ಗೋಕುಲ ಸಹೃದಯ ಅವರು ‘ಚಿಟ್ಟೆ’ ಏಕವ್ಯಕ್ತಿ ರಂಗ ಪ್ರಯೋಗ ಪ್ರಸ್ತುತಪಡಿಸಿದರು —ಪ್ರಜಾವಾಣಿ ಚಿತ್ರ

ಡೆಂಗಿ: ಮುನ್ನೆಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹವಾಮಾನ ಬದಲಾವಣೆ ಹಾಗೂ ಅಕಾಲಿಕ ಮಳೆಯಿಂದಾಗಿ ರಾಜ್ಯದಲ್ಲಿ ಸೊಳ್ಳೆಗಳ ಕಡಿತದಿಂದ ಉಂಟಾಗುವ ಡೆಂಗಿ, ಚಿಕೂನ್‌ಗುನ್ಯಾ ಹಾಗೂ ಮಲೇರಿಯಾ ಹರಡುವಿಕೆ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಈ ರೋಗಗಳ ನಿಯಂತ್ರಣಕ್ಕೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸುತ್ತೋಲೆ ಹೊರಡಿಸಿದ್ದಾರೆ. ಡೆಂಗಿ ಹಾಗೂ ಚಿಕೂನ್‌ಗುನ್ಯಾ ನಿಯಂತ್ರಣಕ್ಕಾಗಿ ಈಡಿಸ್ ಲಾರ್ವಾ ಸಮೀಕ್ಷೆ ಹಾಗೂ ಸೊಳ್ಳೆಗಳ ಉತ್ಪತ್ತಿ ತಾಣಗಳ ನಾಶಕ್ಕೆ ಕ್ರಮವಹಿಸುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

‘15 ದಿನಕ್ಕೊಮ್ಮೆ ಪ್ರತಿ ಮನೆಗಳಲ್ಲಿ ಈಡಿಸ್ ಲಾರ್ವಾ ಸಮೀಕ್ಷೆ ನಡೆಸಬೇಕು. ಈ ಸಮೀಕ್ಷೆಯಿಂದ ಲಭ್ಯವಾಗುವ ಮಾಹಿತಿಯನ್ನು ವಿಶ್ಲೇಷಿಸಿ, ಅಗತ್ಯ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಹೇಳಿದ್ದಾರೆ.

ಶಿವಾಚಾರ್ಯ ಸಂಘ ಪತ್ರಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಭೂತಿಪುರ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮೂಲಕ ವೀರಶೈವ ಶಿವಾಚಾರ್ಯ ಸಂಘದವರು ಮುಖ್ಯಮಂತ್ರಿಗಳಿಗೆ ನೀಡಿದ ಪತ್ರದಲ್ಲಿನ ಸಂಗತಿಗಳು ಸತ್ಯಕ್ಕೆ ದೂರವಾಗಿದ್ದು ಪ್ರಕ್ಷುಬ್ಧ ಸ್ಥಿತಿಯಲ್ಲಿ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ’ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಹೇಳಿದ್ದಾರೆ.

‘ನಾವು ಸುಮ್ಮನೆ ಕುಳಿತರೆ ಅದೇ ಸತ್ಯವೆಂದು ಅರ್ಥೈಸಲು ಅವಕಾಶ ಕೊಟ್ಟಂತಾಗುತ್ತದೆ. ಇದು ಯಾವುದೇ ರಾಜಕೀಯ ವೋಟ್ ಬ್ಯಾಂಕ್ ಪಾಲಿಟಿಕ್ಸ್ ಅಲ್ಲ. ಶಿವಾಚಾರ್ಯರು ಕೂಡಲೇ ಇದನ್ನು ನಿಲ್ಲಿಸಬೇಕು. ಎಲ್ಲರನ್ನೂ ಎಲ್ಲ ಕಾಲಕ್ಕೂ ಮೂರ್ಖರನ್ನಾಗಿಸುವುದು ಸಾಧ್ಯವಿಲ್ಲ. ಆದ್ದರಿಂದ, ಮಹಾಸಭಾದ ಪ್ರತಿ ಜಿಲ್ಲಾ ಮತ್ತು ತಾಲೂಕು ಘಟಕಗಳು ಮಾಧ್ಯಮ ಗೋಷ್ಠಿಗಳನ್ನು ನಡೆಸಿ ಶಿವಾಚಾರ್ಯರ ಗೊಂದಲಗಳನ್ನು ವಿರೋಧಿಸಿ ಸತ್ಯ ಏನೆಂದು ಜನರಿಗೆ ತಿಳಿಸಬೇಕು’ ಎಂದು ಹೇಳಿದ್ದಾರೆ.

ಶಿವಾಚಾರ್ಯರಿಗೆ ಕೇಳಬಹುದಾದ ಪ್ರಶ್ನೆಗಳನ್ನು ಪಟ್ಟಿ ಮಾಡಿರುವ ಅವರು, ‘ಬಸವಣ್ಣ ಯಾರಿಂದಲೂ ದೀಕ್ಷೆ ಪಡೆಯಲಿಲ್ಲ. ವೀರಶೈವದ ಪ್ರಚಾರ ಮಾಡಲಿಲ್ಲ. ಹೊಸ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು’ ಎಂಬುದನ್ನು ಮನದಟ್ಟು ಮಾಡಿ’ ಎಂದು ತಿಳಿಸಿದ್ದಾರೆ.

ಅಂಶಗಳ ಪಟ್ಟಿ

- ವೀರಶೈವರು ಬಹುಕಾಲದಿಂದ ಬಸವಣ್ಣ ಮತ್ತು ಬಸವ ತತ್ವಗಳನ್ನು ವಿರೋಧಿಸುತ್ತಲೇ ಬಂದಿದ್ದಾರೆ.
- ಇತ್ತೀಚಿನವರೆಗೂ ವೀರಶೈವ ಪಂಚಾಚಾರ್ಯರು ಬಸವಣ್ಣನವರ ಫೋಟೊ ಹಾಕಿದ ಕಾರ್ಯಕ್ರಮಕ್ಕೆ ಬರುತ್ತಿರಲಿಲ್ಲ.
- ತಾವೇ ಧರ್ಮ ಸಂಸ್ಥಾಪಕರೆಂದೂ ಬಸವಣ್ಣ ತಮ್ಮ ಶಿಷ್ಯರೆಂದು ಸುಳ್ಳುಗಳನ್ನು ಹೇಳುತ್ತಲೇ ಬಂದಿದ್ದಾರೆ. ಅದು ಅವರ ಕಟ್ಟುಕತೆ. ಅದಕ್ಕೆ ಯಾವುದೇ ಆಧಾರವಿಲ್ಲ.
- ಶರಣರ ಇಪ್ಪತ್ತೆರಡು ಸಾವಿರ ವಚನಗಳನ್ನು 17 ರಿಂದ 20ನೆಯ ಶತಮಾನದವರೆಗೆ 300 ವರ್ಷ ಮುಚ್ಚಿಟ್ಟದ್ದವರೇ ವೀರಶೈವರು.
- ಶರಣರ ವಚನಗಳನ್ನು ತಿದ್ದಿ ಕೆಲವು ಭ್ರಷ್ಟತೆಗಳನ್ನು ಅವುಗಳಲ್ಲಿ ತುರುಕಿದವರೇ ವೀರಶೈವರು. 648 ವಚನಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಅನಗತ್ಯವಾಗಿ ಸೇರಿದ್ದಾರೆ. ಸುಮಾರು ಇನ್ನೂರು ವಚನಗಳಲ್ಲಿ 'ಲಿಂಗಾಯತ ' ಶಬ್ದವನ್ನು ತೆಗೆದು 'ವೀರಶೈವ ' ಶಬ್ದವನ್ನು ಸೇರಿಸಿದವರೇ ವೀರಶೈವರು.
- ಈಗ ಪಠ್ಯಪುಸ್ತಕ ವಿವಾದದಲ್ಲಿ ಅನಗತ್ಯವಾಗಿ ಮೂಗುತೂರಿಸಿ ತಮಗೆ ಅನುಕೂಲವಾಗುವಂತೆ ತಿದ್ದುಪಡಿ ಮಾಡಿಸಿಕೊಳ್ಳಲು ಮಹಾಂತಲಿಂಗ ಶಿವಾಚಾರ್ಯ ಮುಖಾಂತರ ಮುಖ್ಯಮಂತ್ರಿಗಳಿಗೆ ತಪ್ಪು ಮಾಹಿತಿ ನೀಡುವ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಇದನ್ನು ನಾವು ವಿರೋಧಿಸದಿದ್ದರೆ ಇದೇ ಸತ್ಯವೆಂದು ಭಾವಿಸಿ ತಿದ್ದುಪಡಿ ಮಾಡಲು ಅವಕಾಶ ನೀಡಿದಂತಾಗುತ್ತದೆ.

‘ಡಾನ್‌ಬಾಸ್–ಕ್ರಿಮಿಯಾ ನೇರ ಮಾರ್ಗ’

ಕೀವ್ / ಮಾಸ್ಕೊ / ಬರ್ಲಿನ್ (ರಾಯಿಟರ್ಸ್/ಎಎಫ್‌ಪಿ): ಉಕ್ರೇನಿನ ಆಗ್ನೇಯ ಭಾಗದಲ್ಲಿ ಸಂಪೂರ್ಣ ನಿಯಂತ್ರಣ ಸಾಧಿಸಿದ್ದು, ಈ ಹಿಂದೆ ವಶಪಡಿಸಿಕೊಂಡಿರುವ ಕ್ರಿಮಿಯಾಕ್ಕೆ ಭೂ ಪ್ರದೇಶದ ಮೂಲಕ ನೇರ ಸಂಪರ್ಕ ಕೊಂಡಿಯನ್ನು ಬೆಸೆಯಲಾಗಿದೆ ಎಂದು ರಷ್ಯಾ ಘೋಷಿಸಿದೆ.

ರಷ್ಯಾದ ವಶದಲ್ಲಿರುವ ಡಾನ್‌ಬಾಸ್ ಪ್ರದೇಶದ ಮೂಲಕ ಕ್ರಿಮಿಯಾಕ್ಕೆ ರಸ್ತೆ ಮಾರ್ಗ ಹಾದುಹೋಗಿದೆ ಎಂದು ರಷ್ಯಾದ ರಕ್ಷಣಾ ಸಚಿವ ಸರ್ಗೈ ಶೋಯಿಗು ಮಂಗಳವಾರ ತಿಳಿಸಿರುವುದಾಗಿ ‘ದಿ ಕೀವ್ ಇಂಡಿಪೆಂಡೆಂಟ್’ ಸುದ್ದಿಸಂಸ್ಥೆ ವರದಿ ಮಾಡಿದೆ.

ಪರಿಸ್ಥಿತಿ ಉದ್ವಿಗ್ನ: ಯುದ್ಧ ಕೇಂದ್ರಿತ ಸೆವೆರೊಡೊನೆಟ್‌ಸ್ಕ್ ನಗರ ರಷ್ಯಾ ಮತ್ತು ಉಕ್ರೇನ್ ಪಡೆಗಳ ಕಾದಾಟದಿಂದ ಇಡೀ ನಗರದ ಮೂಲಸೌಕರ್ಯಗಳು ಅಸ್ತವ್ಯಸ್ತಗೊಂಡಿವೆ.

ನಗರದಲ್ಲಿ ಭೀಕರ ಸ್ವರೂಪದ ಯುದ್ಧ ಮುಂದುವರಿದಿದ್ದು, ಪರಿಸ್ಥಿತಿ ಉದ್ವಿಗ್ನವಾಗಿದೆ. ಬೃಹತ್ ಫಿರಂಗಿಗಳು ಮತ್ತು ಯುದ್ಧೋಪಕರಣಗಳೊಂದಿಗೆ ರಷ್ಯಾ ಸೈನಿಕರು ಬೀಡು ಬಿಟ್ಟಿದ್ದು, ದಾಳಿಗೆ ಪ್ರಯತ್ನಿಸುತ್ತಾರೆ. ಅವರನ್ನು ಹಿಮ್ಮೆಟ್ಟಿಸಲು ಉಕ್ರೇನ್ ಪಡೆ ಪ್ರಯತ್ನಿಸುತ್ತಿದೆ ಎಂದು ನಗರದ ಮೇಯರ್ ಒಲೆಕ್ಸಾಂಡರ್ ಸ್ಟ್ರೈಕ್ ಹೇಳಿದರು.

2,500 ಸೈನಿಕರು ರಷ್ಯಾ ಸೆರೆಯಲ್ಲಿ: ಮರಿಯುಪೋಲ್‌ನ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ರಕ್ಷಣೆ ಮಾಡುತ್ತಿದ್ದ 2,500 ಯೋಧರು ರಷ್ಯಾ ಸೇನೆಯ ಸೆರೆಯಲ್ಲಿದ್ದಾರೆ. ಈಗ ಅವರು ಸಾಮಾನ್ಯ ಕೈದಿಗಳು. ಅವರಿಗೆ ಚಿತ್ರ ಹಿಂಸೆ ನೀಡುವುದು ರಷ್ಯಾದ ಆದ್ಯತೆಯಲ್ಲ ಎಂದು ಭಾವಿಸಿದ್ದೇವೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಕಾಶ್ಮೀರಿ ಪಂಡಿತರಿಂದ ‘ಖೀರ್ ಭವಾನಿ ಮೇಳ’ ಯಾತ್ರೆ

ಜಮ್ಮು (ಪಿಟಿಐ): ‘ಬಿಗಿ ಭದ್ರತೆಯ ನಡುವೆ ಸುಮಾರು 250 ವಲಸಿಗ ಕಾಶ್ಮೀರಿ ಪಂಡಿತರು ಕಾಶ್ಮೀರದ ಗಂದರ್‌ಬಾಲ್ ಜಿಲ್ಲೆಯಲ್ಲಿ ಬುಧವಾರ ನಡೆಯಲಿರುವ ‘ಮಾತಾ ಖೀರ್ ಭವಾನಿ ಮೇಳ’ಕ್ಕೆ ಮಂಗಳವಾರ ಜಮ್ಮುವಿನಿಂದ ಸರ್ಕಾರಿ ಬಸ್‌ಗಳ ಪ್ರಯಾಣ ಬೆಳೆಸಿದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮುವಿನ ವಿಭಾಗೀಯ ಆಯುಕ್ತ ರಮೇಶ್ ಕುಮಾರ್ ಅವರು, ಜಮ್ಮು ಹೊರವಲಯದ ನಗ್ರೋತಾದಿಂದ ಯಾತ್ರೆಗೆ ಚಾಲನೆ ನೀಡಿದರು.

‘ಸುರಕ್ಷಿತ ತೀರ್ಥಯಾತ್ರೆಗಾಗಿ ಸರ್ಕಾರ ಎಲ್ಲ ಅಗತ್ಯ ಮತ್ತು ಭದ್ರತಾ ವ್ಯವಸ್ಥೆಗಳನ್ನು ಕಲ್ಪಿಸಿದೆ. ಬುಧವಾರ ಖೀರ್ ಭವಾನಿ ದೇವಾಲಯದಲ್ಲಿ ದೇವಿಯ ದರ್ಶನ ಮಾಡಿ, ಒಂದು ದಿನದ ಬಳಿಕ ಜಮ್ಮುವಿಗೆ ಹಿಂತಿರುಗಲಿದ್ದಾರೆ’ ಎಂದೂ ಅವರು ಮಾಹಿತಿ ನೀಡಿದರು.

‘ಯಾತ್ರೆ ಕೈಗೊಳ್ಳಲು ಯಾತ್ರಾರ್ಥಿಗಳಿಗೆ ಯಾವುದೇ ತೊಂದರೆಯಿಲ್ಲ. ದೇಗುಲದ ಮಾರ್ಗದಲ್ಲಿ ಮತ್ತು ದೇಗುಲದಲ್ಲಿ ಭದ್ರತೆಯನ್ನು ಖಚಿತಪಡಿಸಿಕೊಂಡಿರುವುದರಿಂದ ಯಾವುದೇ ಲೋಪವಾಗುವ ಸಾಧ್ಯತೆ ಇಲ್ಲ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಸಿದ್ಧ ರಾಗ್ನ್ಯಾ ದೇವಿ (ಖೀರ್ ಭವಾನಿ) ದೇವಸ್ಥಾನದಲ್ಲಿ ಪ್ರತಿವರ್ಷ ‘ಮಾತಾ ಖೀರ್ ಭವಾನಿ ಮೇಳ’ವನ್ನು ಆಯೋಜಿಸಲಾಗುತ್ತದೆ.

ಕೋವಿಡ್– 19 ಕಾರಣದಿಂದಾಗಿ ಎರಡು ವರ್ಷಗಳಿಂದ ಮೇಳವನ್ನು ಆಯೋಜಿಸಿರಲಿಲ್ಲ. ಈ ಬಾರಿ ಜೂನ್ 8ರಂದು ಮೇಳ ನಡೆಯಲಿದೆ.

ನಗರದಲ್ಲಿ ಇಂದು

ಬಾಲ್ಯ ವಿವಾಹಗಳ ತಡೆ ನಾಗರಿಕ ಸಂಸ್ಥೆಗಳ ಪಾತ್ರ: ಉದ್ಘಾಟನೆ: ಪ್ರಿಯಾಂಕ ಮೇರಿ ಫ್ರಾನ್ಸಿಸ್, ಅಧ್ಯಕ್ಷತೆ: ಶಶಿಧರ್ ಶೆಟ್ಟಿ, ಉಪಸ್ಥಿತಿ: ನೀನಾ ನಾಯಕ್, ರಾಘವೇಂದ್ರ ಎಚ್.ಸಿ, ಅಂಜಲಿ ರಾಮಣ್ಣ, ಸರಸ್ವತಿ, ತಂಗ ಪೆರುಮಾಳ್ ಪೊನ್‌ಪಾಂಡಿ, ಚಿತ್ರಾ ಅಂಚನ್, ಮಂಜುಳ.ವಿ, ಜಿ.ಎನ್. ಸಿಂಹ, ಸ್ಥಳ: ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್, ಬೆನ್ಸನ್‌ಟೌನ್, ಬೆಳಿಗ್ಗೆ: 10.30

ಶಾಲಾ ಪಠ್ಯಪುಸ್ತಕ ತಿರುಚುವಿಕೆ ವಿರುದ್ಧ ಸಮಾವೇಶ: ಭಾಷಣಕಾರರು: ರವಿವರ್ಮ ಕುಮಾರ, ಎ.ಮುರಿಗೆಪ್ಪ, ಎಸ್.ಜಿ.ಸಿದ್ಧರಾಮಯ್ಯ, ಅಲ್ಲಮಪ್ರಭು ಬೆಟ್ಟದೂರು, ಅಧ್ಯಕ್ಷತೆ: ವಿ.ಎನ್. ರಾಜಶೇಖರ, ಆಯೋಜಕರು: ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ), ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, (ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಕಚೇರಿ) ಅರಮನೆ ರಸ್ತೆ, ಬೆಳಿಗ್ಗೆ: 10.30

ಸಾಂಪ್ರದಾಯಿಕ ಕಾಷ್ಠ ಶಿಲ್ಪ(ಮರ ಕೆತ್ತನೆ) ಶಿಬಿರ: ಉದ್ಘಾಟನೆ: ಪ.ರಾ.ಕೃಷ್ಣಮೂರ್ತಿ, ಅತಿಥಿಗಳು: ಅಶೋಕ.ಎನ್.ಚಲವಾದಿ, ಈಶ್ವರ್.ಕು.ಮಿರ್ಜಿ, ಅಧ್ಯಕ್ಷತೆ: ವೀರಣ್ಣ.ಮಾ.ಅರ್ಕಸಾಲಿ, ಆಯೋಜಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಸ್ಥಳ: ಕಾಜಾಣ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕರ್ನಾಟಕ ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ: 11.30

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವೇಣುಗೋಪಾಲ್.ಕೆ.ಆರ್. ಅಭಿನಂದನಾ ಸಮಾರಂಭ: ಉದ್ಘಾಟನೆ: ಪ್ರೊ.ಎಸ್.ಸಿ. ಶರ್ಮಾ, ಉಪಸ್ಥಿತಿ: ಡಾ.ಸಿ.ಎನ್.ಅಶ್ವತ್ಥನಾರಾಯಣ, ಅಭಿನಂದನಾ ಗ್ರಂಥದ ಲೋಕಾರ್ಪಣೆ: ಡಾ.ಸಿ.ಎನ್. ಮಂಜುನಾಥ್, ಎನ್. ಆರ್. ಶೆಟ್ಟಿ, ಡಾ.ವೂಡೇ.ಪಿ. ಕೃಷ್ಣ, ಆಯೋಜಕರು: ಪ್ರೊ.ವೇಣುಗೋಪಾಲ್. ಕೆ.ಆರ್ ಅಭಿನಂದನಾ ಸಮಿತಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ: 11

ರಾಷ್ಟ್ರೀಯ ಲೈವ್ ಶೆಫ್ ಸ್ಪರ್ಧೆ: ಅತಿಥಿಗಳು: ಕೆ.ಗೋಪಾಲಯ್ಯ, ಆಯೋಜಕರು: ವರ್ಲ್ಡ್ ಹಾಸ್ಪಿಟಾಲಿಟಿ, ಸ್ಥಳ: ತ್ರಿಪುರಾ ವಾಸಿನಿ, ಪ್ಯಾಲೆಸ್ ಮೈದಾನ, ಬೆಳಿಗ್ಗೆ: 11.30

ಕನ್ನಡಿಗರ ಸಂಸ್ಕೃತಿ ಉಪನ್ಯಾಸ ಕಾರ್ಯಕ್ರಮ: ಉಪನ್ಯಾಸಕರು: ಮೋಹನ್.ಎಸ್, ಅಧ್ಯಕ್ಷತೆ: ಜಗದೀಶ ರೆಡ್ಡಿ, ಉಪಸ್ಥಿತಿ: ಎಂ.ಸಿ. ನರೇಂದ್ರ, ಮಹಾಂತೇಶ ದೇಗಾವಿ, ಆಯೋಜಕರು: ಕನ್ನಡ ಯುವಜನ ಸಂಘ, ಸ್ಥಳ: ಕನ್ನಡ ಯುವಜನ ಸಭಾಂಗಣ, ಎಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ (ವಿಲ್ಸನ್ ಗಾರ್ಡನ್), ಸಂಜೆ: 6.30

‘ವೀರಲೋಕ’ದ ಮೊದಲ 12 ಕೃತಿಗಳ ಲೋಕಾರ್ಪಣೆ: ಆಯೋಜಕರು: ವೀರಲೋಕ ಬುಕ್ಸ್ ಪ್ರೈ.ಲಿ, ಸ್ಥಳ: ಹೋಟೆಲ್ ಲಾ ಮಾರ್ವೆಲ್ಲಾ, 2ನೇ ಬ್ಲಾಕ್ ಜಯನಗರ, ಸಂಜೆ: 7

ರೈಲು ನಿಲ್ದಾಣದಲ್ಲಿ ಕೆಲಸ: ಮಸೀದಿಯಲ್ಲಿ ವಾಸ • ಹಿಜ್ಬುಲ್ ಕಮಾಂಡರ್ ಬಂಧನಕ್ಕೆ ಜಂಟಿ ಕಾರ್ಯಾಚರಣೆ

ಕೂಲಿ ವೇಷದಲ್ಲಿದ್ದ 'ಎ ದರ್ಜೆ' ಉಗ್ರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮ್ಮು-ಕಾಶ್ಮೀರದಿಂದ ಪರಾರಿಯಾಗಿ ಬೆಂಗಳೂರಿಗೆ ಬಂದಿದ್ದ ಹಿಜ್ಬುಲ್-ಮುಜಾಹಿದ್ದೀನ್ (ಎಚ್‌ಎಂ) ಉಗ್ರ ಸಂಘಟನೆಯ ಕಮಾಂಡರ್ ತಾಲಿಬ್ ಹುಸೇನ್ ಅಲಿಯಾಸ್ ತಾರಿಕ್ (36), ಮೆಜೆಸ್ಟಿಕ್‌ನ ರೈಲು ನಿಲ್ದಾಣದಲ್ಲಿ ಎರಡು ವರ್ಷ ಕೂಲಿ ಕೆಲಸ ಮಾಡಿಕೊಂಡಿದ್ದನೆಂಬ ಸಂಗತಿ ತನಿಖೆಯಿಂದ ಹೊರಬಿದ್ದಿದೆ.

ಜಮ್ಮುವಿನಲ್ಲಿ ಸೈನಿಕರು, ಪೊಲೀಸರು, ಹಿಂದೂಗಳ ಮೇಲೆ ಗುಂಡಿನ ದಾಳಿ ನಡೆಸಿ ಹಿಂಸಾಚಾರಕ್ಕೆ ಕಾರಣವಾಗಿದ್ದ ಪ್ರಕರಣದ ಆರೋಪಿ ತಾಲಿಬ್‌ನನ್ನು ನಗರದ ಓಕಳಿಪುರದಲ್ಲಿ ಜೂನ್ 3ರಂದು ಸೆರೆ ಹಿಡಿಯಲಾಗಿದೆ.

ಜಮ್ಮು-ಕಾಶ್ಮೀರ ಪೊಲೀಸರ ವಿಶೇಷ ತಂಡ ಹಾಗೂ ಭಾರತೀಯ ಸೇನೆಯ 17- ರಾಷ್ಟ್ರೀಯ ರೈಫಲ್ಸ್ ತಂಡದ ಸೈನಿಕರು, ಸ್ಥಳೀಯ ಪೊಲೀಸರ ನೆರವಿನೊಂದಿಗೆ ಉಗ್ರ ತಾಲಿಬ್‌ನನ್ನು ಬಂಧಿಸಿ ಕರೆದೊಯ್ದಿದ್ದಾರೆ.

ಕಮಾಂಡರ್ (ಎಡ) ಹಾಗೂ ಕೂಲಿ (ಬಲ) ವೇಷದಲ್ಲಿದ್ದ ತಾಲಿಬ್ ಹುಸೇನ್

ಜಮ್ಮು-ಕಾಶ್ಮೀರ ಪೊಲೀಸರು ಬಿಡುಗಡೆ ಮಾಡಿದ್ದ 'ಎ ದರ್ಜೆ' ಉಗ್ರರ ಪಟ್ಟಿಯಲ್ಲಿ ತಾಲಿಬ್ ಹೆಸರಿತ್ತು. ಎರಡು ವರ್ಷ ಓಕಳಿಪುರದಲ್ಲಿ ನೆಲೆಸಿದ್ದ ಈತನ ಬಗ್ಗೆ ಬೆಂಗಳೂರು ಪೊಲೀಸರು ಹಾಗೂ ಗುಪ್ತದಳದ ಅಧಿಕಾರಿಗಳು ಮಾಹಿತಿ ಕಲೆಹಾಕುತ್ತಿದ್ದಾರೆ.

ಮಸೀದಿಯಲ್ಲಿ ಆಶ್ರಯ: 'ಜಮ್ಮು-ಕಾಶ್ಮೀರದಲ್ಲಿ ಮುಸ್ಲಿಂ ಯುವಕರಿಗೆ ನಾನಾ ಆಮಿಷವೊಡ್ಡಿ ಸಂಘಟನೆಗೆ ಸೇರಿಸಿಕೊಳ್ಳುತ್ತಿದ್ದ ತಾಲಿಬ್, ಅವರ ಮೂಲಕ ಹಿಂಸಾಚಾರ ಮಾಡಿಸುತ್ತಿದ್ದ. ಈತನನ್ನು ಎನ್‌ಕೌಂಟರ್ ಮಾಡಲು ಜಮ್ಮು-ಕಾಶ್ಮೀರ ಪೊಲೀಸರು ಹಾಗೂ ಸೈನಿಕರು, ಹುಡುಕಾಡುತ್ತಿದ್ದರು.

'2016ರಲ್ಲಿ ಉಗ್ರ ಸಂಘಟನೆಗೆ ಸೇರ್ಪಡೆ'

'ಜಮ್ಮುವಿನ ಕಿಷ್ತ್‌ವಾಡ್ ಜಿಲ್ಲೆಯ ನಿವಾಸಿಯಾದ ತಾಲಿಬ್, 2016ರಲ್ಲಿ ಹಿಜ್ಬುಲ್-ಮುಜಾಹಿದ್ದೀನ್ ಉಗ್ರ ಸಂಘಟನೆ ಸೇರಿದ್ದ. ಕಮಾಂಡೊ ಆಗಿ ತರಬೇತಿ ಪಡೆದಿದ್ದ. ಮುಸ್ಲಿಂ ಯುವಕರನ್ನು ಸೆಳೆದು ಸಂಘಟನೆಗೆ ಸೇರಿಸುವುದು ಹಾಗೂ ಹಿಂಸಾಚಾರ ಮಾಡಿಸುವುದು ಈತನ ಕೆಲಸವಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜಮ್ಮು- ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಿ ಪಾಕಿಸ್ತಾನಕ್ಕೆ ಸೇರಿಸಬೇಕೆನ್ನುವುದು ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆ ಉದ್ದೇಶ. ಇದರಡಿಯೇ ಉಗ್ರ ತಾಲಿಬ್ ಹಾಗೂ ಇತರರು ಕೆಲಸ ಮಾಡುತ್ತಿದ್ದಾರೆ' ಎಂದು ತಿಳಿಸಿವೆ.

ಬಂಧನದ ಭೀತಿಯಿಂದಾಗಿ ತಾಲಿಬ್ 2020ರಲ್ಲಿ ಬೆಂಗಳೂರಿಗೆ ರೈಲಿನಲ್ಲಿ ಬಂದಿದ್ದ' ಎಂದು ಮೂಲಗಳು ಹೇಳಿವೆ.

'ಮೆಜೆಸ್ಟಿಕ್‌ನ ರೈಲು ನಿಲ್ದಾಣದಲ್ಲಿ ಇಳಿದಿದ್ದ ತಾಲಿಬ್, ಅಲ್ಲಿಯೇ ಕೆಲ ದಿನ ಉಳಿದಿದ್ದ. ಅನಾಥನೆಂದು ಹೇಳಿಕೊಂಡು ಸ್ಥಳೀಯರನ್ನು ಪರಿಚಯಿಸಿಕೊಂಡಿದ್ದ. ಗೂಡ್ಸ್ ವಾಹನಗಳ ಲೋಡಿಂಗ್, ಅನ್-ಲೋಡಿಂಗ್ ಕೆಲಸ ಮಾಡುತ್ತಿದ್ದ.'

'ನಿಲ್ದಾಣಕ್ಕೆ ಹೊಂದಿಕೊಂಡಿರುವ ಓಕಳಿಪುರಕ್ಕೆ ಊಟ ಹಾಗೂ ತಿಂಡಿ ತಿನ್ನಲೆಂದು ಹೋಗಿಬರುತ್ತಿದ್ದ ತಾಲಿಬ್, ಸ್ಥಳೀಯ ಮಸೀದಿ ಮುಖ್ಯಸ್ಥ ಅನ್ವರ್ ಪರಿಚಯ ಮಾಡಿಕೊಂಡಿದ್ದ. ಅನಾಥನೆಂದು ಹೇಳಿ, ಮಸೀದಿಯಲ್ಲೇ ಕೆಲದಿನ ಆಶ್ರಯ ಪಡೆದುಕೊಂಡಿದ್ದ' ಎಂದೂ ಮೂಲಗಳು ತಿಳಿಸಿವೆ.

ಹೆಸರು ಬದಲಿಸಿ, ಆಧಾರ್ ಮಾಡಿಸಿದ್ದ: 'ತಾರಿಕ್ ಎಂದು ಹೆಸರು ಬದಲಾಯಿಸಿಕೊಂಡಿದ್ದ ಉಗ್ರ, ಅದೇ ಹೆಸರು ಹಾಗೂ ಓಕಳಿಪುರ ವಿಳಾಸ ಬಳಸಿ ಆಧಾರ್ ನೋಂದಣಿ ಮಾಡಿಸಿದ್ದ.

'ತಾಲಿಬ್ ದಿನಚರಿ ಬಗ್ಗೆ ತನಿಖೆ'

'ಎರಡು ವರ್ಷ ಬೆಂಗಳೂರಿನಲ್ಲಿ ತಾಲಿಬ್, ಸ್ಥಳೀಯವಾಗಿ ಹಲವರನ್ನು ಭೇಟಿಯಾಗುತ್ತಿದ್ದ. ಆತನ ದಿನಚರಿ ತಿಳಿಯಲು ತನಿಖೆ ನಡೆದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೂಲಿ ಕೆಲಸ ಮಾಡುತ್ತಲೇ, ಜಮ್ಮು-ಕಾಶ್ಮೀರದಲ್ಲಿದ್ದ ಸಂಘಟನೆ ಸದಸ್ಯರಿಗೆ ಸೂಚನೆ ನೀಡುತ್ತಿದ್ದ. ಈತನ ಆಣತಿಯಂತೆ ದಾಳಿ ನಡೆಯುತ್ತಿತ್ತು. ಜಮ್ಮು-ಕಾಶ್ಮೀರದ ಪೊಲೀಸರೂ ಸಹ ತಾಲಿಬ್ ಬಗ್ಗೆ ಸಾಕಷ್ಟು ಮಾಹಿತಿ ನೀಡಿದ್ದಾರೆ' ಎಂದೂ ತಿಳಿಸಿವೆ.

> **ನಗರದಲ್ಲಿ ಭಯೋತ್ಪಾದಕನೊಬ್ಬನನ್ನು ಬಂಧಿಸಿರುವ ಕಾಶ್ಮೀರ ಪೊಲೀಸರಿಗೆ ಪ್ರಕರಣದ ತನಿಖೆಗೆ ಸಂಪೂರ್ಣ ಸಹಕಾರ ನೀಡಲಾಗುವುದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ದಿನ ಕಳೆದಂತೆ ಸ್ಥಳೀಯರ ಜೊತೆ ಬೆರೆತು, ನಂಬಿಕೆ ಗಳಿಸಿದ್ದ. ಈತನ ಬಗ್ಗೆ ಯಾರಿಗೂ ಅನುಮಾನ ಸಹ ಬಂದಿರಲಿಲ್ಲ. ವರ್ಷದ ಹಿಂದೆಯಷ್ಟೇ ಜಮ್ಮುವಿಗೆ ಹೋಗಿದ್ದ ತಾಲಿಬ್, ಪತ್ನಿ ಹಾಗೂ ಮೂವರು ಮಕ್ಕಳನ್ನು ಬೆಂಗಳೂರಿಗೆ ಕರೆತಂದಿದ್ದ. ಓಕಳಿಪುರದ ಮಸೀದಿ ಪಕ್ಕದಲ್ಲಿದ್ದ ಮನೆಯಲ್ಲಿ ಕುಟುಂಬ ವಾಸವಿತ್ತು. ನಿತ್ಯವೂ ಆತ ನಿಲ್ದಾಣಕ್ಕೆ ಹೋಗಿ ಕೂಲಿ ಕೆಲಸ ಮಾಡಿ ಬರುತ್ತಿದ್ದ. ಪತ್ನಿಯು ಗೃಹಿಣಿ ಆಗಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ಉಗ್ರನಿಗೆ ಆಶ್ರಯ ನೀಡಿದ್ದ ಅನ್ವರ್ ಎಂಬಾತನ ವಿಚಾರಣೆ ಮಾಡಲಾಗಿದೆ. ಅನಾಥನೆಂಬ ಕಾರಣಕ್ಕೆ ಆಶ್ರಯ ನೀಡಿದ್ದಾಗಿ ಅವರು ಹೇಳಿದ್ದಾರೆ. ಜೊತೆಗೆ, ಉಗ್ರನಿಗೆ ಆಧಾರ್ ಕಾರ್ಡ್ ಮಾಡಿಸಿಕೊಟ್ಟವರ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದೂ ಹೇಳಿವೆ.

ಕೊಲ್ಲೂರು ಮೂಕಾಂಬಿಕೆ ಜನ್ಮಾಷ್ಟಮಿ ಪ್ರಯುಕ್ತ ರಥೋತ್ಸವ ನಡೆಯಿತು

ಕೊಲ್ಲೂರು ಮೂಕಾಂಬಿಕಾ ಜನ್ಮಾಷ್ಟಮಿ

ಕುಂದಾಪುರ: ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನದಲ್ಲಿ ಮಂಗಳವಾರ ಮೂಕಾಂಬಿಕಾ ಜನ್ಮಾಷ್ಟಮಿ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ದೇಶ, ವಿದೇಶಗಳಿಂದ ಬಂದಿದ್ದ ಸಾವಿರಾರು ಭಕ್ತರು ಭಾಗಿಯಾದರು.

ಜನದಟ್ಟಣೆಯಿಂದ ದರ್ಶನ ಹಾಗೂ ಅನ್ನ ಸಂತರ್ಪಣೆ ವ್ಯವಸ್ಥೆ ನಿಭಾಯಿಸಲು ದೇವಸ್ಥಾನದ ಸಿಬ್ಬಂದಿ ಹರಸಾಹಸ ಪಟ್ಟರು. ಮಧ್ಯಾಹ್ನದ ಮಂಗಳಾರತಿಯ ವೇಳೆಯಲ್ಲಿ ತುಂತುರು ಮಳೆ ಸುರಿಯಲಾರಂಭಿಸಿದ್ದರಿಂದ ಭಕ್ತರು ದೇಗುಲದ ಪ್ರಾಂಗಣದಲ್ಲಿ ಸೇರಿದ್ದರಿಂದ ತುಸು ಗೊಂದಲ, ನೂಕು ನುಗ್ಗಲು ಉಂಟಾಯಿತು.

ಜನ್ಮಾಷ್ಟಮಿಯ ಪ್ರಯುಕ್ತ ದೇವಸ್ಥಾನದ ಸ್ವರ್ಣಮುಖಿ ರಂಗಮಂಟಪದಲ್ಲಿ ದೇಶದ ವಿವಿಧ ಭಾಗಗಳಿಂದ ಬಂದಿದ್ದ ಕಲಾವಿದರು ಸಾಂಸ್ಕೃತಿಕ ಸೇವಾ ಪ್ರದರ್ಶನ ನೀಡಿದರು.

ಹಾವೇರಿ:ಸಿಡಿಲು ಬಡಿದು ಮಹಿಳೆ ಸಾವು

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ಪಟ್ಟಣದ ಹೊರವಲಯದ ಜಮೀನೊಂದರಲ್ಲಿ ಬಿತ್ತನೆ ಕಾರ್ಯದಲ್ಲಿ ತೊಡಗಿದ್ದ ವೇಳೆ ಮಂಗಳವಾರ ಸಂಜೆ ಸಿಡಿಲು ಬಡಿದು ಮಹಿಳೆಯೊಬ್ಬರು ಸಾವಿಗೀಡಾಗಿದ್ದು ಇನ್ನಿತರ ಏಳು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಪಟ್ಟಣದ ಕೋಟೆ ನಿವಾಸಿ ಕರಿಯಮ್ಮ ರಂಗಪ್ಪ ಪರಸಪ್ಪನವರ (35) ಮೃತರು. ಹಾಸನ,ದಾವಣಗೆರೆ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ವಿವಿಧೆಡೆ ಮಂಗಳವಾರ ಸಾಧಾರಣ ಮಳೆಯಾಯಿತು.

ಆಯನೂರು ಆರೋಪದಲ್ಲಿ ಹುರುಳಿಲ್ಲ: ಸಚಿವ ಸುಧಾಕರ್

ಬೆಂಗಳೂರು: 'ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಅಡಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ವೇತನ ಪರಿಷ್ಕರಣೆ, ರಜೆ ಮತ್ತು ಇತರ ಸೌಲಭ್ಯ ಒದಗಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ವಿಚಾರದಲ್ಲಿ ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ಮಾಡಿರುವ ಆರೋಪಗಳಲ್ಲಿ ಹುರುಳಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಆಯನೂರು ಮಂಜುನಾಥ್ ಮಾಡಿರುವ ಆರೋಪಗಳಿಗೆ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯೆ ನೀಡಿರುವ ಅವರು, 'ಶ್ರೀನಿವಾಸಚಾರಿ ನೇತೃತ್ವದ ಸಮಿತಿ ಅನುಷ್ಠಾನದ ಕುರಿತು ಸಿಬ್ಬಂದಿ ಸಂಘಟನೆ (ಕೆಎಸ್‌ಎಚ್‌ಒಸಿಇಎ) ಪದಾಧಿಕಾರಿಗಳ ಜತೆ ಹಲವು ಸಭೆ ನಡೆಸಿ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಸಂಘಟನೆಯ ಗೌರವಾಧ್ಯಕ್ಷರಾಗಿರುವ ಆಯನೂರು ಕೂಡ ಸಭೆಗಳಲ್ಲಿ ಭಾಗವಹಿಸಿದ್ದರು. ಈಗ ಅವರೇ ವ್ಯತಿರಿಕ್ತವಾದ ಹೇಳಿಕೆ ನೀಡಿರುವುದು ಆಶ್ಚರ್ಯ ಉಂಟುಮಾಡಿದೆ' ಎಂದಿದ್ದಾರೆ.

'ಗುತ್ತಿಗೆ ನೌಕರರ ಸೇವೆಯನ್ನು ಕಾಯಂ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಆದರೂ, ಅವರನ್ನು ಸೇವೆಯಲ್ಲಿ ಮುಂದುವರಿಸಲಾಗಿದೆ. 38 ವೃಂದಗಳ 17,033 ಹೊರಗುತ್ತಿಗೆ ನೌಕರರಿಗೆ ವೇತನ ಪರಿಷ್ಕರಣೆಗೆ ಶಿಫಾರಸು ಮಾಡಿದ್ದು, ಇದಕ್ಕಾಗಿ ₹ 71.26 ಕೋಟಿ ಹೆಚ್ಚುವರಿ ಅನುದಾನ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಕಾನೂನು ವ್ಯಾಪ್ತಿಯಲ್ಲಿ ಒದಗಿಸಲು ಸಾಧ್ಯವಿರುವ ಎಲ್ಲ ಸೌಲಭ್ಯಗಳನ್ನೂ ಅವರಿಗೆ ನೀಡಲು ಪ್ರಯತ್ನ ಮಾಡಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಎನ್‌ಎಚ್‌ಎಂ ಗುತ್ತಿಗೆ ನೌಕರರಿಗೆ ರಜೆ ಸೌಲಭ್ಯ ನೀಡಲಾಗಿದೆ. ಈ ನೌಕರರನ್ನು ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿ ತರಲಾಗಿದೆ. ಜಿಲ್ಲೆಯೊಳಗೆ ಒಂದು ಬಾರಿ ಪರಸ್ಪರ ಒಪ್ಪಿಗೆ ಮೇರೆಗೆ ವರ್ಗಾವಣೆಗೂ ಅವಕಾಶ ನೀಡಲಾಗಿದೆ. ವಿಶೇಷ ಸೇವಾ ಭತ್ಯೆ ಹಾಗೂ ಮರಣ ಅಥವಾ ಅಂಗವೈಕಲ್ಯದ ಸಂದರ್ಭದಲ್ಲಿ ಪರಿಹಾರ ನೀಡಲು ಕ್ಷೇಮನಿಧಿ ವ್ಯಾಪ್ತಿಗೆ ತರುವುದಕ್ಕೂ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ.

'ಸಚಿವನಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇಲಾಖೆಯ ಸಿಬ್ಬಂದಿಗೆ ಸೌಲಭ್ಯ ಒದಗಿಸುವ ವಿಚಾರದಲ್ಲಿ ಕೈಗೊಂಡ ತೀರ್ಮಾನಗಳ ಕುರಿತು ನನಗೆ ತೃಪ್ತಿ ಇದೆ. ನನ್ನ ಕಾರ್ಯಕ್ಷಮತೆ ಏನು ಎಂಬುದು ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಮತ್ತು ಜನರಿಗೆ ಗೊತ್ತಿದೆ' ಎಂದು ಆಯನೂರು ಹೇಳಿಕೆಗೆ ತಿರುಗೇಟು ನೀಡಿದ್ದಾರೆ.

ಕಾಂಗ್ರೆಸ್‌ಗೆ 2ನೇ ಪ್ರಾಶಸ್ತ್ಯ ಮತ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯಸಭೆ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರಿಗೆ ಜೆಡಿಎಸ್‌ನ 32 ಸದಸ್ಯರ 2ನೇ ಪ್ರಾಶಸ್ತ್ಯ ಮತಗಳನ್ನು ನೀಡಲು ಪಕ್ಷ ಸಿದ್ಧವಿದೆ. ಕಾಂಗ್ರೆಸ್‌ನವರು 2ನೇ ಪ್ರಾಶಸ್ತ್ಯದ ಮತಗಳನ್ನು ಜೆಡಿಎಸ್ ಅಭ್ಯರ್ಥಿ ಡಿ. ಕುಪೇಂದ್ರ ರೆಡ್ಡಿ ಅವರಿಗೆ ನೀಡಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದರು.

ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿಯನ್ನು ಸೋಲಿಸಬೇಕಾದರೆ ಕಾಂಗ್ರೆಸ್‌ನ 2ನೇ ಅಭ್ಯರ್ಥಿಯನ್ನು ಜೆಡಿಎಸ್ ಬೆಂಬಲಿಸಬೇಕು. ಜೆಡಿಎಸ್ ಅಭ್ಯರ್ಥಿಯನ್ನು ನಿವೃತ್ತಿಗೊಳಿಸಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಬಿಜೆಪಿ ಸೋಲಿಸುವುದೇ ಉದ್ದೇಶವಾಗಿದ್ದರೆ ಚುನಾವಣೆ ಘೋಷಣೆಗೂ ಮುನ್ನ ಕಾಂಗ್ರೆಸ್ ನಾಯಕರು ನಮ್ಮೊಂದಿಗೆ ಚರ್ಚಿಸಿ ಕೋರಬಹುದಿತ್ತಲ್ಲವೇ? ನಮ್ಮ ಅಭ್ಯರ್ಥಿಯನ್ನು ನಿವೃತ್ತಿಗೊಳಿಸಲು ಸಾಧ್ಯವಿಲ್ಲ' ಎಂದರು.

> **ರಾಜ್ಯಸಭೆ ಚುನಾವಣೆಯ ಮತದಾನದ ವಿಧಾನ, ಮತ ಹಂಚಿಕೆ ಮತ್ತಿತರ ವಿಷಯಗಳ ಕುರಿತು ಚರ್ಚಿಸಲು ಪಕ್ಷದ ಶಾಸಕರ ಜತೆ ಬುಧವಾರ ಸಭೆ ನಡೆಸಲಾಗುವುದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

'ಜೆಡಿಎಸ್ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಈಗ ತೆಗೆಯಲು ಆಗುವುದಿಲ್ಲ. 2ನೇ ಪ್ರಾಶಸ್ತ್ಯ ಮತಗಳನ್ನು ಕೊಡಿ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜೂನ್ 2ರಂದು ಕರೆ ಮಾಡಿ ಕೋರಿದ್ದರು. ನಮ್ಮ 2ನೇ ಪ್ರಾಶಸ್ತ್ಯ ಮತಗಳನ್ನು ನೀಡುವಂತೆ ಶಾಸಕರನ್ನು ಮನವೊಲಿಸುವೆ ಎಂದಿದ್ದೆ. ಆದರೆ, ಕಾಂಗ್ರೆಸ್‌ನದ್ದು ಮೊದಲನೇ ಪ್ರಾಶಸ್ತ್ಯದ 23 ಮತಗಳಿದ್ದು, ನಾವು 32 ಕೊಟ್ಟರೂ ಮೊದಲನೇ ಸುತ್ತಿನಲ್ಲೇ ಗೆಲ್ಲುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಹೀಗಾಗಿ, ಸುರ್ಜೇವಾಲಾ ಅವರಿಗೆ ಸೋಮವಾರ ಕರೆ ಮಾಡಿ, ನಾವು 32 ಮತಗಳನ್ನು ನಿಮಗೆ ವರ್ಗಾಯಿಸುತ್ತೇವೆ. ನಿಮ್ಮ ಎರಡನೇ ಅಭ್ಯರ್ಥಿಯ 2ನೇ ಪ್ರಾಶಸ್ತ್ಯದ 23 ಮತಗಳನ್ನು ನಮಗೆ ವರ್ಗಾಯಿಸಿ. ಬಿಜೆಪಿ ಅಭ್ಯರ್ಥಿಯನ್ನು ಸೋಲಿಸೋಣ ಎಂದೆ. ಮಾತನಾಡಲು ಪಕ್ಷದ ನಾಯಕರನ್ನು ಕಳುಹಿಸುತ್ತೇನೆ ಎಂದು ಹೇಳಿದ್ದರು. ಆದರೆ, ಯಾರೂ ಚರ್ಚೆಗೆ ಬಂದಿಲ್ಲ' ಎಂದರು.

'2008-09ರಲ್ಲಿ ಆಪರೇಷನ್ ಕಮಲ ಆದಾಗ ನಿಮ್ಮ ಹಾಗೂ ಯಡಿಯೂರಪ್ಪ ನಡುವೆ ಏನು ನಡೆಯಿತೆಂದು ಹೇಳಿದ್ದೀರಾ? ವಿಮಾನ ನಿಲ್ದಾಣದ ವಿಐಪಿ ಕೊಠಡಿಯಲ್ಲಿ ನೀವಿಬ್ಬರೂ ಕುಳಿತು ಮಾತನಾಡುತ್ತಿರುವ ಚಿತ್ರವನ್ನು ಯಾವ ಸಂದೇಶ ನೀಡಲು ಹಾಕಿಸಿದ್ದೀರಿ' ಎಂದು ಸಿದ್ದರಾಮಯ್ಯನವರನ್ನು ಪ್ರಶ್ನಿಸಿದರು.

'ನಾಗಪುರದ ಆರ್‌ಎಸ್‌ಎಸ್ ಕಚೇರಿಯಲ್ಲಿ ಹಾಕಿಕೊಳ್ಳುವ ಚಡ್ಡಿಯಿಂದ ಆಗುವ ಮಾರಕ ಪರಿಣಾಮದ ಬಗ್ಗೆ ಚರ್ಚೆ ನಡೆಸಲಿ. ರೈತರು ಹಾಕಿಕೊಳ್ಳುವ ಚಡ್ಡಿಗೆ ಅಗೌರವ ತರಬೇಡಿ' ಎಂದರು.

ನಿಗಮಗಳಿಗೆ ₹857.5 ಕೋಟಿ ಹೆಚ್ಚುವರಿ ಅನುದಾನ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಗಳ ವ್ಯಾಪ್ತಿಯಲ್ಲಿರುವ 19 ನಿಗಮಗಳಿಗೆ ₹ 857.5 ಕೋಟಿ ಹೆಚ್ಚುವರಿ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ), ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ನಿಗಮಗಳ ಅನುದಾನ ಹಂಚಿಕೆಯನ್ನು ಹೆಚ್ಚಿಸಲಾಗಿದೆ. ಈಗ ಹೆಚ್ಚುವರಿ ಅನುದಾನದ ಹಂಚಿಕೆಯೊಂದಿಗೆ ಈ ನಿಗಮಗಳಿಗೆ ಪ್ರಸಕ್ತ ವರ್ಷ ಒಟ್ಟು ₹ 3,172.13 ಕೋಟಿ ಅನುದಾನ ಒದಗಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಈ ನಿಗಮಗಳಲ್ಲಿ ₹ 1,611.92 ಕೋಟಿ ಆರಂಭಿಕ ಶಿಲ್ಕು ಇತ್ತು. ಬಜೆಟ್‌ನಲ್ಲಿ ₹ 563.52 ಕೋಟಿ ಅನುದಾನ ಹಂಚಿಕೆ ಮಾಡಲಾಗಿತ್ತು. ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮಗಳಿಗೆ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಯೋಜನೆ (ಟಿಎಸ್‌ಪಿ) ಅಡಿಯಲ್ಲಿ ₹ 175 ಕೋಟಿ ಒದಗಿಸಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

IHM BANGALORE

INSTITUTE OF HOTELMANAGEMENT CATERING TECHNOLOGY AND APPLIED NUTRITION

"An Autonomous Body under Ministry of Tourism, Govt, of India" S.J.P. Campus, Seshadri Road, Bangalore 560 001. www.ihmbangalore.kar.nic.in E-mail: ihmbengaluru@gmail.com Ph. 080-22262960 / 22268562

ADMISSION NOTICE

APPLICATIONS ARE INVITED FOR ADMISSION TO THE 11/2 YR.DIPLOMA /CRAFT COURSES IN FOOD PRODUCTION/ BAKERY/ FOOD & BEVERAGE SERVICE/ FOR THE ACADEMIC SESSION 2022-23

1. Application form along with other details is available on payment of Rs.300/- (Rs. 150/- for SC/ST) inclusive of Registration fee payable by cash or D.D. in person. By post Rs.350/-(Rs. 175/- for SC/ST & PH.)
2. Issue of application form from **08-06-2022**
3. Last date for receipt of filled in Application Form by the Institute: 29-07-2022
4. Limited Hostel facility available.
5. **For details of courses/fee etc., please visit: www.ihm bangalore. kar.nic.in**

Sd/-PRINCIPAL

ಪ್ರಜಾವಾಣಿ

ಎಡ್ಯುವರ್ಸ್™

DH DECCAN HERALD

ಜ್ಞಾನ ದೇಗುಲ® - 2022 (12ನೇ ಆವೃತ್ತಿ)

ಎ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೊ

ನಿಮ್ಮ ಸ್ಟಾಲ್ ಬುಕ್ ಮಾಡಿದ್ದೀರಾ?

ಸಿಇಟಿ ಮತ್ತು ಕಾಮೆಡ್-ಕೆ ಅಧಿಕಾರಿಗಳಿಂದ ಉಚಿತ ಕೌನ್ಸೆಲಿಂಗ್ ಸೆಷನ್ಸ್

ಆಕಾಂಕ್ಷೆಗಳು ಮತ್ತು ಅವಕಾಶಗಳು ಸಂಧಿಸುವ ತಾಣ

ಬೆಂಗಳೂರು | ಹುಬ್ಬಳ್ಳಿ – ಜುಲೈ, 2022

ಕರ್ನಾಟಕದ ಅತಿ ದೊಡ್ಡ ವಿದ್ಯಾರ್ಥಿಗಳು ಮತ್ತು ವಿದ್ಯಾ ಸಂಸ್ಥೆಗಳು ಸೇರುವ ಎಡ್ಯುವರ್ಸ್ 2022, ಪುನಃ ಆರಂಭವಾಗಿದೆ!

- ಮೆಗಾ ಎಜುಕೇಶನ್ ಎಕ್ಸ್‌ಪೋ
- ಶೈಕ್ಷಣಿಕ ತಜ್ಞರ ಭೇಟಿ
- ಮಲ್ಟಿಪಲ್ ಕರಿಯರ್ ಡಿಸಿಪ್ಲೀನ್ ಕುರಿತ ಮಾಹಿತಿ ಮತ್ತು ಮಾರ್ಗದರ್ಶನ
- ವಿದ್ಯಾರ್ಥಿಗಳಿಗೆ ವಿವಿಧ ಕಾಲೇಜುಗಳನ್ನು ಪರಿಚಯಿಸಬಲ್ಲ ಏಕಮಾತ್ರ ತಾಣ

UNIVERSITY PAVILION

CMR UNIVERSITY · ICFAI GROUP · MIT-ADT UNIVERSITY PUNE INDIA · PRESIDENCY UNIVERSITY · REVA UNIVERSITY Bengaluru, India

SPECIAL PAVILION: RAMAIAH UNIVERSITY OF APPLIED SCIENCES

INNOVATIVE PAVILION: Dayananda Sagar Institutions Bengaluru

GOLD SPONSOR: MS ENGINEERING COLLEGE

SILVER SPONSOR: EAST WEST GROUP OF INSTITUTIONS BENGALURU · KRUPANIDHI GROUP OF INSTITUTIONS

BANKING PARTNER: SBI The banker to every Indian

EXHIBITOR: ACS COLLEGE OF ENGINEERING Bengaluru · ATRIA INSTITUTE OF TECHNOLOGY · IAS BABA · RajaRajeswari College of Engineering · VVCE

ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ಬೆಂಗಳೂರು: ದಿನೇಶ್ (99860 06598)

ಕೃಷಿ ವಿಶ್ವವಿದ್ಯಾನಿಲಯ
ಆಸ್ತಿ ಅಧಿಕಾರಿಗಳ ಕಛೇರಿ, ಜಿಕೆವಿಕೆ, ಬೆಂಗಳೂರು–560 065

ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/124/2022–23 ದಿ: 03–06–2022

ಟೆಂಡರ್ ಪ್ರಕಟಣೆ, (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಉಪಕರಣಗಳು/ಕುರಿಗಳು ಕ್ರಮ ಸಂಖ್ಯೆ 1 ರಿಂದ 15 ರ ವರೆಗೆ ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–1 ಮತ್ತು ಕೆ.ಜಿ–2 ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ಮುಖಾಂತರ ಬಾಗವಹಿಸಬಹುದು. ಕೆ.ಜಿ–1, ಮತ್ತು ಕೆ.ಜಿ–2 ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನೊಟಿಫಿಕೇಷನ್, ಟೆಂಡರ್ ಶೆಡ್ಯೂಲ್, ಇ.ಎಂ.ಡಿ ದರ, ಟೆಂಡರ್ ಫಾರ್ಮ್‌ಗಳನ್ನು ಈ ಮೇಲಿನ ವೆಬ್‌ಸೈಟ್ ಮುಖಾಂತರ ಪಡೆಯಬಹುದು. **ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 22–06–2022 ಸಂಜೆ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಕ್ರಮ ಸಂಖ್ಯೆ. 15) 24–06–2022 ಬೆಳಗ್ಗೆ 10.30 ಘಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಕ್ರಮ ಸಂಖ್ಯೆ. 1 ರಿಂದ 14) 24–06–2022 ಬೆಳಗ್ಗೆ 10.30 ಘಂಟೆಗೆ, ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಕ್ರಮ ಸಂಖ್ಯೆ. 15) 27–06–2022 ಬೆಳಗ್ಗೆ 10.30 ಘಂಟೆಗೆ** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **www.uasbangalore.edu.in or www.eproc. karnataka.gov.in** ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: **+91–8046010000, +91–8068948777** ಮತ್ತು ಸರಕು ಖರೀದಿ ಅಧಿಕಾರಿಗಳು, ಯು.ಎ.ಎಸ್. ಜಿ.ಕೆ.ವಿ.ಕೆ., ಬೆಂಗಳೂರು–560065. ದೂರವಾಣಿ ಸಂಖ್ಯೆ: **080–23630128** ಸಂಪರ್ಕಿಸಿ.

ಕ್ರಮ ಸಂ. (15) ದ್ವಿ ಲಕೋಟೆ ಪದ್ಧತಿಯ ಅಡಿಯಲ್ಲಿ ಟೆಂಡರನ್ನು ಕರೆಯಲಾಗಿದ್ದು ಮತ್ತು ದ್ವಿ ಲಕೋಟೆ ಪದ್ಧತಿಯ ಷರತ್ತುಗಳು ಈ ಮೇಲಿನ ವೆಬ್‌ಸೈಟ್ ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

DIPR/CP/RO796/AAPL/2022-23

ಕೋವಿಡ್-19 - ಗಾಬರಿಪಡದೆ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ಆಸ್ತಿ ಅಧಿಕಾರಿಗಳು

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ

ಕ್ರ.ಸಂ:ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ:06.06.2022

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯ ಕಾಮಗಾರಿಗಳಿಗಾಗಿ KW-4 ಡಾಕುಮೆಂಟ್ ಉಪಯೋಗಿಸಿ 1ನೇ ದರ್ಜೆ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ
1	ಐನಾಪೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132212)	214.59	3.22
2	ಅಂಕಲಗಿ–ಅಕ್ಕತಂಗೇರಹಾಳ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132218)	169.32	2.54
3	ಬೋರಗಾಂವ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132232)	200.94	3.01
4	ಚನ್ನಮ್ಮನ ಕಿತ್ತೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132208)	174.36	2.62
5	ಯಕ್ಸಂಬಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132213)	201.03	3.02
6	ಕಾಗವಾಡ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132227)	207.94	3.12
7	ಕಂಕಣವಾಡಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No DMA/2022-23/RD/WORK_INDENT 132233.)	168.29	2.52
8	ಖಾನಾಪೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132234)	202.26	3.03
9	ಮಚ್ಚೆ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT132210)	135.34	2.03
10	ಎಂ.ಕೆ ಹುಬ್ಬಳ್ಳಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132253)	179.62	2.69
11	ನಾಗನೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132226)	168.78	2.53
12	ಪೀರನವಾಡಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132235)	136.50	2.05
13	ಶೇಡಬಾಳ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2022-23/RD/WORK_INDENT 132211)	224.98	3.37

ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ	09 ತಿಂಗಳು (ಮಳೆಗಾಲ ಹೊರತುಪಡಿಸಿ)
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	07–07–2022ರಂದು 17–00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	08–07–2022ರಂದು 17–01 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

DIPR/BGM/RO-NO-319/MCA/2022-23

ಬಿಜೆಪಿ, ಆರ್‌ಎಸ್‌ಎಸ್ ನಾಯಕರ ವಿರುದ್ಧ ಎಚ್. ವಿಶ್ವನಾಥ್ ವಾಗ್ದಾಳಿ

‘ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ ಹರಾಜು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೊಲ್ಲಿ ರಾಷ್ಟ್ರಗಳಲ್ಲಿ 25 ಲಕ್ಷ ಭಾರತೀಯ ಕುಟುಂಬಗಳು ದುಡಿದ ಹಣವನ್ನು ಇಲ್ಲಿಗೆ ಕಳುಹಿಸುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಬಿಜೆಪಿ ನಾಯಕರು ಪ್ರಚೋದನಕಾರಿ ಹೇಳಿಕೆ ನೀಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಮರ್ಯಾದೆ ಹರಾಜು ಹಾಕುತ್ತಿದ್ದಾರೆ. ನಾಚಿಕೆಯಾಗುವುದಿಲ್ಲವೇ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಂಗಳವಾರ ಬೇಸರ ವ್ಯಕ್ತಪಡಿಸಿದರು.

ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜಪ್ರಭುತ್ವದ ಕೊಲ್ಲಿ ರಾಷ್ಟ್ರಗಳಿಂದ ಜನತಂತ್ರದ ಭಾರತವು ಪಾಠ ಹೇಳಿಸಿಕೊಳ್ಳುವುದು ಶೋಭಾಯಮಾನವಲ್ಲ’ ಎಂದರು.

‘ಪ್ರಕ್ಷುಬ್ಧತೆಯ ಮಧ್ಯೆ ಸೌಹಾರ್ದದ ಮಾತನ್ನಾಡಿರುವ ಮೋಹನ್ ಭಾಗವತ್ ನಿಲುವನ್ನು ಪ್ರತಾಪಸಿಂಹ, ನಳೀನ್ ಕುಮಾರ್ ಕಟೀಲ್, ಸಂತೋಷ್ ಜೀ, ಸಿ.ಟಿ.ರವಿ ಸ್ವಾಗತಿಸಿ ಇನ್ನೂ ಏಕೆ ಹೇಳಿಕೆ ನೀಡಿಲ್ಲ? ಭಾಗವತರು ಹೇಳಿದಂತೆ ಯಕ್ಷಗಾನ ನಡೆಯಬೇಕು. ಆದರೆ, ಆರ್‌ಎಸ್‌ಎಸ್, ಬಿಜೆಪಿಯವರು ಮಿತಿ ಮೀರಿ ಕುಣಿಯುತ್ತಿದ್ದಾರೆ’ ಎಂದರು.

> **ಆರ್‌ಎಸ್‌ಎಸ್ ಕಚೇರಿಗಳ ಮೇಲೆ ದಾಳಿ ಬೆದರಿಕೆಯ ಸಂದೇಶ ಬಂದಿದ್ದು, ರಾಜ್ಯದಲ್ಲಿರುವ ಸಂಘಟನೆಯ ಎಲ್ಲ ಕಚೇರಿಗಳಿಗೂ ರಕ್ಷಣೆ ಒದಗಿಸಲಾಗುವುದು**
> **ಆರಗ ಜ್ಞಾನೇಂದ್ರ,** ಗೃಹ ಸಚಿವ

> **ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಜವಾಬ್ದಾರಿಯುತ ನಾಗರಿಕನಾಗಿ ಮಾತನಾಡುವುದನ್ನು ಬಿಟ್ಟು, ಪುಂಡ ಪೋಕರಿಯಂತೆ ಮಾತನಾಡುತ್ತಿದ್ದಾರೆ**
> **ಜಗದೀಶ ಶೆಟ್ಟರ್,** ಶಾಸಕ

‘ಮಸೀದಿಗಳಲ್ಲಿ ಶಿವಲಿಂಗ ಹುಡುಕಿ ದೇಶದ ಅಖಂಡತೆಗೆ ಧಕ್ಕೆ ತರಬಾರದು. ಮುಸ್ಲಿಮರು ಸೋದರರು, ನಮ್ಮ ಪೂರ್ವಿಕರೆಂದು ಭಾಗವತರು ಹೇಳಿದ್ದಾರೆ. ಜಿಲ್ಲೆ, ತಾಲ್ಲೂಕುಗಳಲ್ಲಿ ಗೋಷ್ಠಿ ನಡೆಸಿ ಅವರ ಮಾತನ್ನು ತಲುಪಿಸಲಿ’ ಎಂದು ಸಲಹೆ ನೀಡಿದರು.

‘ಅಂಬೇಡ್ಕರ್ ಸಂವಿಧಾನ ಕರಡು ಸಮಿತಿಯ ನೇತೃತ್ವ ವಹಿಸಿದ್ದರಿಂದಲೇ ಸಂವಿಧಾನ ಶಿಲ್ಪಿಯಾಗಿದ್ದಾರೆ. ಆದರೆ, ಬಿ.ಎನ್. ರಾವ್ ಅವರನ್ನು ವೈಭವೀಕರಿಸಿ ಬಾಬಾ ಸಾಹೇಬರನ್ನು ಗೇಲಿ ಮಾಡಿದ್ದೀರಾ. ರೋಹಿತ್ ಚಕ್ರತೀರ್ಥ ಎಲ್ಲಿದ್ದೀರಪ್ಪ ನೀವೆಲ್ಲ, ಥೀ..’ ಎಂದು ಗುಡುಗಿದರು.

‘ಪರಿಷ್ಕರಣೆಗೆ ಖರ್ಚಾಗಿರುವ ₹35 ಕೋಟಿ ಹೋದರೆ ಹೋಗಲಿ. ತಜ್ಞರ ಸಮಿತಿ ರಚಿಸಿ ಪರಿಷ್ಕರಿಸಲಿ. ಮುಖ್ಯಮಂತ್ರಿ, ಶಿಕ್ಷಣ ಸಚಿವರ ಅಪ್ರಜಾಸತ್ತಾತ್ಮಕ ನಡೆಯನ್ನು ಒಪ್ಪಲು ಸಾಧ್ಯವಿಲ್ಲ’ ಎಂದರು.

‘ಚಡ್ಡಿ ಸುಡಬಹುದು; ವಿಚಾರಧಾರೆ ಅಲ್ಲ’

ಹಾಸನ: ‘ಕಾಂಗ್ರೆಸ್ಸಿಗರು ಚಡ್ಡಿಗಳನ್ನು ಸುಡಬಹುದು. ಆದರೆ ನಮ್ಮ ತತ್ವ ಸಿದ್ಧಾಂತ, ವಿಚಾರಧಾರೆಗಳನ್ನು ಸುಡಲು ಸಾಧ್ಯವಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಪಾದಿಸಿದರು.

ಬೇಲೂರು ತಾಲ್ಲೂಕಿನ ರಣಘಟ್ಟ ಬಳಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆರ್‌ಎಸ್‌ಎಸ್ ವಿರುದ್ಧ ಮಾತನಾಡುವ ಕಾಂಗ್ರೆಸ್ಸಿಗರು ಚಡ್ಡಿ ಸುಡುತ್ತೇವೆನ್ನುತ್ತಿದ್ದಾರೆ. ಕಾಂಗ್ರೆಸ್ ಕಚೇರಿಗೆ ಈಗಾಗಲೇ ಚಡ್ಡಿಗಳನ್ನು ಕಳುಹಿಸಲಾಗುತ್ತಿದೆ’ ಎಂದರು.

ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ತಲುಪಿಸಲು ಛಲವಾದಿ ನಾರಾಯಣಸ್ವಾಮಿ ಮತ್ತಿತರರು ಚಡ್ಡಿಗಳನ್ನು ಹೊತ್ತುತಂದರು – ಪ್ರಜಾವಾಣಿ ಚಿತ್ರ

ಚಡ್ಡಿ ತಂದವರು ಪೊಲೀಸ್ ವಶಕ್ಕೆ

ಬೆಂಗಳೂರು: ಆರ್‌ಎಸ್‌ಎಸ್ ಚಡ್ಡಿ ಸುಡುವ ಆಂದೋಲನಕ್ಕೆ ಕರೆ ನೀಡಿದ್ದ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರ ಮನೆಗೆ, ಕಾರ್ಯಕರ್ತರಿಂದ ಸಂಗ್ರಹಿಸಿದ್ದ ಚಡ್ಡಿಗಳನ್ನು ಮಂಗಳವಾರ ಹೊತ್ತುತಂದಿದ್ದ ಮೇಲ್ಮನೆ ಸದಸ್ಯ ಛಲವಾದಿ ನಾರಾಯಣಸ್ವಾಮಿ ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಬಿಡುಗಡೆ ಮಾಡಿದರು.

ಸಿದ್ದರಾಮಯ್ಯ ಅವರಿಗೆ ಕಳುಹಿಸಲು ಚಡ್ಡಿ ಸಂಗ್ರಹಿಸಬೇಕು ಎಂದು ನಾರಾಯಣಸ್ವಾಮಿ, ಮೋರ್ಚಾ ಸದಸ್ಯರಿಗೆ ಕರೆ ನೀಡಿದ್ದರು. ಸಂಗ್ರಹಿಸಿದ್ದ ಚಡ್ಡಿಗಳನ್ನು ರಟ್ಟಿನ ಪೆಟ್ಟಿಗೆಗಳಲ್ಲಿ ತುಂಬಿ ತಲೆಮೇಲೆ ಹೊತ್ತು ಸಿದ್ದರಾಮಯ್ಯ ಅವರ ನಿವಾಸದತ್ತ ಬರುತ್ತಿದ್ದರು.

‘ಕಾಂಗ್ರೆಸ್‌ನವರು ಈಗ ಚಡ್ಡಿ ಸುಡುವ ಮೂಲಕ ಮತ್ತಷ್ಟು ಬೆತ್ತಲಾಗುತ್ತಿದ್ದಾರೆ. ಆರ್‌ಎಸ್‌ಎಸ್‌ನವರು ಪ್ಯಾಂಟ್ ಧರಿಸಲು ಆರಂಭಿಸಿ ವರ್ಷಗಳಾಗಿವೆ. ಹಿಂದೆ ಸೇನೆ, ಪೊಲೀಸ್ ಇಲಾಖೆಯಲ್ಲಿ ಚಡ್ಡಿ ಧರಿಸುತ್ತಿದ್ದರು. ರೈತರೂ ಚಡ್ಡಿ ಧರಿಸುತ್ತಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದರು.

रजिस्ट्री सं. डी. एल. -33004/99 REGD. NO. D.L.-33004/99

भारत का राजपत्र
The Gazette of India

सी.जी.-डी.एल.-अ.- 02062022-236225
CG-DL-E- 02062022-236225
असाधारण
EXTRAORDINARY
भाग II-खण्ड 3-उप-खण्ड (ii)
PART II-Section 3-Sub-section (ii)
प्राधिकार से प्रकाशित
PUBLISHED BY AUTHORITY

सं : 2405] नई दिल्ली, बुधवार, जून 1, 2022/ज्येष्ठ 19, 1944
No. 2405] NEW DELHI, WEDNESDAY, JUNE 1, 2022/JYAISTHA 19, 1944

ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, ದಿನಾಂಕ: 31ನೇ ಮೇ, 2022

ಎಸ್. ಓ. 2532(ಇ): ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿಯಲ್ಲಿ ಜಮೀನುಗಳನ್ನು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಸಾಣೂರುನಿಂದ ಬಿಕರ್ನಕಟ್ಟೆ ವರೆಗೆ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 169 (ಹಳೆಯ ಸಂಖ್ಯೆ 13) ರಲ್ಲಿ ಕಿ.ಮೀ 691+350 ರಿಂದ ಕಿ.ಮೀ 736+362 ರವರೆಗೆ ಭಾರತ್ ಮಾಲಾ ಪರಿಯೋಜನಾ ಅಡಿಯಲ್ಲಿ ಹೈಬ್ರೀಡ್ ಆನ್ಯೂಟಿ ಮೋಡ್ (ಪ್ಯಾಕೇಜ್ III) ರಸ್ತೆಯ ನಿರ್ಮಾಣ, ನಿರ್ವಹಣೆ (ಅಗಲೀಕರಣ/ಎರಡು ಲೇನ್ ಸುಸಜ್ಜಿತ ಭುಜ/ನಾಲ್ಕು ಲೇನಿಂಗ್ ಇತ್ಯಾದಿ), ವ್ಯವಸ್ಥಾಪನೆ, ಕಾರ್ಯನಿರ್ವಾಹಣೆ ಮತ್ತು ಪ್ರಕ್ರಿಯ ಮಾಡುವ ಸಲುವಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯಕವಾಗಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ರ ಪ್ರಕಾರ ನಿಯಮ (3) ಉಪನಿಯಮ (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಈ ಅಧೀಸೂಚನೆ ಹೊರಡಿಸಿರುವ ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ **ಇಪ್ಪತ್ತೊಂದು ದಿವಸಗಳ** ಒಳಗಾಗಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಸೆಕ್ಷನ್ 3C (1) ಅನ್ವಯ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಯನ್ನು ಸಕ್ಷಮ ಪ್ರಾಧಿಕಾರಿಗಳು ಅಂದರೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 169 (ಹಳೆಯ ಸಂಖ್ಯೆ 13) ಮಂಗಳೂರು ರವರಿಗೆ ಬರಹದ ಮೂಲಕ ಸಕಾರಣಗಳೊಂದಿಗೆ ಸಲ್ಲಿಸತಕ್ಕದು ಹಾಗೂ ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆದಾರರ ಅಹವಾಲುಗಳನ್ನು ಆಲಿಸಲು ಆಕ್ಷೇಪಣೆದಾರರಿಗೆ ಅಥವಾ ಅವರ ವಕೀಲರಿಗೆ ಅವಕಾಶ ನೀಡಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಸೂಕ್ತವೆಂದು ಕಂಡುಬಂದಲ್ಲಿ ಇತರೆ ಅಂಶಗಳನ್ನು ಪರಿಗಣಿಸಿ ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ನಿಯಮ 3C (2)ರಂತೆ ಸಕ್ಷಮ ಪ್ರಾಧಿಕಾರಿಗಳು ಮಾಡಿದ ಆದೇಶ ಅಂತಿಮವಾಗಿರುತ್ತದೆ.

ಈ ಅಧಿಸೂಚನೆಗೆ ಒಳಪಟ್ಟಿರುವ ಜಮೀನುಗಳ ನಕಾಶೆಗಳು ಮತ್ತು ಇತರೆ ವಿವರಗಳು ಹಿತಾಸಕ್ತಿ ಉಳ್ಳವರ ಪರಿಶೀಲನೆಗೆ ಸದರಿ ಸಕ್ಷಮ ಪ್ರಾಧೀಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಟ್ಟಡ, 1ನೇ ಮಹಡಿ, ಮಿನಿ ವಿಧಾನಸೌಧ ಕಟ್ಟಡದ ಹಿಂದುಗಡೆ, ಮಂಗಳೂರು ರವರ ಕಛೇರಿಯಲ್ಲಿ ಲಭ್ಯವಿರುತ್ತವೆ.

ಅನುಸೂಚಿ

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಸಾಣೂರುನಿಂದ ಬಿಕರ್ನಕಟ್ಟೆ ವರೆಗೆ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 169 (ಹಳೆಯ ಸಂಖ್ಯೆ 13) ರಲ್ಲಿ ಕಿ.ಮೀ 691+350 ರಿಂದ ಕಿ.ಮೀ 736+362 ರವರೆಗೆ ಭಾರತ್ ಮಾಲಾ ಪರಿಯೋಜನಾ ಅಡಿಯಲ್ಲಿ ಹೈಬ್ರೀಡ್ ಆನ್ಯೂಟಿ ಮೋಡ್ (ಪ್ಯಾಕೇಜ್ III) ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ, ಭೂಸ್ವಾಧೀನಪಡಿಸಿಕೊಳ್ಳುವ ಕಟ್ಟಡ ಇರುವ ಅಥವಾ ಕಟ್ಟಡ ಇಲ್ಲದೆ ಇರುವ ಜಮೀನುಗಳ ಸಂಕ್ಷಿಪ್ತ ವಿವರಗಳು:

ರಾಜ್ಯ: ಕರ್ನಾಟಕ — ಜಿಲ್ಲೆ: ದಕ್ಷಿಣ ಕನ್ನಡ

ಕ್ರಮ. ಸಂಖ್ಯೆ	ಸರ್ವೇ/ ಪ್ಲಾಟ್. ನಂ	ಜಮೀನಿನ ತರಹೆ	ಜಮೀನಿನ ವಿವರಣೆ	ವಿಸ್ತೀರ್ಣ (ಚ.ಮೀ.ಗಳಲ್ಲಿ)
ತಾಲೂಕು: ಮಂಗಳೂರು				ಗ್ರಾಮ: ತೆಂಕ ಎಡಪದವು
1	10/2ಎ3	ಖಾಸಗಿ	ಬಾಗಾಯ್ತು	6
2	10/2ಬಿ	ಖಾಸಗಿ	ಬಾಗಾಯ್ತು	466
3	10/4ಎ3	ಖಾಸಗಿ	ಖುಷ್ಕಿ	40.47
4	10/6ಎ	ಸರಕಾರ	ಖುಷ್ಕಿ	28
5	10/6ಎ1	ಖಾಸಗಿ	ಕೃಷಿಯೇತರ	183
6	10/6ಎ2	ಖಾಸಗಿ	ಖುಷ್ಕಿ	203
7	10/6ಬಿ	ಖಾಸಗಿ	ಬಾಗಾಯ್ತು	142
8	10/7ಎ	ಸರಕಾರ	ಖುಷ್ಕಿ	12
9	11/1	ಖಾಸಗಿ	ತರಿ	2,105
10	11/3	ಸರಕಾರ	ಪೊರಂಬೋಕ್	50
11	12/1ಎ	ಖಾಸಗಿ	ತರಿ	1,032
12	12/5	ಸರಕಾರ	ಪೊರಂಬೋಕ್	25
13	213/1ಬಿ1	ಖಾಸಗಿ	ಕೃಷಿಯೇತರ	1,012
14	213/1ಸಿ	ಸರಕಾರ	ಖುಷ್ಕಿ	45
15	213/3	ಖಾಸಗಿ	ಖುಷ್ಕಿ	243
16	219/1ಎ	ಸರಕಾರ	ಖುಷ್ಕಿ	101
17	219/1ಬಿ	ಖಾಸಗಿ	ಖುಷ್ಕಿ	607
18	219/1ಸಿ	ಸರಕಾರ	ಖುಷ್ಕಿ	50
19	236/4ಬಿ	ಖಾಸಗಿ	ಖುಷ್ಕಿ	283
20	237/2	ಖಾಸಗಿ	ಖುಷ್ಕಿ	1,416
21	237/4ಬಿ	ಖಾಸಗಿ	ಖುಷ್ಕಿ	567
22	237/8	ಖಾಸಗಿ	ಖುಷ್ಕಿ	61
23	237/9	ಖಾಸಗಿ	ಖುಷ್ಕಿ	202
24	241/1, 241/2, 241/4, 241/6	ಖಾಸಗಿ	ಖುಷ್ಕಿ	8,015
25	26/2ಎ1	ಖಾಸಗಿ	ತರಿ	1,052
26	26/2ಎ2	ಖಾಸಗಿ	ತರಿ	61
27	30/3ಸಿ2	ಖಾಸಗಿ	ತರಿ	1,012
28	30/4	ಖಾಸಗಿ	ಖುಷ್ಕಿ	405
29	30/5	ಖಾಸಗಿ	ತರಿ	243
30	33/3	ಖಾಸಗಿ	ತರಿ	1,619
31	33/6	ಖಾಸಗಿ	ತರಿ	648
32	41/15	ಖಾಸಗಿ	ತರಿ	405
33	41/16ಎ	ಖಾಸಗಿ	ತರಿ	405
34	41/16ಬಿ	ಖಾಸಗಿ	ತರಿ	324
35	41/17	ಖಾಸಗಿ	ತರಿ	405
36	41/18	ಖಾಸಗಿ	ತರಿ	405
37	41/19	ಖಾಸಗಿ	ಬಾಗಾಯ್ತು	1,214
38	41/20	ಖಾಸಗಿ	ಬಾಗಾಯ್ತು	405
39	41/6	ಖಾಸಗಿ	ತರಿ	1,619
40	41/7	ಖಾಸಗಿ	ತರಿ	405
41	46/2	ಖಾಸಗಿ	ಕೃಷಿಯೇತರ	364
42	46/3ಬಿ	ಖಾಸಗಿ	ಕೃಷಿಯೇತರ	395
43	47/6	ಖಾಸಗಿ	ತರಿ	21
44	48/1	ಸರಕಾರ	ಖುಷ್ಕಿ	50
45	48/2ಎ	ಸರಕಾರ	ಖುಷ್ಕಿ	50
46	48/2ಬಿ	ಖಾಸಗಿ	ಬಾಗಾಯ್ತು	486
47	48/8	ಖಾಸಗಿ	ಖುಷ್ಕಿ	283
48	6/10ಎ	ಸರಕಾರ	ಪೊರಂಬೋಕ್	125
49	6/18	ಖಾಸಗಿ	ತರಿ	51
50	6/8ಸಿ1	ಖಾಸಗಿ	ಕೃಷಿಯೇತರ	769
51	6/9ಡಿ	ಸರಕಾರ	ಪೊರಂಬೋಕ್	51
52	95/1	ಖಾಸಗಿ	ಬಾಗಾಯ್ತು	283
53	95/2ಎ1	ಖಾಸಗಿ	ಖುಷ್ಕಿ	1,093
54	95/2ಎ3	ಖಾಸಗಿ	ಖುಷ್ಕಿ	890
55	95/2ಸಿ	ಖಾಸಗಿ	ಖುಷ್ಕಿ	1,416
56	95/2ಡಿ	ಖಾಸಗಿ	ಖುಷ್ಕಿ	810
ತಾಲೂಕು: ಮೂಡಬಿದ್ರೆ				ಗ್ರಾಮ: ಮಾರ್ಪಾಡಿ
1	156/2	ಖಾಸಗಿ	ಖುಷ್ಕಿ	4,513
2	178/16	ಖಾಸಗಿ	ಖುಷ್ಕಿ	516
3	178/1ಎ11	ಖಾಸಗಿ	ಖುಷ್ಕಿ	182
4	178/1ಎ12	ಖಾಸಗಿ	ಖುಷ್ಕಿ	667
5	178/1ಎ13	ಖಾಸಗಿ	ಖುಷ್ಕಿ	300
6	178/1ಎ18	ಖಾಸಗಿ	ಖುಷ್ಕಿ	81
7	178/1ಎ19	ಖಾಸಗಿ	ಖುಷ್ಕಿ	445
8	178/1ಎ1ಬಿ	ಖಾಸಗಿ	ಖುಷ್ಕಿ	200
9	178/1ಎ4	ಖಾಸಗಿ	ಖುಷ್ಕಿ	806
10	178/1ಎ6	ಖಾಸಗಿ	ಖುಷ್ಕಿ	607
11	178/1ಎ7	ಖಾಸಗಿ	ಖುಷ್ಕಿ	395
12	178/1ಬಿ	ಖಾಸಗಿ	ತರಿ	842
13	178/2	ಖಾಸಗಿ	ಖುಷ್ಕಿ	806
14	183/1	ಖಾಸಗಿ	ಖುಷ್ಕಿ	3,017
15	206	ಖಾಸಗಿ	ಖುಷ್ಕಿ	2,000
16	207	ಖಾಸಗಿ	ಖುಷ್ಕಿ	1,600
17	210/1	ಸರಕಾರ	ಪೊರಂಬೋಕ್	101
18	210/2	ಖಾಸಗಿ	ಖುಷ್ಕಿ	618
19	213/1ಎ	ಸರಕಾರ	ಪೊರಂಬೋಕ್	110
20	213/1ಬಿ	ಸರಕಾರ	ಪೊರಂಬೋಕ್	145
21	213/2ಎ	ಖಾಸಗಿ	ಖುಷ್ಕಿ	692
22	213/2ಬಿ	ಖಾಸಗಿ	ಖುಷ್ಕಿ	728.46
23	213/2ಸಿ	ಖಾಸಗಿ	ಖುಷ್ಕಿ	162
24	215/1ಎ1	ಖಾಸಗಿ	ಖುಷ್ಕಿ	4,000
25	215/1ಎ2	ಖಾಸಗಿ	ಖುಷ್ಕಿ	4,000
26	216/1ಬಿ	ಸರಕಾರ	ಖುಷ್ಕಿ	120
27	216/1ಸಿ	ಖಾಸಗಿ	ಖುಷ್ಕಿ	80
28	225/3ಎ	ಸರಕಾರ	ಪೊರಂಬೋಕ್	30
29	225/5	ಖಾಸಗಿ	ಕೃಷಿಯೇತರ	126
30	240/1ಎ2	ಖಾಸಗಿ	ತರಿ	1,012
31	240/1ಬಿ	ಖಾಸಗಿ	ಖುಷ್ಕಿ	607
32	240/2ಎ	ಸರಕಾರ	ಖುಷ್ಕಿ	100
33	240/3	ಖಾಸಗಿ	ಖುಷ್ಕಿ	102
34	240/3ಎ	ಖಾಸಗಿ	ಖುಷ್ಕಿ	21
35	240/3ಸಿ	ಖಾಸಗಿ	ಖುಷ್ಕಿ	7,005
36	259/2	ಸರಕಾರ	ಪೊರಂಬೋಕ್	57
37	259/3	ಸರಕಾರ	ಖುಷ್ಕಿ	101
38	260/2	ಸರಕಾರ	ಪೊರಂಬೋಕ್	40
39	260/3	ಖಾಸಗಿ	ಖುಷ್ಕಿ	2,024
40	260/4	ಖಾಸಗಿ	ಖುಷ್ಕಿ	1,416
41	320/2	ಸರಕಾರ	ಪೊರಂಬೋಕ್	202
42	321/2	ಸರಕಾರ	ಪೊರಂಬೋಕ್	350
ತಾಲೂಕು: ಮೂಡಬಿದ್ರೆ				ಗ್ರಾಮ: ಪುತ್ತಿಗೆ
1	10/1	ಖಾಸಗಿ	ತರಿ	1,012
2	138/1	ಖಾಸಗಿ	ಖುಷ್ಕಿ	404
3	138/2	ಖಾಸಗಿ	ತರಿ	4,047
4	138/3	ಖಾಸಗಿ	ತರಿ	1,303
5	14/2	ಖಾಸಗಿ	ತರಿ	850
6	14/3	ಖಾಸಗಿ	ತರಿ	1,053
7	14/7	ಖಾಸಗಿ	ಖುಷ್ಕಿ	607
8	14/8	ಖಾಸಗಿ	ಖುಷ್ಕಿ	607
9	148/1	ಖಾಸಗಿ	ಖುಷ್ಕಿ	4,856
10	148/2	ಖಾಸಗಿ	ಖುಷ್ಕಿ	5,016
11	149/1ಬಿ1	ಸರಕಾರ	ಪೊರಂಬೋಕ್	50
12	149/2	ಖಾಸಗಿ	ಖುಷ್ಕಿ	1,942
13	15/1	ಖಾಸಗಿ	ತರಿ	810
14	15/2	ಸರಕಾರ	ಪೊರಂಬೋಕ್	60
15	15/3	ಖಾಸಗಿ	ತರಿ	2,307
16	15/4	ಸರಕಾರ	ಪೊರಂಬೋಕ್	60
17	15/5	ಖಾಸಗಿ	ತರಿ	6,070
18	16/2	ಖಾಸಗಿ	ತರಿ	2,024
19	16/6	ಖಾಸಗಿ	ತರಿ	3,240
20	167/1	ಖಾಸಗಿ	ಖುಷ್ಕಿ	283
21	17/1	ಖಾಸಗಿ	ತರಿ	404
22	17/2	ಖಾಸಗಿ	ತರಿ	404
23	172/2ಬಿ1	ಖಾಸಗಿ	ಖುಷ್ಕಿ	648
24	172/2ಬಿ2	ಖಾಸಗಿ	ಖುಷ್ಕಿ	486
25	172/2ಬಿ5	ಖಾಸಗಿ	ಕೃಷಿಯೇತರ	324
26	172/2ಬಿ6	ಖಾಸಗಿ	ಖುಷ್ಕಿ	243
27	172/2ಬಿ7	ಖಾಸಗಿ	ಖುಷ್ಕಿ	870
28	172/6ಎ2	ಖಾಸಗಿ	ಖುಷ್ಕಿ	162
29	172/6ಬಿ	ಖಾಸಗಿ	ಖುಷ್ಕಿ	283
30	18/2	ಖಾಸಗಿ	ತರಿ	1,214

ಆದೇಶ ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ರಾಷ್ಟ್ರೀಯಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸ್ವಯಂ ಸೇವಕ ರುದ್ರೇಶ್ ಕೊಲೆ ಪ್ರಕರಣದ ಪ್ರಮುಖ ಆರೋಪಿಗಳಾದ ಇರ್ಫಾನ್ ಪಾಷಮತ್ತುಮೊಹಮದ್‌ಮುಜೀಬುಲ್ಲಾ ಅವರ ಜಾಮೀನು ಕೋರಿದ ಅರ್ಜಿ ವಿಚಾರಣೆ ಮಂಗಳವಾರ ಮುಕ್ತಾಯವಾಗಿದ್ದು, ಆದೇಶ ಕಾಯ್ದಿರಿಸಲಾಗಿದೆ.

ಇರ್ಫಾನ್ ಪಾಷ ಮತ್ತು ಮಹಮ್ಮದ್ ಮುಜೀಬುಲ್ಲಾ ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ಶಿವಶಂಕರ ಅಮರಣ್ಣವರ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ಆಲಿಸಿತು.

ಆರೋಪಿಗಳ ಪರ ಎಸ್.ಬಾಲ ಕೃಷ್ಣನ್ ಮತ್ತು ಎನ್‌ಐಎ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದರು. ಪ್ರಕರಣದ ಐವರು ಆರೋಪಿಗಳು 2016ರ ಅ.27ರಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ.

2016ರ ಅ.16ರಂದು ಗಣವೇಶಧಾರಿಯಾಗಿದ್ದ ಶ್ರೀನಿವಾಸ್ ಅವರನ್ನು ಮಚ್ಚಿನಿಂದ ಕೊಚ್ಚಿ ಕೊಂದಿದ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಂಗವಿಕಲರೊಬ್ಬರಿಗೆ ಕೃತಕ ಕಾಲು ಜೋಡಿಸಿದರು

ನಾವೇ ಪಠ್ಯ ಪರಿಷ್ಕರಿಸಿ ಸರ್ಕಾರಕ್ಕೆ ನೀಡುತ್ತೇವೆ: ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಲೋಪ ಸರಿಪಡಿಸಲು 10 ದಿನ ಗಡುವು

ಪ್ರಜಾವಾಣಿ ವಾರ್ತೆ

ಧಾರವಾಡ: 'ಪುಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಲೋಪವನ್ನು ಹತ್ತು ದಿನಗಳ ಒಳಗಾಗಿ ಸರಿಪಡಿಸಬೇಕು' ಎಂದು ಉತ್ತರ ಕರ್ನಾಟಕ ಪ್ರಮುಖ ಮಠಗಳ ಮಠಾಧೀಶರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಉತ್ತರ ಕರ್ನಾಟಕದ 21 ಪ್ರಮುಖ ಮಠಗಳ ಮಠಾಧೀಶರೊಂದಿಗೆ ಮಂಗಳವಾರ ಸಭೆ ನಡೆಸಿದ ನಂತರ ಸಾಣೇಹಳ್ಳಿ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

'9ನೇ ತರಗತಿಯ ಸಮಾಜ ವಿಜ್ಞಾನ ಪುಸ್ತಕದ ಮೊದಲ ಭಾಗದಲ್ಲಿ ವೈದಿಕ ಧರ್ಮವನ್ನು ಮಕ್ಕಳ ಮೇಲೆ ಹೇರುವ ಕೆಲಸವನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಮಾಡಿದೆ. ವೈದಿಕ ಪರಂಪರೆ ಹಾಗೂ ಜನಿವಾರವನ್ನು ಧಿಕ್ಕರಿಸಿ ಅರಿವೇ ಗುರು ಎಂದ ಬಸವಣ್ಣನವರು ಲಿಂಗಾಯತ ಧರ್ಮ ಪ್ರತಿಷ್ಠಾಪಿತರು. ಆದರೆ ಅವರ ತತ್ವಕ್ಕೆ ಅಪಚಾರ ಎಸಗುವ ಕೆಲಸವನ್ನು ಸಮಿತಿ ಮಾಡಿದೆ' ಎಂದು ಆರೋಪಿಸಿದರು.

'ಜಾತಿ, ಲಿಂಗ ಅಸಮಾನತೆ, ಮೌಢ್ಯ, ಯಜ್ಞಯಾಗಾದಿಗಳನ್ನು ವಿರೋಧಿಸಿದ ಬಸವಣ್ಣನವರ ಕುರಿತು ಇಲ್ಲಸಲ್ಲದ ವಿಷಯಗಳನ್ನು ಹೇಳಲಾಗಿದೆ. ಹಾಗೆಯೇ ಕುವೆಂಪು, ಅಂಬೇಡ್ಕರ್ ಹಾಗೂ ಇನ್ನಿತರ ಮಹಾನ್ ನಾಯಕರ ಕುರಿತೂ ತಪ್ಪು ಮಾಹಿತಿಯನ್ನು ಪಠ್ಯಪುಸ್ತಕದಲ್ಲಿ ಮುದ್ರಿಸಲಾಗಿದೆ. ಬಸವಣ್ಣನವರ ಕುರಿತ ಪಠ್ಯವನ್ನು ನಾವೇ ಪರಿಷ್ಕರಿಸಿ ಸರ್ಕಾರಕ್ಕೆ ನೀಡುತ್ತೇವೆ. ಸರ್ಕಾರ ಅದನ್ನಾದರೂ ಒಪ್ಪಬಹುದು, ಇಲ್ಲವೇ ತಾನೇ ಸರಿಪಡಿಸಬಹುದು. ಹತ್ತು ದಿನಗಳ ಒಳಗಾಗಿ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿದ್ದರೆ, ಮುಂದೆ ಮತ್ತೆ ಸಭೆ ಸೇರಿ ಮುಂದಿನ ಹೋರಾಟದ ರೂಪುರೇಷೆ ಕುರಿತು ತೀರ್ಮಾನಿಸಲಾಗುವುದು' ಎಂದರು.

ಧಾರವಾಡದಲ್ಲಿ ಮಂಗಳವಾರ ನಡೆದ ವಿವಿಧ ಮಠಾಧೀಶರ ಸಭೆಯಲ್ಲಿ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು

'ಇಷ್ಟು ದಿನ ಕೇಳುವವರು ಇಲ್ಲ ಎಂದು ಬಸವಣ್ಣನವರ ಕುರಿತು ಇಲ್ಲಸಲ್ಲದ್ದನ್ನು ಹೇಳಿದ್ದಾರೆ. ಈಗ ಇರುವ ಸತ್ಯವನ್ನು ತಿಳಿಸುವ ಕೆಲಸವನ್ನು ನಾವೆಲ್ಲರೂ ಒಟ್ಟಾಗಿ ಮಾಡಲು ನಿಂತಿದ್ದೇವೆ. ಇತ್ತೀಚೆಗೆ ಮುಖ್ಯಮಂತ್ರಿಗೆ ಬರೆದ ಪತ್ರಕ್ಕೆ ಬಸವರಾಜ ಬೊಮ್ಮಾಯಿ ಹಾಗೂ ಶಿಕ್ಷಣ ಸಚಿವ ನಾಗೇಶ್ ಅವರು ಸಹಿ ಮಾಡಿ ಸರಿಪಡಿಸುವ ಭರವಸೆ ನೀಡಿದ್ದಾರೆ. ಅವರು ಹೇಳಿದಂತೆ ನಡೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

ಮೂರುಸಾವಿರ ಮಠದ ಡಾ. ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಆನಂದಪುರದ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ, ಗದುಗಿನ ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ, ನಿಡಸೋಸಿ ಡಾ. ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ, ಕೂಡಲಸಂಗಮದ ಗಂಗಾಮಾತಾಜಿ, ಬಸವಜಯಮೃತ್ಯುಂಜಯ ಸ್ವಾಮೀಜಿ, ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಸೇರಿದಂತೆ 21 ಮಠಾಧೀಶರು ಪಾಲ್ಗೊಂಡಿದ್ದರು.

ಸುರಪುರ ನಾಯಕರ ಕೊಡುಗೆಗೆ ಕತ್ತರಿ: ಆಕ್ರೋಶ

ಚಿತ್ರದುರ್ಗ: ಭಾರತೀಯ ಇತಿಹಾಸದಲ್ಲಿ ಸುರಪುರ ಸಂಸ್ಥಾನಕ್ಕೆ ಅಗ್ರಸ್ಥಾನವಿದೆ. ಆದರೆ, ಚರಿತ್ರೆಯ ಅರಿವೇ ಇಲ್ಲದ ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯು 'ಸುರಪುರ ನಾಯಕರ ಚರಿತ್ರೆಯ ಸಾಂಸ್ಕೃತಿಕ ಕೊಡುಗೆ'ಗಳನ್ನು ಕಡಿತಗೊಳಿಸಿರುವುದು ಸುರಪುರದ ಇತಿಹಾಸಕ್ಕೆ ಬಗೆದ ದ್ರೋಹ ಎಂದು ಚಿತ್ರದುರ್ಗದ ನಾಯಕ ಅರಸು ವಂಶಸ್ಥರಾದ ರಾಜಾ ಮದಕರಿ ನಾಯಕ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜಾ ಮದಕರಿ ನಾಯಕ

'ಪ್ರಜಾವಾಣಿ'ಯಲ್ಲಿ ಜೂನ್ 7ರಂದು ಪ್ರಕಟವಾದ 'ಪಠ್ಯಪುಸ್ತಕದಲ್ಲಿ ಸುರಪುರ ನಾಯಕರ ಕೊಡುಗೆಗೂ ಕತ್ತರಿ!' ಶೀರ್ಷಿಕೆಯ ವರದಿಗೆ ಪ್ರತಿಕ್ರಿಯಿಸಿ ಪತ್ರ ಬರೆದಿರುವ ಅವರು, 'ವಿಜಯನಗರದ ಸಂಸ್ಕೃತಿಯ ಸಂರಕ್ಷಣೆ ಹಾಗೂ ಮುಂದುವರಿಕೆಯ ಧ್ಯೇಯೋದ್ದೇಶವನ್ನಿಟ್ಟುಕೊಂಡು ಸುರಪುರ ನಾಯಕರು ವಿಜಯನಗರೋತ್ತರ ಇತಿಹಾಸದಲ್ಲಿ, ಅದರಲ್ಲೂ ಮುಖ್ಯವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಈ ನೆಲದ ಹಿರಿಮೆ-ಗರಿಮೆಯನ್ನು ಮೆರೆದವರು. ದಕ್ಷಿಣ ಭಾರತದಲ್ಲಿ ಛಲದ ಪ್ರತೀಕವೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದವರು' ಎಂದು ಹೇಳಿದ್ದಾರೆ.

1858ರಲ್ಲಿ ದಕ್ಷಿಣ ಭಾರತದ ಅರಸರನ್ನೆಲ್ಲಾ ಒಂದುಗೂಡಿಸಿ, ಆಂಗ್ಲರ ವಿರುದ್ಧ ಹೋರಾಡಿದ ಹೆಮ್ಮೆ ಈ ಮನೆತನಕ್ಕಿದೆ. ಈ ಸಂಸ್ಥಾನದ ನಾಯಕರ ಸಾಂಸ್ಕೃತಿಕ ವಿಷಯವನ್ನು ಪ್ರೊ.ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದ ಪಠ್ಯಪುಸ್ತಕ ರಚನಾ ಸಮಿತಿಯು ಪಠ್ಯಪುಸ್ತಕದಲ್ಲಿ ಸೇರಿಸಿ, ನ್ಯಾಯ ದೊರಕಿಸಿಕೊಟ್ಟಿತ್ತು. ಆದರೆ, ಏಕಾಏಕಿ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಇತಿಹಾಸ ಕಡಿತಗೊಳಿಸಿರುವುದು ಸರಿಯಲ್ಲ. ಈ ಲೋಪ ಸರಿಪಡಿಸದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು' ಎಂದು ಸರ್ಕಾರವನ್ನು ಎಚ್ಚರಿಸಿದ್ದಾರೆ.

ಸಿ.ಎಂ.ಗೆ ದೂರು

ಸುರಪುರ: 'ಪರಿಷ್ಕರಣಾ ಸಮಿತಿ ಸುರಪುರ ಇತಿಹಾಸ ತೆಗೆದು ಹಾಕಿದ್ದು ಅಕ್ಷಮ್ಯ. ಈ ಬಗ್ಗೆ ಮುಖ್ಯಮಂತ್ರಿಗೆ ದೂರು ಸಲ್ಲಿಸಲಾಗುವುದು' ಎಂದು ಸುರಪುರ ಸಂಸ್ಥಾನದ ವಂಶಸ್ಥ ಡಾ. ರಾಜಾ ಕೃಷ್ಣಪ್ಪನಾಯಕ ತಿಳಿಸಿದ್ದಾರೆ.

'ನಾಡಿಗೆ ವಿಶಿಷ್ಟ ಕೊಡುಗೆ ನೀಡಿದ ಸುರಪುರ ನಾಯಕರ ಇತಿಹಾಸ ಸಂಕ್ಷಿಪ್ತವಾಗಿತ್ತು. ಅದಕ್ಕೆ ಕತ್ತರಿ ಹಾಕಿದ್ದು ಇತಿಹಾಸಕ್ಕೆ ಮಾಡಿದ ಅಪಚಾರ' ಎಂದು ಸುರಪುರ ಇತಿಹಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಭಾಸ್ಕರರಾವ ಮುಡಬೂಳ ತಿಳಿಸಿದ್ದಾರೆ.

'ಚರಂಡಿಯಲ್ಲಿದ್ದವನಿಗೆ ಜವಾಬ್ದಾರಿ ಕೊಟ್ಟರು'

ಮಂಗಳೂರು: 'ಪಠ್ಯಪುಸ್ತಕ ಪರಿಷ್ಕರಣೆ ಮಾಡುವುದಕ್ಕೆ ಅನೇಕ ಸಾಹಿತಿಗಳು ಹಾಗೂ ಪ್ರಾಧ್ಯಾಪಕರಿದ್ದಾರೆ. ಅವರೆಲ್ಲರನ್ನು ಬಿಟ್ಟು ಶಿಕ್ಷಣ ಸಚಿವರು ಯಾವನೋ ಚರಂಡಿಯಲ್ಲಿದ್ದವನನ್ನು ಪ್ರೊಫೆಸರ್ ಎಂದು ಹೇಳಿ ಕರೆತಂದು ಈ ಜವಾಬ್ದಾರಿ ಕೊಟ್ಟರು' ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ಪ್ರೊಫೆಸರ್ ಅಲ್ಲ ಎಂದು ಅವನೇ (ರೋಹಿತ್ ಚಕ್ರತೀರ್ಥ) ಹೇಳಿದ್ದಾನೆ. ಸಿಇಟಿ ಎಂಬುದು ಯಾವ ಕೋರ್ಸ್ ಎಂದೇ ಗೊತ್ತಿಲ್ಲ. ಏನೂ ಅರ್ಹತೆ ಇಲ್ಲದವರನ್ನು ಕರೆತಂದು ನಾಗಪುರ ವಿಶ್ವವಿದ್ಯಾಲಯದ ಗುಪ್ತ ಕಾರ್ಯಸೂಚಿಯನ್ನು ಹೇರುವುದಕ್ಕೆ ನಾವು ಅವಕಾಶ ನೀಡುವುದಿಲ್ಲ' ಎಂದರು.

'ರೋಹಿತ್ ಚಕ್ರತೀರ್ಥನೋ, ವಕ್ರತೀರ್ಥನೋ ಗೊತ್ತಿಲ್ಲ. ನಾಗಪುರ ವಿಶ್ವವಿದ್ಯಾಲಯದಿಂದ ಬಂದ ಇವರಿಗೆಲ್ಲ ಜವಾಬ್ದಾರಿ ಇಲ್ಲ. ನಾಳೆ ಪಠ್ಯಪುಸ್ತಕಗಳಲ್ಲಿ ಈ ವಿಚಾರಗಳನ್ನೆಲ್ಲ ಆರ್‌ಎಸ್‌ಎಸ್ ಸೇರಿಸಿದೆ ಎಂದರೆ, ಅದಕ್ಕೆ ಪುರಾವೆಯೇ ಇರುವುದಿಲ್ಲ. ಏಕೆಂದರೆ, ಅದು ನೊಂದಾಯಿತ ಸಂಸ್ಥೆಯೇ ಅಲ್ಲ' ಎಂದರು.

'ಈಗ ಖಾಕಿ ಚಡ್ಡಿ ಬದಲು ಪ್ಯಾಂಟು ಬಂದಿದೆ. ಇದು ಅವರ ಅಸ್ಮಿತೆಯನ್ನೇ ಕಳೆದುಕೊಂಡಿರುವುದರ ಸಂಕೇತ. ಈಗ ಶೇ 40ರಷ್ಟು ಕಮಿಷನ್ ಬರುತ್ತಿರುವುದರಿಂದ, ಪ್ಯಾಂಟು ಹಾಗೂ ₹ 10 ಲಕ್ಷದ ಸೂಟುಗಳೆಲ್ಲವೂ ಬಂದಿವೆ' ಎಂದು ವ್ಯಂಗ್ಯವಾಗಿ ಹೇಳಿದರು.

ಹೈಕಮಾಂಡ್ ನಿರ್ಧಾರ : 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಕ್ಷೇತ್ರದಿಂದ ಸ್ಪರ್ಧಿಸುವಂತೆ ಮೊಯ್ದಿನ್ ಬಾವಾ ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ' ಎಂದು ಹರಿಪ್ರಸಾದ್ ಪ್ರತಿಕ್ರಿಯಿಸಿದರು.

'ಪಠ್ಯ ಪರಿಷ್ಕರಣಾ ಸಮಿತಿ ಎಡವಿದೆ'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಪಠ್ಯಪುಸ್ತಕ ಪರಿಷ್ಕರಣ ಸಮಿತಿಯು ಎಡವಿದೆ. ಅಂಬೇಡ್ಕರ್ ಪಠ್ಯದಿಂದ ಸಂವಿಧಾನ ಶಿಲ್ಪಿ ಎಂಬ ಪದವನ್ನು ತೆಗೆಯಲಾಗಿದೆ. ಬಸವಣ್ಣ ಅವರ ಬಗ್ಗೆ ತಪ್ಪಾಗಿ ಬರೆಯಲಾಗಿದೆ. ಆಗಿರುವ ತಪ್ಪುಗಳನ್ನು ಸರಿಪಡಿಸುವುದಾಗಿ ಈಗಾಗಲೇ ಮುಖ್ಯಮಂತ್ರಿ ಹೇಳಿದ್ದಾರೆ' ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಮಂಗಳವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಭಾವನಾತ್ಮಕ ವಿಚಾರಗಳನ್ನು ಬಳಸಿ ರಾಜಕೀಯ ಲಾಭ ಪಡೆಯಲು ಯಾರೂ ಹೋಗಬಾರದು. ಧರ್ಮವನ್ನು ಮನುಷ್ಯನ ಒಳಿತಿಗೆ ಬಳಸಬೇಕು. ಆದರೆ ಈಗ ವೈಭವೀಕರಿಸಲಾಗುತ್ತಿದೆ' ಎಂದರು. 'ಆರ್‌ಎಸ್‌ಎಸ್‌ನವರದ್ದು ಈಗ ಚಡ್ಡಿ ಅಲ್ಲ. ಪ್ಯಾಂಟ್ ಬಂದಿದೆ. ಸಿದ್ದರಾಮಯ್ಯ ಈಗ ಅವರ ಚಡ್ಡಿಯನ್ನೇ ಸುಡಬೇಕಷ್ಟೆ' ಎಂದು ವ್ಯಂಗ್ಯವಾಡಿದರು.

ಶಾಸಕ ಹರ್ಷವರ್ಧನ್ ಆಕ್ರೋಶ (ನಂಜನಗೂಡು ವರದಿ): 'ಪರಿಷ್ಕೃತ ಪಠ್ಯದಿಂದ ಸಂವಿಧಾನ ಶಿಲ್ಪಿ ಎಂಬ ಪದವನ್ನು ತೆಗೆದಿರುವುದು ಖಂಡನೀಯ. ಇಂಥದ್ದನ್ನೆಲ್ಲ ನಾವು ಸಹಿಸುವುದಿಲ್ಲ. ರಾಜಿಯಾಗುವ ಪ್ರಶ್ನೆಯೇ ಇಲ್ಲ' ಎಂದು ನಂಜನಗೂಡು ಶಾಸಕ ಬಿ. ಹರ್ಷವರ್ಧನ್ ಹೇಳಿದ್ದಾರೆ.

ಹಳೆಯ ಪಠ್ಯವನ್ನೇ ಮುಂದುವರಿಸುವಂತೆ ಮುಖ್ಯಮಂತ್ರಿ ಬಳಿ ಒತ್ತಾಯಿಸುವುದಾಗಿ ತಿಳಿಸಿದ್ದಾರೆ.

ಪಠ್ಯಪುಸ್ತಕ ಯಾವಾಗ ಕೊಡ್ತೀರಿ: ಸಿ.ಟಿ. ರವಿಗೆ ವಿದ್ಯಾರ್ಥಿಗಳ ಪ್ರಶ್ನೆ

ಹಾಸನ: 'ಶಾಲೆ ಪ್ರಾರಂಭವಾಗಿ ಒಂದು ತಿಂಗಳಾದರೂ ಪಠ್ಯ ಪುಸ್ತಕ ಬಂದಿಲ್ಲ. ಯಾವಾಗ ಕೊಡ್ತೀರಿ?' ಎಂದು ವಿದ್ಯಾರ್ಥಿಗಳು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರನ್ನು ಪ್ರಶ್ನಿಸಿದರು.

ಬೇಲೂರು ರಣಘಟ್ಟ ಯೋಜನೆ ಕಾಮಗಾರಿ ಪ್ರಗತಿ ವೀಕ್ಷಣೆಗೆ ಬಂದಿದ್ದ ರವಿ ಅವರು ಚಿಲ್ಕೂರು ಗೇಟ್ ಬಳಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದಾಗ, ಮನೆ ಕಡೆಗೆ ತೆರಳುತ್ತಿದ್ದ ಇಬ್ಬೀಡು ಶ್ರೀ ಶಿವನಂಜುಂಡೇಶ್ವರ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು, 'ಪಠ್ಯಪುಸ್ತಕಗಳು ವಿತರಣೆಯಾಗಿಲ್ಲ' ಎಂದು ದೂರಿದರು.

'ಸಮಾಜ ವಿಜ್ಞಾನ ಮತ್ತು ಕನ್ನಡ ಪುಸ್ತಕ ಬಂದಿಲ್ಲ, ನಮಗೆ ಪರೀಕ್ಷೆ ಬರೆಯೋದಕ್ಕೆ ಕಷ್ಟ ಆಗುತ್ತೆ' ಎಂದರು.

'ನೀವು ಬುದ್ಧಿವಂತರಿದ್ದೀರಿ, ಪಾಸ್ ಆಗ್ತೀರಿ ಬಿಡಿ. ಪಠ್ಯಪುಸ್ತಕ ಆದಷ್ಟು ಶೀಘ್ರ ಬರಲಿದೆ' ಎಂದು ರವಿ ಹೇಳಿದರು.

'ಮೇಜರ್ ಸಂದೀಪ್ ಪಾಠ ಕೈಬಿಟ್ಟಿದ್ದ ಬರಗೂರು ಸಮಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರಗೂರು ರಾಮಚಂದ್ರಪ್ಪ ನೇತೃತ್ವದ ಈ ಹಿಂದಿನ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿ ಪರಿಷ್ಕರಿಸಿದ ಪಠ್ಯ ಪುಸ್ತಕಗಳಲ್ಲಿ 'ತಪ್ಪು'ಗಳನ್ನು ಎತ್ತಿ ತೋರಿಸಲು ಇದೀಗ ಬಿಜೆಪಿ ಪರ ಗುಂಪು ಮುಂದಾಗಿದೆ!

8ನೇ ತರಗತಿಯ ಕನ್ನಡ ಭಾಷಾ ಪಠ್ಯ ಪುಸ್ತಕದಲ್ಲಿದ್ದ, 2008ರಲ್ಲಿ ಮುಂಬೈ ದಾಳಿ ವೇಳೆ ಉಗ್ರರ ಗುಂಡಿಗೆ ಬಲಿಯಾಗಿದ್ದ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಕುರಿತ ಪಾಠವನ್ನು ಬರಗೂರು ಸಮಿತಿ ಕೈಬಿಟ್ಟಿತ್ತು.

'2008ರಲ್ಲಿ ನಡೆದ ಉಗ್ರದ ದಾಳಿ ಸಂದರ್ಭದಲ್ಲಿ ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ) ನಡೆಸಿದ ಕಾರ್ಯಾಚರಣೆ ಕುರಿತು ಶಿಕ್ಷಕಿ ಮತ್ತು ಕೆಲವು ವಿದ್ಯಾರ್ಥಿಗಳ ನಡುವಿನ ಸಂಭಾಷಣೆ ಹೊಂದಿದ್ದ 'ಕರಾಳ ರಾತ್ರಿ' ಎಂಬ ಪಠ್ಯವಿತ್ತು. ಮೇಜರ್ ಸಂದೀಪ್ ಉನ್ನಿಕೃಷ್ಣನ್ ಹೋರಾಟದ ಮಾಹಿತಿ ಈ ಪಾಠದಲ್ಲಿ ಮಾಹಿತಿ ಇತ್ತು. ಅದನ್ನು ತೆಗೆದು ಹಾಕಲಾಗಿದೆ' ಎಂದು ಸಾಮಾಜಿಕ ಜಾಲ ತಾಣದಲ್ಲಿ ಬಿಜೆಪಿ ಬೆಂಬಲಿಗರು ದೂರಿದ್ದಾರೆ.

'ಕರಾಳ ರಾತ್ರಿ' ಪಾಠದ ಬದಲು 'ಬ್ಲಡ್ ಗ್ರೂಪ್' ಶೀರ್ಷಿಕೆಯ ಪಾಠವನ್ನು ಬರಗೂರು ಸಮಿತಿ ಅಳವಡಿಸಿತ್ತು. ಈ ಹಿಂದಿನ ಸಮಿತಿ ಕನ್ನಡ ದ್ವಿತೀಯ ಭಾಷೆಯ ಪಠ್ಯ ಪುಸ್ತಕದಲ್ಲಿ 'ಬ್ಲಡ್ ಗ್ರೂಪ್' ಎಂಬ ಇಂಗ್ಲಿಷ್ ಪದವನ್ನು ಬಳಸಿತ್ತು' ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರ ವಿರುದ್ಧ ದೂರು

ತಿಪಟೂರು: ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮನೆ ಮುಂದೆ ಪ್ರತಿಭಟಿಸಿದ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ಸದಸ್ಯರ ಮೇಲೆ ಹಲ್ಲೆ ಮಾಡಿದ ಆರೋಪ ಎದುರಿಸುತ್ತಿದ್ದ ಬಿಜೆಪಿ ಕಾರ್ಯಕರ್ತರ ವಿರುದ್ಧ ಸೋಮವಾರ ರಾತ್ರಿ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೈಗಳಿಂದ ಹಲ್ಲೆ, ಪ್ರಾಣ ಬೆದರಿಕೆ, ಗಾಡಿ ಜಖಂ ಮಾಡಿರುವ ಬಗ್ಗೆ ಜಯಸಿಂಹ ಮಾದಿಹಳ್ಳಿ ಮತ್ತು ಇತರ ಬಿಜೆಪಿ ಕಾರ್ಯಕರ್ತರ ವಿರುದ್ಧ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿದ್ಯಾರ್ಥಿಗಳ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ಮಾಡಿದ ಬಗ್ಗೆ ಜೂನ್ 2ರಂದು ನಗರ ಠಾಣೆಗೆ ದೂರು ನೀಡಲಾಗಿತ್ತು. ಆದರೆ, ಪೊಲೀಸರು ಪ್ರಕರಣ ದಾಖಲಿಸಲು ನಿರಾಕರಿಸಿದ್ದರು. ಪೊಲೀಸರ ನಡೆಗೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು.

31	191/1ಬಿ	ಖಾಸಗಿ	ಖುಷ್ಕಿ	4,020
32	191/1ಸಿ2	ಸರಕಾರ	ಖುಷ್ಕಿ	64
33	191/1ಸಿ6	ಖಾಸಗಿ	ತರಿ	100
34	191/2	ಖಾಸಗಿ	ಖುಷ್ಕಿ	2,025
35	204/1	ಖಾಸಗಿ	ತರಿ	2,500
36	204/2	ಖಾಸಗಿ	ತರಿ	3,000
37	21/1	ಖಾಸಗಿ	ತರಿ	1,012
38	21/2	ಸರಕಾರ	ಪೊರಂಬೋಕ್	51
39	21/3	ಖಾಸಗಿ	ತರಿ	1,214
40	21/4	ಖಾಸಗಿ	ಖುಷ್ಕಿ	810
41	218/1ಎ	ಖಾಸಗಿ	ಖುಷ್ಕಿ	5,510
42	218/1ಬಿ	ಖಾಸಗಿ	ಖುಷ್ಕಿ	5,020
43	22/3	ಖಾಸಗಿ	ತರಿ	7,000
44	227/1	ಸರಕಾರ	ಖುಷ್ಕಿ	125
45	227/1ಪಿ	ಖಾಸಗಿ	ಖುಷ್ಕಿ	2,024
46	239/1	ಖಾಸಗಿ	ಖುಷ್ಕಿ	4,047
47	239/2	ಖಾಸಗಿ	ಖುಷ್ಕಿ	2,022
48	239/3	ಖಾಸಗಿ	ಖುಷ್ಕಿ	2,022
49	293/3	ಖಾಸಗಿ	ಖುಷ್ಕಿ	405
50	293/5	ಖಾಸಗಿ	ಖುಷ್ಕಿ	202
51	294/4	ಖಾಸಗಿ	ಖುಷ್ಕಿ	243
52	313/1	ಖಾಸಗಿ	ಖುಷ್ಕಿ	2,428
53	313/13	ಖಾಸಗಿ	ಖುಷ್ಕಿ	526
54	313/2	ಖಾಸಗಿ	ಖುಷ್ಕಿ	587
55	313/3	ಖಾಸಗಿ	ಖುಷ್ಕಿ	324
56	313/4	ಖಾಸಗಿ	ಖುಷ್ಕಿ	526
57	313/ಪಿ	ಖಾಸಗಿ	ಖುಷ್ಕಿ	162
58	357/3ಎ1	ಖಾಸಗಿ	ಖುಷ್ಕಿ	121
59	357/3ಎ1	ಸರಕಾರ	ಖುಷ್ಕಿ	50
60	357/3ಎ3	ಖಾಸಗಿ	ಖುಷ್ಕಿ	445
61	357/3ಬಿ	ಖಾಸಗಿ	ಖುಷ್ಕಿ	1,255
62	358/4ಎ	ಖಾಸಗಿ	ಖುಷ್ಕಿ	600
63	358/4ಬಿ	ಖಾಸಗಿ	ಖುಷ್ಕಿ	800
64	390/1ಎ1	ಖಾಸಗಿ	ಕೃಷಿಯೇತರ	769
65	390/1ಎ2	ಖಾಸಗಿ	ಖುಷ್ಕಿ	405
66	390/1ಬಿ	ಖಾಸಗಿ	ಖುಷ್ಕಿ	607
67	411/2	ಖಾಸಗಿ	ಖುಷ್ಕಿ	810
68	411/3	ಖಾಸಗಿ	ಖುಷ್ಕಿ	2,710
69	429/1	ಖಾಸಗಿ	ಖುಷ್ಕಿ	1,012
70	429/10	ಖಾಸಗಿ	ಖುಷ್ಕಿ	404
71	429/11	ಖಾಸಗಿ	ಖುಷ್ಕಿ	404
72	429/13	ಖಾಸಗಿ	ಖುಷ್ಕಿ	202
73	429/14	ಖಾಸಗಿ	ಖುಷ್ಕಿ	404
74	429/2	ಸರಕಾರ	ಖುಷ್ಕಿ	60
75	429/3	ಖಾಸಗಿ	ಖುಷ್ಕಿ	608
76	429/6	ಖಾಸಗಿ	ಖುಷ್ಕಿ	608
77	429/7	ಖಾಸಗಿ	ಖುಷ್ಕಿ	405
78	429/9	ಖಾಸಗಿ	ಖುಷ್ಕಿ	608
79	443/1	ಖಾಸಗಿ	ಖುಷ್ಕಿ	405
80	443/2	ಖಾಸಗಿ	ಖುಷ್ಕಿ	243
81	469/4	ಖಾಸಗಿ	ಖುಷ್ಕಿ	243
82	480/10	ಖಾಸಗಿ	ಖುಷ್ಕಿ	3,238
83	480/8	ಖಾಸಗಿ	ಖುಷ್ಕಿ	1,214
84	480/9	ಖಾಸಗಿ	ಖುಷ್ಕಿ	1,214
85	534/10	ಖಾಸಗಿ	ಖುಷ್ಕಿ	1,012
86	534/23	ಖಾಸಗಿ	ಖುಷ್ಕಿ	405
87	534/5	ಖಾಸಗಿ	ಖುಷ್ಕಿ	408
88	534/8	ಖಾಸಗಿ	ಖುಷ್ಕಿ	1,012
89	534/9	ಖಾಸಗಿ	ಖುಷ್ಕಿ	408
90	543/1	ಸರಕಾರ	ಖುಷ್ಕಿ	50
91	543/2	ಖಾಸಗಿ	ಖುಷ್ಕಿ	4,047
92	543/3	ಖಾಸಗಿ	ಖುಷ್ಕಿ	2,024
93	543/5	ಖಾಸಗಿ	ಖುಷ್ಕಿ	202
94	543/6	ಖಾಸಗಿ	ಖುಷ್ಕಿ	4,047
95	543/7	ಖಾಸಗಿ	ಖುಷ್ಕಿ	2,024
96	561	ಖಾಸಗಿ	ಖುಷ್ಕಿ	6,094
97	562/1ಪಿ	ಸರಕಾರ	ಖುಷ್ಕಿ	50
98	562/1ಪಿ	ಖಾಸಗಿ	ಖುಷ್ಕಿ	407
99	562/2	ಖಾಸಗಿ	ಖುಷ್ಕಿ	4,047
100	562/3	ಖಾಸಗಿ	ಖುಷ್ಕಿ	404
101	562/4	ಖಾಸಗಿ	ಖುಷ್ಕಿ	445
102	562/6	ಖಾಸಗಿ	ಖುಷ್ಕಿ	364
103	562/7	ಖಾಸಗಿ	ಖುಷ್ಕಿ	202
104	622/3	ಖಾಸಗಿ	ಖುಷ್ಕಿ	4,500
105	628/1	ಖಾಸಗಿ	ಖುಷ್ಕಿ	2,024
106	628/2	ಸಾಮಾನ್ಯ	ಖುಷ್ಕಿ	6,070
107	628/4	ಖಾಸಗಿ	ಖುಷ್ಕಿ	2,024
108	697/1	ಖಾಸಗಿ	ಖುಷ್ಕಿ	1,012
109	697/2	ಖಾಸಗಿ	ಖುಷ್ಕಿ	1,012
110	8/1	ಖಾಸಗಿ	ತರಿ	2,307
111	8/16	ಖಾಸಗಿ	ಖುಷ್ಕಿ	2,014
112	8/17	ಖಾಸಗಿ	ತರಿ	1,902
113	8/18	ಖಾಸಗಿ	ಖುಷ್ಕಿ	2,873
114	8/5	ಖಾಸಗಿ	ಖುಷ್ಕಿ	2,104
115	8/8	ಖಾಸಗಿ	ತರಿ	5,666
			ಒಟ್ಟು	246,196.93

[ಎಫ್. ನಂ 13011/1/2013//ಪಿಐಯು–ಮಂಗಳೂರು/ಶಿವಮೊಗ್ಗ–ಮಂಗಳೂರ ಸೆಕ್ಷನ್/3A]
ರಾಜೇಶ ಗುಪ್ತಾ, ನಿರ್ದೇಶಕರು

ಮೂಸೆವಾಲಾ ಕುಟುಂಬಸ್ಥರನ್ನು ಭೇಟಿಯಾದ ರಾಹುಲ್ ಗಾಂಧಿ

ಮಾನ್ಸಾ (ಪಿಟಿಐ): ಪಂಜಾಬ್‌ನಲ್ಲಿ ಮೇ 29ರಂದು ನಡೆದ ಗುಂಡಿನ ದಾಳಿಯಲ್ಲಿ ಹತ್ಯೆಗೀಡಾದ ಪಂಜಾಬಿ ಗಾಯಕ, ಕಾಂಗ್ರೆಸ್ ಮುಖಂಡ ಸಿಧು ಮೂಸೆವಾಲಾ ಅವರ ಕುಟುಂಬಸ್ಥರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಅವರ ಗ್ರಾಮ ಮೂಸಾದಲ್ಲಿ ಭೇಟಿಯಾದರು. ಸಿಧು ಕುಟುಂಬದೊಂದಿಗೆ ಸುಮಾರು 50 ನಿಮಿಷ ರಾಹುಲ್ ಕಾಲ ಕಳೆದರು.

ಮೂಸೆವಾಲಾ ಅವರ ನಿವಾಸದಿಂದ ನಿರ್ಗಮಿಸಿದ ಬಳಿಕ ಗಾಂಧಿ ಅವರು, ಪಂಜಾಬ್‌ನ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಪಂಜಾಬ್‌ನಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡುವುದು ಎಎಪಿ ಸರ್ಕಾರದ ಸಾಮರ್ಥ್ಯವನ್ನು ಮೀರಿದ್ದು' ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಕಾಂಗ್ರೆಸ್ ನಾಯಕ ಸಿಧು ಮೂಸೆವಾಲಾ ಅವರ ಪೋಷಕರು ಅನುಭವಿಸುತ್ತಿರುವ ದುಃಖವನ್ನು ವಿವರಿಸಲು ಕಷ್ಟವಾಗುತ್ತದೆ. ಅವರಿಗೆ ನ್ಯಾಯ ದೊರಕಿಸಿಕೊಡುವುದು ನಮ್ಮ ಕರ್ತವ್ಯವಾಗಿದ್ದು, ನಾವು ಅದನ್ನು ಮಾಡುತ್ತೇವೆ' ಎಂದಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಸ್‌ಡಬ್ಲ್ಯೂಡಿ–ದಾಸರಹಳ್ಳಿ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–560002
ಸಂ: ಕಾಪಾಅ/ಎಸ್‌ಡಬ್ಲ್ಯೂಡಿ/ದಾಹ–ವ/ಟೆಂಡರ್/01/2022–23 ದಿನಾಂಕ: 07.06.2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ) (ಕರೆ–2)
ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ–ದಾಸರಹಳ್ಳಿ ವಲಯ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1	ದಾಸರಹಳ್ಳಿ ವಲಯದಲ್ಲಿ ಮಳೆನೀರಿನ ಚರಂಡಿಗಳ ಭೇದ್ಯವಾಗುವಂತಹ ಉದ್ದಕ್ಕೆ ಮಣ್ಣಿನಿಂದ ಕೂಡಿದ ಚರಂಡಿಗಳ ತೋಡುವಿಕೆಗೆ ವಿವರವಾದ ಅಂದಾಜು ಪಟ್ಟಿಯನ್ನು ಒದಗಿಸುವುದು.	58.06	1.16

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **15.06.2022ರ ಸಂಜೆ 4.00 ಗಂಟೆಯವರೆಗೆ** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **17.06.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–22371090/22340060/22340948 ನ್ನು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ–ದಾಸರಹಳ್ಳಿ ವಲಯ.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಬಿನಿ ನಾಲೆಗಳ ವಿಭಾಗ, ನಂಜನಗೂಡು, ಮೈಸೂರು ಜಿಲ್ಲೆ
ದೂರವಾಣಿ/ ಫ್ಯಾಕ್ಸ್ ಸಂಖ್ಯೆ 08221–226261 email: kcdngd@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2022–23
ದಿನಾಂಕ: 06–06–2022
ರೂ. 280.00 ಲಕ್ಷದ, ಕೆರೆಗಳಿಗೆ ನೀರು ತುಂಬಿಸುವ ಒಂದು ಕಾಮಗಾರಿಗೆ ಐಟಂವಾರು ಟೆಂಡರ್ ಅನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂಟ್‌ಮೆಂಟ್‌ನಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತದಲ್ಲಿ ಕಡ್ಡಾಯವಾಗಿ ಹೆಸರು ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.
ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ ಮೊತ್ತ ಹಾಗೂ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ್ ಅನ್ನು ತೆರೆಯುವ ದಿನಾಂಕ ಹಾಗೂ ಇತರೆ ವಿವರಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: www.eproc.karnataka.gov.in ರಲ್ಲಿ ಪಡೆಯಬಹುದು. ಆರ್ಥಿಕ ಬಿಡ್ ಅನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.
ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ಕಬಿನಿ ನಾಲೆಗಳ ವಿಭಾಗ, ನಂಜನಗೂಡು

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
No: EE/RWSS/Dvn/SMG/JE/JJM/E-Proc/2022-23/501 Date : 06.06.2022
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಇಂಡೆಂಟ್ ಸಂಖ್ಯೆ: (1) 41068 (2) 41066 (3) 41055 (4) 41096 (5) 41078 (6) 41074 (7) 41067 (8) 40998 (9) 41079 (10) 41062 (11) 41061 (12) 41063 (13) 41065 (14) 41059 (15) 41094 (16) 41070,
ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https://www.eproc.karnataka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ ಬಿಡ್ದುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.
ಟೆಂಡರ್‌ನ ಕೆಲವು ಷರತ್ತುಗಳು :
(1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 21.06.2022ರ ಸಂಜೆ 5.30. (2) ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : 23.06.2022ರ ಬೆಳಿಗ್ಗೆ 11.30. (3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 23.06.2022ರ ಬೆಳಿಗ್ಗೆ 11.30. (4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : 25.06.2022ರ ಬೆಳಿಗ್ಗೆ 11.30. (5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : ಏಕ ಲಕೋಟೆ 3 ತಿಂಗಳು (90 ದಿನಗಳು) ದ್ವಿ ಲಕೋಟೆ 3 ತಿಂಗಳು (90 ದಿನಗಳು).
ಸಹಿ/–
ಕಾರ್ಯಪಾಲಕ ಇಂಜಿನಿಯರ್,
ವಾ.ಸಾ.ಸಂ.ಇ./ಶಿ/ನಂ.25–06/ಝೀಂಕಾರ್/2022–23 ಗ್ರಾ. ಕು. ನೀ & ನೈ ವಿಭಾಗ, ಶಿವಮೊಗ್ಗ

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91–8431186388, ಇ–ಮೇಲ್: sabvmcri@gmail.com
ಸಂ: ಎಸ್‌ಎಬಿವಿಎಂಸಿಆರ್‌ಐ/ಇ–ಟೆಂಡರ್/LIB/04/2022–23 ದಿನಾಂಕ: 07.06.2022
ಟೆಂಡರ್ ಅಧಿಸೂಚನೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಗ್ರಂಥಾಲಯಕ್ಕೆ ಅವಶ್ಯವಿರುವ ವೈದ್ಯಕೀಯ ಪುಸ್ತಕಗಳು ಮತ್ತು ಜರ್ನಲ್‌ಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಅರ್ಹ ಆಸಕ್ತ ಸಂಸ್ಥೆಗಳಿಂದ ಮೊಹರಾದ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇ.ಎಂ.ಡಿ. ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೊಸೆಸಿಂಗ್ ಮೊತ್ತ ರೂ. 5,000/–ಗಳ ಡಿ.ಡಿ.ಯನ್ನು ನಿರ್ದೇಶಕರು ಹಾಗೂ ಡೀನ್, ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು (Acknowledgement) ಈ ಟೆಂಡರ್‌ನಲ್ಲಿ ಲಗತ್ತಿಸುವುದು.
ಆಸಕ್ತಿಯುಳ್ಳ ಟೆಂಡರ್‌ದಾರರು e-procurement portal ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣೆಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: sabvmcri@gmail.com & ದೂರವಾಣಿ ಸಂಖ್ಯೆ: +91–8431188388 ನ್ನು ಸಂಪರ್ಕಿಸಬಹುದು.
1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ: 10.06.2022. 2) ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 14.06.2022 ರ ಸಂಜೆ 04.00 ಗಂಟೆ. 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 24.06.2022 ರ ಸಂಜೆ 04.00 ಗಂಟೆ. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೇ ಲಕೋಟೆ): 27.06.2022 ರ ಬೆಳಿಗ್ಗೆ 11.30 ಗಂಟೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ನಿರ್ದೇಶಕರು ಹಾಗೂ ಡೀನ್
ವಾ.ಸಾ.ಸಂ.ಇ/ವಾಪ್ರ/806/ಆಕಾರ್/22–23 ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೇಳಿಕೆ ಖಂಡಿಸಿದ ದೇಶಗಳ ಸಂಖ್ಯೆ ಹೆಚ್ಚಳ: ಎಲ್ಲ ಧರ್ಮಗಳ ಬಗ್ಗೆ ಗೌರವ ಎಂಬ ನಿಲುವು ಪುನರುಚ್ಚರಿಸಿದ ಭಾರತ

ಪ್ರವಾದಿಗೆ ಅವಮಾನ: ಹೆಚ್ಚಿದ ಆಕ್ಷೇಪ

ದುಬೈ (ಪಿಟಿಐ): ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಮತ್ತು ದೆಹಲಿ ಬಿಜೆಪಿ ಘಟಕದ ಮಾಧ್ಯಮ ವಿಭಾಗದ ಮುಖ್ಯಸ್ಥ ನವೀನ್ ಕುಮಾರ್ ಜಿಂದಾಲ್ ಅವರು ಪ್ರವಾದಿ ಮಹಮ್ಮದ್ ಅವರನ್ನು ಅವಮಾನಿಸಿ ನೀಡಿದ್ದ ಹೇಳಿಕೆಗಳನ್ನು ಇರಾಕ್ ಮತ್ತು ಲಿಬಿಯಾ ಕೂಡ ಮಂಗಳವಾರ ಖಂಡಿಸಿವೆ. ವಿವಾದಾತ್ಮಕ ಹೇಳಿಕೆ ಮತ್ತು ಟ್ವೀಟ್ ಬಗ್ಗೆ ಇರಾಕ್‌ನ ಸಂಸದೀಯ ಸಮಿತಿಯು ಹೇಳಿಕೆಯನ್ನು ಬಿಡುಗಡೆ ಮಾಡಿದೆ.

'ಇರಾಕ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಈ ಹೇಳಿಕೆಗೆ ಪ್ರತಿಕ್ರಿಯೆ ನೀಡಿದೆ. ಈ ಅಭಿಪ್ರಾಯಗಳು ಯಾವುದೇ ರೀತಿಯಲ್ಲಿಯೂ ಭಾರತ ಸರ್ಕಾರದ ನಿಲುವು ಅಲ್ಲ ಎಂದು ಭಾರತದ ರಾಯಭಾರ ಕಚೇರಿ ಹೇಳಿದೆ.

'ಈ ನಿಂದನೆಗಳು, ದ್ವೇಷಪೂರಿತ ಮತ್ತು ಅವಮಾನಕರ ನಡವಳಿಕೆಗಳನ್ನು ತಡೆಯದೇ ಇದ್ದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಶಾಂತಿಯುತ ಸಹಬಾಳ್ವೆ ಮೇಲೆ ಊಹಾತೀತ ಪರಿಣಾಮಗಳಾಗಲು ಇದು ಕಾರಣವಾಗಬಹುದು. ಜನರ ನಡುವೆ ಸಂಘರ್ಷ ಮತ್ತು ಪ್ರಕ್ಷುಬ್ಧತೆಯನ್ನು ಹೆಚ್ಚಿಸಬಹುದು' ಎಂದು ಇರಾಕ್ ಹೇಳಿಕೆಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ ಎಂದು ಅಲ್ಲಿನ ಸುದ್ದಿ ಸಂಸ್ಥೆ ಐಎನ್‌ಎ ವರದಿ ಮಾಡಿದೆ.

'ನಮ್ಮ ನಾಗರಿಕ ಪರಂಪರೆ ಮತ್ತು ವೈವಿಧ್ಯದಲ್ಲಿ ಏಕತೆಯ ಸಾಂಸ್ಕೃತಿಕ ಪರಂಪರೆಗೆ ಅನುಗುಣವಾಗಿ ಭಾರತ ಸರ್ಕಾರವು ಎಲ್ಲ ಧರ್ಮಗಳಿಗೂ ಅತ್ಯಂತ ಹೆಚ್ಚಿನ ಗೌರವ ಕೊಡುತ್ತದೆ. ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ' ಎಂದು ಭಾರತದ ರಾಯಭಾರ ಕಚೇರಿಯ ಹೇಳಿಕೆಯು ತಿಳಿಸಿದೆ.

'ಭಾರತ–ಇರಾಕ್ ಸಂಬಂಧದ ವಿರುದ್ಧ ಇರುವ ಸ್ಥಾಪಿತ ಹಿತಾಸಕ್ತಿಗಳು ಅವಹೇಳನಕಾರಿ ಹೇಳಿಕೆಯನ್ನು ಬಳಸಿಕೊಂಡು ಜನರನ್ನು ಎತ್ತಿಕಟ್ಟಲು ಯತ್ನಿಸುತ್ತಿವೆ. ನಮ್ಮ ದ್ವಿಪಕ್ಷೀಯ ಸಂಬಂಧಗಳ ಬಲವನ್ನು ಕುಗ್ಗಿಸಲು ಈ ಶಕ್ತಿಗಳು ಯತ್ನಿಸುತ್ತಿವೆ' ಎಂದೂ ಭಾರತದ ರಾಯಭಾರ ಕಚೇರಿ ಹೇಳಿದೆ. ಕುವೈತ್ ಮತ್ತು ಕತಾರ್‌ನಲ್ಲಿರುವ ಭಾರತದ ರಾಯಭಾರ ಕಚೇರಿಗಳು ಕೂಡ ಭಾನುವಾರ ಇದೇ ರೀತಿಯ ಹೇಳಿಕೆಯನ್ನು ನೀಡಿದ್ದವು.

ಲಿಬಿಯಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕೂಡ ಅವಹೇಳನಕಾರಿ ಹೇಳಿಕೆಯನ್ನು ಬಲವಾಗಿ ಖಂಡಿಸಿದೆ. ಸಹಿಷ್ಣುತೆ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು ಮತ್ತು ಹಿಂಸೆ ಹಾಗೂ ದ್ವೇಷದ ಮಾತನ್ನು ತಿರಸ್ಕರಿಸಬೇಕು ಎಂದು ಲಿಬಿಯಾ ಹೇಳಿದೆ.

ಈಜಿಪ್ಟ್ ಕೇಂದ್ರ ಸ್ಥಾನವಾಗಿರುವ ಅರಬ್ ಸಂಸತ್ತು ಕೂಡ ಹೇಳಿಕೆಯನ್ನು ವಿರೋಧಿಸಿದೆ. 'ಸಹಿಷ್ಣುತೆ, ಅಂತರ ಧರ್ಮೀಯ ಸಂವಾದದ ತತ್ವಗಳಿಗೆ ಈ ಹೇಳಿಕೆಗಳು ವಿರುದ್ಧವಾಗಿವೆ ಮತ್ತು ದ್ವೇಷಕ್ಕೆ ಕಾರಣವಾಗುತ್ತವೆ' ಎಂದು ಅರಬ್ ಸಂಸತ್ ಹೇಳಿದೆ.

ಇಂಡೋನೇಷ್ಯಾ, ಸೌದಿ ಅರೇಬಿಯಾ, ಮಾಲ್ಡೀವ್ಸ್, ಅರಬ್ ಸಂಯುಕ್ತ ಸಂಸ್ಥಾನ, ಜೋರ್ಡನ್, ಬಹರೈನ್, ಒಮಾನ್ ಮತ್ತು ಅಫ್ಗಾನಿಸ್ತಾನ ಪ್ರವಾದಿ ವಿರುದ್ಧದ ಹೇಳಿಕೆಗಳನ್ನು ಸೋಮವಾರ ಖಂಡಿಸಿದ್ದವು. ಕತಾರ್, ಇರಾನ್ ಮತ್ತು ಕುವೈತ್ ಭಾನುವಾರವೇ ಖಂಡನಾ ಹೇಳಿಕೆ ನೀಡಿದ್ದವು.

ಭಾರತದ ರಾಯಭಾರಿಯನ್ನು ಕರೆಸಿಕೊಂಡಿರುವ ಇಂಡೋನೇಷ್ಯಾ ಮತ್ತು ಮಲೇಷ್ಯಾ, ಹೇಳಿಕೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿವೆ. 'ಸ್ವೀಕಾರಾರ್ಹವಲ್ಲದ ಅವಹೇಳನಕಾರಿ ಹೇಳಿಕೆಗಳನ್ನು ಖಂಡಿಸಲಾಗುವುದು' ಎಂದು ಇಂಡೋನೇಷ್ಯಾ ವಿದೇಶಾಂಗ ಸಚಿವಾಲಯವು ಟ್ವೀಟ್ ಮಾಡಿದೆ.

ನೂಪುರ್ ಹೇಳಿಕೆಯ ವಿರುದ್ಧ ನಡೆದ ಪ್ರತಿಭಟನೆಯು ಹಿಂಸೆಗೆ ತಿರುಗಿದ್ದ ಕಾನ್ಪುರದಲ್ಲಿ ಮಂಗಳವಾರ ಅಂಗಡಿಗಳು ತೆರೆದವು. ನಗರದಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು —ಪಿಟಿಐ ಚಿತ್ರ

ಸರ್ಕಾರದ ಮೇಲೆ ಪರಿಣಾಮವಿಲ್ಲ: ಸಚಿವ ಗೋಯಲ್

ಬಿಜೆಪಿ ವಕ್ತಾರರಾಗಿದ್ದ ನೂಪುರ್ ಶರ್ಮಾ ಅವರು ಸರ್ಕಾರದ ಭಾಗವಲ್ಲ, ಹಾಗಾಗಿ ಅವರ ಹೇಳಿಕೆಯು ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ಎನ್‌ಡಿಎ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ನೂಪುರ್ ಅವರ ಹೇಳಿಕೆಗೆ ಕಟುವಾದ ಪ್ರತಿಕ್ರಿಯೆ ನೀಡಿರುವ ಗಲ್ಫ್ ದೇಶಗಳ ಜತೆಗಿನ ಉತ್ತಮ ಸಂಬಂಧ ಮುಂದುವರಿಯಲಿದೆ ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ಮಂಗಳವಾರ ಹೇಳಿದ್ದಾರೆ.

'ವಿದೇಶಾಂಗ ಸಚಿವಾಲಯವು ಈ ಹೇಳಿಕೆಯ ಬಗ್ಗೆ ಸ್ಪಷ್ಟೀಕರಣ ನೀಡಿದೆ. ಬಿಜೆಪಿ ಅಗತ್ಯ ಕ್ರಮಗಳನ್ನು ಕೈಗೊಂಡಿದೆ' ಎಂದೂ ಅವರು ಹೇಳಿದ್ದಾರೆ.

ಗಲ್ಫ್ ದೇಶಗಳಲ್ಲಿ ಭಾರತದ ಉತ್ಪನ್ನಗಳ ನಿಷೇಧದ ಬಗ್ಗೆ ತಮಗೇನೂ ತಿಳಿದಿಲ್ಲ ಎಂದು ಪೀಯೂಷ್ ಅವರು ಹೇಳಿದ್ದಾರೆ.

'ಇಂತಹ ಹೇಳಿಕೆಗಳನ್ನು ನೀಡಬಾರದು ಎಂದಷ್ಟೇ ಅವರು (ಗಲ್ಫ್ ದೇಶಗಳು) ಹೇಳಿದ್ದಾರೆ. ಅದಕ್ಕೆ ಅನುಗುಣವಾಗಿ, ಹೇಳಿಕೆ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಗಲ್ಫ್ ದೇಶಗಳಲ್ಲಿ ಇರುವ ಎಲ್ಲ ಭಾರತೀಯರು ಸುರಕ್ಷಿತವಾಗಿದ್ದಾರೆ. ಅದರ ಬಗ್ಗೆ ಚಿಂತೆ ಬೇಡ' ಎಂದು ಗೋಯಲ್ ತಿಳಿಸಿದ್ದಾರೆ.

ಎಚ್ಚರದಿಂದ ಮಾತನಾಡಿ: ಪದಾಧಿಕಾರಿಗಳಿಗೆ ಬಿಜೆಪಿ ಸೂಚನೆ

ಧರ್ಮದ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವಾಗ ಅತೀವ ಎಚ್ಚರ ವಹಿಸಬೇಕು ಎಂದು ಮುಖಂಡರಿಗೆ ಬಿಜೆಪಿ ಸೂಚನೆ ಕೊಟ್ಟಿದೆ.

ಸುದ್ದಿವಾಹಿನಿಗಳ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಗುರುತಿಸಲಾಗಿರುವ 30ಕ್ಕೂ ಹೆಚ್ಚು ಪದಾಧಿಕಾರಿಗಳು ಹಾಗೂ ಕೇಂದ್ರದ ಕೆಲವು ಸಚಿವರಿಗೆ ಮೌಖಿಕವಾಗಿ ಈ ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಯಾವುದೇ ಧರ್ಮದ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಪದಾಧಿಕಾರಿಗಳು ಮಾತನಾಡುವುದನ್ನು ನಾವು ಬಯಸುವುದಿಲ್ಲ. ಪಕ್ಷದ ಸಿದ್ಧಾಂತಗಳನ್ನು ಸುಸಂಸ್ಕೃತವಾದ ರೀತಿಯಲ್ಲಿ ವಿವರಿಸಬೇಕು' ಎಂದು ಬಿಜೆಪಿಯ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ.

'ಧಾರ್ಮಿಕವಾಗಿ ಸೂಕ್ಷ್ಮವಾದ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ನಿಷೇಧ ಇಲ್ಲ. ಆದರೆ, ಯಾವುದೇ ಧರ್ಮದ ಮೂಲಭೂತ ಅಂಶಗಳಿಗೆ ಅವಮಾನ ಆಗದಂತೆ ನೋಡಿಕೊಳ್ಳಬೇಕು' ಎಂದು ಬಿಜೆಪಿ ವಕ್ತಾರ ಗೋಪಾಲಕೃಷ್ಣ ಅಗರ್‌ವಾಲ್ ಹೇಳಿದ್ದಾರೆ.

ನೂಪುರ್‌ಗೆ ನೋಟಿಸ್

- ಹೇಳಿಕೆ ದಾಖಲಿಸಲು ಇದೇ 22ರಂದು ಹಾಜರಾಗುವಂತೆ ನೂಪುರ್ ಶರ್ಮಾ ಅವರಿಗೆ ಮಹಾರಾಷ್ಟ್ರ ಪೊಲೀಸರು ನೋಟಿಸ್ ನೀಡಿದ್ದಾರೆ. ನೂಪುರ್ ವಿರುದ್ಧ ಠಾಣೆ ಜಿಲ್ಲೆಯಲ್ಲಿ ಎಫ್‌ಐಆರ್ ದಾಖಲಾಗಿದೆ
- ನೂಪುರ್ ಅವರಿಗೆ ದೆಹಲಿ ಪೊಲೀಸರು ಭದ್ರತೆ ಒದಗಿಸಿದ್ದಾರೆ. ಅವರಿಗೆ ಬೆದರಿಕೆ ಕರೆಗಳು ಬಂದ ಕಾರಣ ಭದ್ರತೆ ನೀಡಲಾಗಿದೆ. 'ನೂಪುರ್ ಮತ್ತು ಅವರ ಕುಟುಂಬಕ್ಕೆ ಕೂಡ ಭದ್ರತೆ ಒದಗಿಸಲಾಗಿದೆ
- ತಮಗೆ, ತಮ್ಮ ಕುಟುಂಬಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಜೀವ ಬೆದರಿಕೆ ಬರುತ್ತಿದೆ ಎಂದು ನವೀನ್ ಕುಮಾರ್ ಜಿಂದಾಲ್ ಹೇಳಿದ್ದಾರೆ

ನೆದರ್‌ಲೆಂಡ್ ಸಂಸದನ ಬೆಂಬಲ

ನೆದರ್‌ಲೆಂಡ್‌ನ ಸಂಸದ ಗೀರ್ಟ್ ವೈಲ್ಡರ್ಸ್ ಅವರು ನೂಪುರ್ ಬೆಂಬಲಕ್ಕೆ ನಿಂತಿದ್ದಾರೆ. 'ತುಷ್ಟೀಕರಣ ಯಾವತ್ತೂ ಕೆಲಸ ಮಾಡುವುದಿಲ್ಲ. ಇದು ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸುತ್ತದೆ. ಭಾರತದ ಗೆಳೆಯರೇ, ಮುಸ್ಲಿಂ ದೇಶಗಳ ಬೆದರಿಕೆಗೆ ಮಣಿಯಬೇಡಿ. ನಿಮ್ಮ ರಾಜಕಾರಣಿ ನೂಪುರ್ ಶರ್ಮಾ ಅವರನ್ನು ಬಲವಾಗಿ ಸಮರ್ಥಿಸಿಕೊಳ್ಳಿ ಮತ್ತು ಅವರ ಬಗ್ಗೆ ಹೆಮ್ಮೆಪಡಿ' ಎಂದು ಅವರು ಸರಣಿ ಟ್ವೀಟ್‌ಗಳಲ್ಲಿ ಹೇಳಿದ್ದಾರೆ.

ಮೇಕೆದಾಟು ಡಿಪಿಆರ್ ಚರ್ಚಿಸದಂತೆ ನಿರ್ದೇಶನ ಕೋರಿ 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಮೇಕೆದಾಟು ಬಳಿ ಅಣೆಕಟ್ಟು ಕುರಿತು ಕರ್ನಾಟಕ ಸರ್ಕಾರ ರಚಿಸಿರುವ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಚರ್ಚೆಗೆ ತೆಗೆದುಕೊಳ್ಳದಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ (ಸಿಡಬ್ಲ್ಯುಎಂಎ) ನಿರ್ದೇಶನ ನೀಡಬೇಕು ಎಂದು ಕೋರಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ವಿವಾದಿತ ಯೋಜನೆಗಳಿಗೆ ಸಂಬಂಧಿಸಿದ ಚರ್ಚೆಯನ್ನು ಪ್ರಾಧಿಕಾರವು ಈ ಹಿಂದೆಯೂ ಕೈಬಿಟ್ಟಿದೆ. ಪ್ರಾಧಿಕಾರಕ್ಕೆ ಈ ವಿಷಯ ಚರ್ಚಿಸುವ ಯಾವುದೇ ಅಧಿಕಾರವಿಲ್ಲ ಎಂದು ತಮಿಳುನಾಡು ಸರ್ಕಾರ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಇದೇ ತಿಂಗಳ 17ರಂದು ನಡೆಯುವ 16ನೇ ಸಭೆಯ ಕಾರ್ಯಸೂಚಿಗೆ ಮೇಕೆದಾಟು ಅಣೆಕಟ್ಟು ಕುರಿತು ಡಿಪಿಆರ್ ಚರ್ಚೆ ವಿಷಯವನ್ನು ಪ್ರಾಧಿಕಾರ ಸೇರ್ಪಡೆಗೊಳಿಸಿದ ಹಿಂದೆಯೇ ತಮಿಳುನಾಡು 'ಸುಪ್ರೀಂ' ಮೆಟ್ಟಿಲೇರಿದೆ.

ಈ ಕುರಿತ ಹೇಳಿಕೆಯಲ್ಲಿ ರಾಜ್ಯದ ಜಲಸಂಪನ್ಮೂಲ ಖಾತೆ ಸಚಿವ ದುರೈ ಮುರುಗನ್, ಅಣೆಕಟ್ಟು ನಿರ್ಮಾಣಕ್ಕೆ ಅನುಮತಿ ನೀಡಬಾರದು ಎಂದು ರಾಜ್ಯ ಈಗಾಗಲೇ ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿದೆ ಎಂದರು.

ಅಣೆಕಟ್ಟು ಯೋಜನೆಗೆ ಕರ್ನಾಟಕ ಸರ್ಕಾರ ₹ 1,000 ಕೋಟಿ ಮಂಜೂರು ಮಾಡಿದ ಹಿಂದೆಯೇ, ತಮಿಳುನಾಡು ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು ಎಂದೂ ತಿಳಿಸಿದ್ದಾರೆ.

ಮೂಸೆವಾಲಾ ಹತ್ಯೆ: 8 ಮಂದಿ ಬಂಧನ

ಚಂಡೀಗಡ (ಪಿಟಿಐ): ಪಂಜಾಬಿ ಗಾಯಕ ಸಿಧು ಮೂಸೆವಾಲಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿ 8 ಮಂದಿಯನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಪೊಲೀಸರು ತಿಳಿಸಿದ್ದಾರೆ.

ಗಾಯಕನ ಮೇಲೆ ಗುಂಡಿನ ದಾಳಿ ನಡೆಸಿದವರಿಗೆ ರಕ್ಷಣೆ, ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಣೆ ಮತ್ತು ಸರಕು ಸಹಕಾರ ನೀಡಿದ ಆರೋಪದ ಮೇರೆಗೆ ಈ ಆರೋಪಿಗಳನ್ನು ಬಂಧಿಸಲಾಗಿದೆ. ಅಲ್ಲದೆ, ಗಾಯಕನ ಮೇಲೆ ಗುಂಡಿನ ದಾಳಿ ನಡೆಸಿದ ನಾಲ್ವರನ್ನು ಗುರುತಿಸಲಾಗಿದೆ ಎಂದು ಮಂಗಳವಾರ ಪೊಲೀಸರು ಹೇಳಿದ್ದಾರೆ.

ಪಂಜಾಬ್‌ನ ಮಾನ್ಸ ಜಿಲ್ಲೆಯಲ್ಲಿ ಮೇ 29ರಂದು ಮೂಸೆವಾಲಾ ಅವರನ್ನು ಅಪರಿಚಿತ ದುಷ್ಕರ್ಮಿಗಳು ಗುಂಡಿಟ್ಟು ಕೊಲೆ ಮಾಡಿದ್ದರು.

ಟ್ರ್ಯಾಕ್ಟರ್ ಪರೇಡ್... ವೈಎಸ್‌ಆರ್ ಯಂತ್ರ ಸೇವಾ ಯೋಜನೆಯ ಭಾಗವಾಗಿ ಮಂಗಳವಾರ ಆಂಧ್ರಪ್ರದೇಶದ ಗುಂಟೂರಿನಲ್ಲಿ ಸಾವಿರಾರು ರೈತರಿಗೆ ಟ್ರ್ಯಾಕ್ಟರ್‌ಗಳನ್ನು ವಿತರಿಸಲಾಗಿದ್ದು, ರೈತರು ಟ್ರ್ಯಾಕ್ಟರ್‌ಗಳ ಮೆರವಣಿಗೆ ನಡೆಸಿದರು– ಪಿಟಿಐ ಚಿತ್ರ

ಪರಿಸರ ಸೂಚ್ಯಂಕ: ಭಾರತಕ್ಕೆ ಕೊನೇ ಸ್ಥಾನ

ನವದೆಹಲಿ (ಪಿಟಿಐ): ಈ ಸಾಲಿನ ಪರಿಸರ ಕಾರ್ಯದಕ್ಷತೆ ಸೂಚ್ಯಂಕದಲ್ಲಿ (ಇಪಿಐ) ಭಾರತವು ಅತ್ಯಂತ ಕಡಿಮೆ ಅಂಕಗಳನ್ನು ಪಡೆದು, ಕೊನೆಯ ಸ್ಥಾನದಲ್ಲಿದೆ ಎಂದು ಅಮೆರಿಕದ ಅಧ್ಯಯನ ಸಂಸ್ಥೆಗಳು ಹೇಳಿವೆ. ಅತಿಹೆಚ್ಚು ಅಂಕ ಪಡೆದಿರುವ ಡೆನ್ಮಾರ್ಕ್ ಮೊದಲ ಸ್ಥಾನದಲ್ಲಿದೆ.

ಕೊಲಂಬಿಯಾ ವಿಶ್ವವಿದ್ಯಾಲಯದ ಪರಿಸರ ಕಾನೂನು ಮತ್ತು ನೀತಿ ಅಧ್ಯಯನ ಕೇಂದ್ರ ಮತ್ತು ಭೂವಿಜ್ಞಾನ ಮಾಹಿತಿ ಜಾಲ ಕೇಂದ್ರವು ನಡೆಸಿದ ಅಧ್ಯಯನದ ಆಧಾರದಲ್ಲಿ ಈ ಸೂಚ್ಯಂಕ ನೀಡಲಾಗಿದೆ. ಒಟ್ಟು 180 ದೇಶಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಪ್ರತಿ ದೇಶಗಳ ಸುಸ್ಥಿರ ಅಭಿವೃದ್ಧಿ ಮಾದರಿಗಳು ಮತ್ತು ಹಸಿರುಮನೆ ಅನಿಲ ಹೊರಸೂಸುವಿಕೆ ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಿ ಈ ಸೂಚ್ಯಂಕ ಸಿದ್ಧಪಡಿಸಲಾಗಿದೆ.

ಮುಖ್ಯಾಂಶಗಳು
- ಡೆನ್ಮಾರ್ಕ್ ಮೊದಲ ಸ್ಥಾನ
- ಪಾಕಿಸ್ತಾನಕ್ಕೆ 177ನೇ ಸ್ಥಾನ
- ಬಾಂಗ್ಲಾಕ್ಕೆ 178ನೇ ಸ್ಥಾನ
- 180 ದೇಶಗಳನ್ನು ಒಳಗೊಂಡ ಅಧ್ಯಯನ

ಒಟ್ಟು ಅಂಕಗಳಲ್ಲಿ 18.9 ಅಂಕಗಳನ್ನು ಪಡೆದ ಭಾರತವು 180ನೇ ಸ್ಥಾನದಲ್ಲಿದೆ. 'ಭಾರತವು ಮಾಲಿನ್ಯ ನಿಯಂತ್ರಣಕ್ಕಿಂತ, ಆರ್ಥಿಕ ಅಭಿವೃದ್ಧಿಗೆ ಆದ್ಯತೆ ನೀಡಿದೆ. ಹೀಗಾಗಿ ಅತ್ಯಂತ ಕಡಿಮೆ ಅಂಕಗಳನ್ನು ಪಡೆದಿದೆ' ಎಂದು ಸೂಚ್ಯಂಕ ವರದಿಯಲ್ಲಿ ವಿವರಿಸಲಾಗಿದೆ. 20.1 ಅಂಕ ಪಡೆದಿರುವ ವಿಯೆಟ್ನಾಂ, 23.1 ಅಂಕ ಪಡೆದಿರುವ ಬಾಂಗ್ಲಾದೇಶ ಮತ್ತು 24.6 ಅಂಕ ಪಡೆದಿರುವ ಪಾಕಿಸ್ತಾನವು ಕ್ರಮವಾಗಿ 179, 178 ಮತ್ತು 177ನೇ ಸ್ಥಾನ ಪಡೆದಿವೆ. 28.4 ಅಂಕ ಪಡೆದಿರುವ ಚೀನಾ 161ನೇ ಸ್ಥಾನದಲ್ಲಿದೆ. ರಷ್ಯಾವು 112ನೇ ಸ್ಥಾನದಲ್ಲಿದ್ದರೆ, ಅಮೆರಿಕವು 20ನೇ ಸ್ಥಾನದಲ್ಲಿದೆ.

ಮೂರು ರಾಜ್ಯಗಳಲ್ಲಿ 200ಕ್ಕೂ ಆಸ್ತಿ ಇ.ಡಿ ಜಪ್ತಿ

ನವದೆಹಲಿ (ಪಿಟಿಐ): ಹೂಡಿಕೆದಾರರಿಗೆ ವಂಚಿಸಿದ ಮತ್ತು ಹಣ ಅಕ್ರಮ ವರ್ಗಾವಣೆಯ ಪ್ರಕರಣದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಸೇರಿದ ₹110 ಕೋಟಿ ಮೌಲ್ಯದ 200ಕ್ಕೂ ಹೆಚ್ಚು ಆಸ್ತಿಗಳು ಮತ್ತು ಕೋಟ್ಯಂತರ ಬೆಲೆಯ ಫ್ಲ್ಯಾಟ್‌ಗಳನ್ನು ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕೇರಳದಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ತಿಳಿಸಿದೆ.

210 ಆಸ್ತಿಗಳ ಪೈಕಿ 196 ಆಸ್ತಿಗಳು ಆಂಧ್ರಪ್ರದೇಶದಲ್ಲಿ, 13 ತೆಲಂಗಾಣದಲ್ಲಿ ಮತ್ತು ಒಂದು ಆಸ್ತಿ ಕರ್ನಾಟಕದಲ್ಲಿವೆ. ಈ ಆಸ್ತಿಗಳಲ್ಲಿ ಜಮೀನುಗಳು, ಫ್ಲ್ಯಾಟ್‌ಗಳು ಸೇರಿವೆ. ಇವು, ಮೈತ್ರಿ ಪ್ಲಾಂಟೇಶನ್ ಮತ್ತು ಹಾರ್ಟಿಕಲ್ಚರ್ ಪ್ರೈವೇಟ್ ಲಿಮಿಟೆಡ್, ಇದರ ಸಹೋದರ ಸಂಸ್ಥೆಗಳಾದ ಶ್ರೀ ನಕ್ಷತ್ರ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಮೈತ್ರಿ ರಿಯಲ್ಟರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ನಿರ್ದೇಶಕರಾದ ಲಕ್ಕು ಕೊಂಡ ರೆಡ್ಡಿ, ಲಕ್ಕು ಮಲ್ಯಾದ್ರಿ ರೆಡ್ಡಿ, ಲಕ್ಕು ಮಾಧವ ರೆಡ್ಡಿ ಮತ್ತು ಕೋಳಿಕಲಪುಡಿ ಬ್ರಹ್ಮಾ ರೆಡ್ಡಿ ಅವರ ಹೆಸರಿನಲ್ಲಿದ್ದವು.

ಮೈತ್ರಿ ಮತ್ತು ಶ್ರೀ ನಕ್ಷತ್ರ ಸಮೂಹದ ಈ ಸಂಸ್ಥೆಗಳು ಪರವಾನಗಿ ಇಲ್ಲದೇ, ಹೂಡಿಕೆದಾರರಿಗೆ ಹೆಚ್ಚಿನ ಕಮಿಷನ್ ಆಸೆ ತೋರಿಸಿ, ಲಕ್ಷಾಂತರ ರೂಪಾಯಿ ಸಂಗ್ರಹಿಸಿದ್ದವು. ಈ ಹಣವನ್ನು ತಮ್ಮ ಸಮೂಹದ ಸಂಸ್ಥೆಗಳಿಗೆ ಅಕ್ರಮವಾಗಿ ವರ್ಗಾಯಿಸಿ,ಯಲ್ ಎಸ್ಟೇಟ್ ವ್ಯವಹಾರದಲ್ಲಿ ಹೂಡಿಕೆ ಮಾಡಿದ್ದವು ಎಂದು ಇ.ಡಿ ಆರೋಪಿಸಿದೆ.

ಈ ಸಂಸ್ಥೆಗಳ ನಿರ್ದೇಶಕರು ಹೂಡಿಕೆದಾರರಿಗೆ ಸುಮಾರು ₹158.14 ಕೋಟಿ ಮರುಪಾವತಿಸಲು ವಿಫಲವಾಗಿದ್ದು, 2013ರ ಮಾರ್ಚ್‌ನಲ್ಲಿ ಆರೋಪಿಗಳ ವಿರುದ್ಧ ಆಂಧ್ರಪ್ರದೇಶ ಪೊಲೀಸರು ಹತ್ತಾರು ಎಫ್‌ಐಆರ್‌ಗಳನ್ನು ದಾಖಲಿಸಿದ್ದರು. ಇದನ್ನು ಆಧರಿಸಿ, ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಹೇಳಿದೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಮುಖ್ಯ ನಿಯಂತ್ರಣ ಸೌಲಭ್ಯ
ಪಿ.ಬಿ.ನಂ. 66, ಹಾಸನ–573210, ಭಾರತ. ದೂರವಾಣಿ : 08172–273343 ಫ್ಯಾಕ್ಸ್: 08172–273341
ಸಂಕ್ಷಿಪ್ತ ಇ–ಟೆಂಡರ್ ಆಹ್ವಾನದ ಸೂಚನೆ
1.ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಆನ್‌ಲೈನ್ ಮೂಲಕ ಐಟಂ ರೇಟ್ ಇ–ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ (ರೂ.)	ಇಎಂಡಿ (ಮೊತ್ತ ರೂ.)	ಕೆಲಸ ಮುಗಿಸಲು ಕಾಲಾವಧಿ
MCF/CMG/H/eTN-03/2022-23 Dtd. 01.06.2022	ಎಂ.ಸಿ.ಎಫ್ ಹಾಸನ ಅಂತರಿಕ್ಷ ನಗರದ ವಸತಿ ಕಾಲೋನಿಯಲ್ಲಿ ಮನೆಗಳ ಉನ್ನತೀಕರಣ (ಹಂತ–4) (ಸಿವಿಲ್, ಪಿಎಚ್ ಮತ್ತು ವಿದ್ಯುತ್ ಕೆಲಸಗಳು)	95,37,161/-	1,90,744/-	12 ತಿಂಗಳು

ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ: 04.06.2022ರ 10.00 ಗಂಟೆಯಿಂದ 15.06.2022ರ 17.00 ಗಂಟೆವರೆಗೆ
ಬಿಡ್ ಸ್ಪಷ್ಟನೆ ಪಡೆಯುವ ಅವಧಿ : 04.06.2022ರ 10:01 ಗಂಟೆಯಿಂದ 16.06.2022ರ 17.00 ಗಂಟೆವರೆಗೆ
ಬಿಡ್ ಸ್ಪಷ್ಟನೆಗೆ ಉತ್ತರ ನೀಡುವ ಕಡೇ ದಿನಾಂಕ ಮತ್ತು ಸಮಯ: 17.06.2022ರ 17:30 ಗಂಟೆವರೆಗೆ
ಟೆಂಡರ್‌ಗಳನ್ನು ಸ್ವೀಕರಿಸುವ ಕಡೇ ದಿನಾಂಕ ಮತ್ತು ಸಮಯ: 18.06.2022ರ 17.00 ಗಂಟೆವರೆಗೆ
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 22.06.2022 ರಂದು 11.30 ಗಂಟೆಯ ನಂತರ
2. ಆಸಕ್ತ ಟೆಂಡರುದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ನೋಡಬಹುದು. ಇದನ್ನು ವೆಬ್‌ಸೈಟ್: www.isro.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಫಾರಂಗಳನ್ನು ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ www.tenderwizard.com/ISRO ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಎಲ್ಲಾ ತಿದ್ದುಪಡಿ, ಸಮಯ ವಿಸ್ತರಣೆ, ಸ್ಪಷ್ಟೀಕರಣ ಇತ್ಯಾದಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ. ಟೆಂಡರ್ ದಾರರು ತಿದ್ದುಪಡಿಗಾಗಿ ನಿಯಮಿತವಾಗಿ ವೆಬ್‌ಸೈಟ್‌ಗೆ ಭೇಟಿ ನೀಡಬೇಕು
ವಿಭಾಗ ಮುಖ್ಯಸ್ಥರು, ಸಿಸಿಎಂಡಿ–ಸಿಎಂಜಿ

ಕೊರ್ಬೆವ್ಯಾಕ್ಸ್ ಬೂಸ್ಟರ್ ಡೋಸ್: ಎನ್‌ಟಿಎಜಿಐ ಚರ್ಚೆ ಸಾಧ್ಯತೆ

ನವದೆಹಲಿ (ಪಿಟಿಐ): ಕೋವಿಡ್‌-19 ವಿರುದ್ಧ ಕೋವಿಶೀಲ್ಡ್ ಅಥವಾ ಕೊವ್ಯಾಕ್ಸಿನ್ ಸಂಪೂರ್ಣ ಲಸಿಕೆ ಪಡೆದವರಿಗೆ ಬಯಾಲಾಜಿಕಲ್–ಇ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೊರ್ಬೆವ್ಯಾಕ್ಸ್ ಅನ್ನು ಬೂಸ್ಟರ್ ಆಗಿ ನೀಡಲು ಅನುಮತಿಸುವುದು, ಎರಡನೇ ಡೋಸ್ ಮತ್ತು ಬೂಸ್ಟರ್ ಡೋಸ್ ನಡುವಿನ ಅಂತರ ಆರು ತಿಂಗಳಿಗೆ ಇಳಿಸುವ ಬಗ್ಗೆ ಶೀಘ್ರವೇ ನಡೆಯಲಿರುವ ಎನ್‌ಟಿಎಜಿಐ ಸಭೆಯಲ್ಲಿ ಚರ್ಚಿಸುವ ಸಾಧ್ಯತೆಯಿದೆ.

ಸದ್ಯದ ನಿಯಮದಂತೆ 18 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು ಲಸಿಕೆಯ ಎರಡನೇ ಡೋಸ್ ಪೂರ್ಣಗೊಳಿಸಿದವರು ಒಂಬತ್ತು ತಿಂಗಳು ಪೂರ್ಣಗೊಳಿಸಿದ ನಂತರ ಬೂಸ್ಟರ್ ಡೋಸ್ ಪಡೆಯಬಹುದಾಗಿದೆ.

ಕೋವಿಶೀಲ್ಡ್ ಅಥವಾ ಕೊವ್ಯಾಕ್ಸಿನ್ ಲಸಿಕೆಯ ಮೊದಲ 2 ಡೋಸ್‌ಗಳನ್ನು ಪಡೆದ 18 ವರ್ಷ ಮೇಲ್ಪಟ್ಟವರಿಗೂ ಮೂರನೇ ಡೋಸ್ (ಬೂಸ್ಟರ್ ಡೋಸ್) ಆಗಿ ಕೊರ್ಬೆವ್ಯಾಕ್ಸ್ ಲಸಿಕೆಗೆ ಭಾರತೀಯ ಔಷಧ ಮಹಾ ನಿಯಂತ್ರಕ (ಡಿಸಿಜಿಐ) ಕಳೆದ ಭಾನುವಾರಷ್ಟೇ ಅನುಮತಿ ನೀಡಿದೆ.

5ರಿಂದ 12ರ ವಯಸ್ಸಿನ ಮಕ್ಕಳಿಗೆ ನೀಡಿರುವ ಕೊರ್ಬೆವ್ಯಾಕ್ಸ್ ಲಸಿಕೆಗಳ ಅಂಕಿ–ಅಂಶಗಳನ್ನು ಎನ್‌ಟಿಎಜಿಐ ಸಲಹಾ ಸಮಿತಿ ಪರಿಶೀಲಿಸಲಿದೆ ಎಂದು ಮೂಲಗಳು ಹೇಳಿವೆ.

ಕೊರ್ಬೆವ್ಯಾಕ್ಸ್ 12ರಿಂದ 14 ವರ್ಷದ ಮಕ್ಕಳಿಗೆ ದೇಶದಲ್ಲಿ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಮೊದಲ ಲಸಿಕೆ ಎನಿಸಿದೆ.

ಬೇರೆ ಕಂಪನಿಗಳ ಮೊದಲ ಎರಡು ಡೋಸ್ ಲಸಿಕೆಗಳನ್ನು ಪಡೆದಿರುವ ವ್ಯಕ್ತಿಗೆ ಮತ್ತೊಂದು ಕಂಪನಿಯ ಲಸಿಕೆಯನ್ನು ಬೂಸ್ಟರ್ ಆಗಿ ನೀಡಲು ದೇಶದಲ್ಲಿ ಅನುಮತಿ ಸಿಕ್ಕಿರುವುದು ಇದೇ ಮೊದಲು ಎಂದು ಸಂಸ್ಥೆ ಹೇಳಿದೆ.

ಕೋವಿಡ್: 3,714 ಹೊಸ ಪ್ರಕರಣ ದೃಢ

ದೇಶದಾದ್ಯಂತ ಮಂಗಳವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆ ಅವಧಿಯಲ್ಲಿ ಹೊಸದಾಗಿ 3,714 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಸೋಮವಾರಕ್ಕೆ (4,518) ಹೋಲಿಸಿದರೆ ಈ ಪ್ರಮಾಣ ತುಸು ಕಡಿಮೆಯಾಗಿದೆ.

ಈ ಅವಧಿಯಲ್ಲಿ 7 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ದೇಶದಲ್ಲಿ ಈವರೆಗೆ 4.31 ಕೋಟಿಗೂ ಹೆಚ್ಚು ಜನರಿಗೆ ಸೋಂಕು ತಗುಲಿದ್ದು, ಒಟ್ಟು 5,24,708 ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 26,976ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

'ಕೆಮ್ಮು, ನೆಗಡಿಗೆ ಚೀಟಿ ರಹಿತ ಔಷಧ'

ಕೆಮ್ಮು, ಶೀತ, ನೋವು ನಿವಾರಕ ಹಾಗೂ ಚರ್ಮದ ತುರಿಕೆ ಶಮನಕ್ಕೆ ಸಾಮಾನ್ಯವಾಗಿ ಬಳಸುವ ಔಷಧಿಗಳಾದ ಪ್ಯಾರಾಸಿಟಮಾಲ್, ಮೂಗಿನ ಡ್ರಾಪ್ಸ್ ಮತ್ತು ಫಂಗಸ್ ತಡೆಯುವ ಆ್ಯಂಟಿಬಯಾಟಿಕ್ ಸೇರಿ 16 ಸಾಮಾನ್ಯ ಔಷಧಗಳು ವೈದ್ಯರ ಚೀಟಿ ಇಲ್ಲದೇ ಇನ್ನು ಮುಂದೆ ಔಷಧಾಲಯಗಳಲ್ಲಿ ಲಭಿಸಲಿವೆ.

ಕೇಂದ್ರ ಆರೋಗ್ಯ ಸಚಿವಾಲಯವು 1945ರ ಔಷಧ ನಿಯಮಗಳಿಗೆ ತಿದ್ದುಪಡಿಗಳನ್ನು ಸೂಚಿಸಿದೆ. ಅಂತಹ 16 ಔಷಧಗಳನ್ನು ಶೆಡ್ಯೂಲ್ ಕೆ ಅಡಿಯಲ್ಲಿ ತರಲು ವೈದ್ಯರ ಪ್ರಿಸ್ಕ್ರಿಪ್ಷನ್‌ಗೆ ವಿನಾಯಿತಿ ನೀಡುವ ಮೂಲಕ, ಅವುಗಳನ್ನು ಮಾನ್ಯತೆಯ ಚಿಲ್ಲರೆ ಔಷಧ ಮಾರಾಟಗಾರರು 'ಓವರ್ –ದಿ-ಕೌಂಟರ್ (ಒಟಿಸಿ)' ವರ್ಗದಲ್ಲಿ ಮಾರಾಟ ಮಾಡಬಹುದಾಗಿದೆ. ಈ ಬಗ್ಗೆ ಸಂಬಂಧಪಟ್ಟವರಿಂದ ಸಲಹೆ ಕೋರಿ ಆರೋಗ್ಯ ಸಚಿವಾಲಯ ಗೆಜೆಟ್ ಅಧಿಸೂಚನೆ ಕೂಡ ಹೊರಡಿಸಿದೆ.



EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಸಂಚಾರ ಸುವ್ಯವಸ್ಥೆಗೆ ಯಂತ್ರ ಕಲಿಕೆ

ಸುಧೀರ ಎಚ್. ಎಸ್.

ಬೆಂಗಳೂರು ನಗರ ಕಳೆದ ಎರಡು ದಶಕಗಳಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ಅಭಿವೃದ್ಧಿಯನ್ನು ಕಂಡಿದೆ. ಸಾಫ್ಟ್‌ವೇರ್‌ನ ಮುಂದಾಳತ್ವದಲ್ಲಿ ಇತರೆ ವ್ಯಾಪಾರ ಮತ್ತು ವಾಹಿವಾಟು ಕೂಡ ಸೇರಿ ಬೆಂಗಳೂರು ವಿಸ್ತೃತವಾಗಿ ಬೆಳೆಯಲು ಕಾರಣವಾಗಿದೆ. ಬೆಂಗಳೂರಿನಲ್ಲಂತೂ ಎರಡೇ ದಶಕದಲ್ಲಿ ಜನಸಂಖ್ಯೆ ದ್ವಿಗುಣಗೊಂಡಿದೆ. ಬೆಂಗಳೂರಲ್ಲದೆ ರಾಜ್ಯದ ಬೇರೆ ನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ವಿಜಯಪುರ, ಕಲ್ಬುರ್ಗಿ, ರಾಯಚೂರು, ದಾವಣಗೆರೆ, ತುಮಕೂರು ಮತ್ತು ಇನ್ನೂ ಹಲವಾರು ನಗರಗಳು ಕೂಡ ಆರ್ಥಿಕವಾಗಿ ಮತ್ತು ಭೌಗೋಳಿಕವಾಗಿ ಅಭಿವೃದ್ಧಿಯಾಗಿವೆ.

ನಗರಗಳಲ್ಲಂತೂ ಜನಸಂಚಾರಕ್ಕೆ ಎಷ್ಟೇ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇದ್ದರೂ ಸದ್ಯದ ಜನಸಂಖ್ಯೆಗೆ ಅದು ಸಾಕಾಗುವುತ್ತಿಲ್ಲ. ಹೀಗಾಗಿ ಸಾರ್ವಜನಿಕರು ಖಾಸಗಿ ವಾಹನಗಳಿಗೆ ಮೊರೆಹೋಗುತ್ತಿದ್ದಾರೆ. ಖಾಸಗಿ ವಾಹನಗಳಿಂದ ಸಂಚಾರ ಹೆಚ್ಚಾದಂತೆ ದಟ್ಟಣೆ ಕೂಡ ಸ್ವಾಭಾವಿಕವಾಗಿ ಹೆಚ್ಚಾಗಲೇಬೇಕು. ಇದರಿಂದ ನಮ್ಮ ಸಾರಿಗೆ ಮತ್ತು ಸಂಚಾರ ವ್ಯವಸ್ಥೆ ಒಂದು ರೀತಿಯಲ್ಲಿ ಗ್ಯಾರೆಟ್ ಹಾರ್ಡಿನ್ ಅವರು ಸೂಚಿಸಿರುವಂತೆ 'ಸಮಸ್ತರ ದುರಂತ' (ಟ್ರಾಜೆಡಿ ಆಫ್ ಕಾಮನ್ಸ್)ಕ್ಕೆ ಒಂದು ಉದಾಹರಣೆಯಾಗಿದೆ. ಏಕೆಂದರೆ ಜನರು ಸಂಚಾರ ಮಾಡಲು ಖಾಸಗಿ ವಾಹನಗಳನ್ನು ತಮ್ಮದೇ ಹಣವನ್ನು ಹೂಡಿ ಕೊಂಡಿಕೊಂಡಿರುತ್ತಾರೆ. ಆದರೆ ಇದರಿಂದ ಅವರಿಗೇ ಹೆಚ್ಚು ತೊಡಕು ಕೂಡ ಉಂಟಾಗುತ್ತಿರುತ್ತದೆ. ಉದಾಹರಣೆಗೆ ತುಮಕೂರಿನ ಸ್ಥಿತಿಯನ್ನು ಗಮನಿಸೋಣ. ಇತ್ತೀಚಿನ ಮಾಹಿತಿಯ ಪ್ರಕಾರ ಇಲ್ಲಿ ಸುಮಾರು ಒಂದೂವರೆ ಲಕ್ಷ ದ್ವಿಚಕ್ರ ವಾಹಗಳಿವೆ (ಬೈಕ್, ಸ್ಕೂಟರ್, ಮತ್ತು ಮೊಪೆಡ್ ಸೇರಿ). ಪ್ರತಿ ದ್ವಿಚಕ್ರ ವಾಹನಕ್ಕೆ ಸರಾಸರಿ ಐವತ್ತು ಸಾವಿರ ರೂಪಾಯಿಗಳನ್ನು ಸಾರ್ವಜನಿಕರು ಹೂಡಿರುತ್ತಾರೆ ಎಂದರೆ ಸಾರ್ವಜನಿಕರು ಹೂಡಿರುವ ಬಂಡವಾಳ ಸುಮಾರು ₹750 ಕೋಟಿ, ಕೇವಲ ತುಮಕೂರಿನಲ್ಲಿ!

ಆದರೆ ತುಮಕೂರಿಗೆ ವ್ಯವಸ್ಥಿತವಾಗಿ ಸಾರ್ವಜನಿಕ ಬಸ್ ಸಾರಿಗೆ ರೂಪಿಸಲು ಸುಮಾರು 50 ಬಸ್ ಬೇಕು. ಪ್ರತಿ ಬಸ್ಸಿಗೆ ತಲಾ ಇಪ್ಪತ್ತೈದು ಲಕ್ಷವಾದರೆ, ಇದಕ್ಕೆ ಬೇಕಾಗುವ ಒಟ್ಟು ಬಂಡವಾಳ ಸುಮಾರು ಹನ್ನೆರಡೂವರೆ ಕೋಟಿ ಮಾತ್ರ. ಇನ್ನು ಖಾಸಗಿ ವಾಹನ ಬಳಸಲು ಸಾರ್ವಜನಿಕರು ಪೆಟ್ರೋಲ್‌ಗೆ ಖರ್ಚು ಮಾಡಬೇಕು. ಇದೆಲ್ಲದೆ ಖಾಸಗಿ ವಾಹನಗಳನ್ನು ರಸ್ತೆಬದಿಯಲ್ಲಿ ನಿಲ್ಲಿಸುವುದರಿಂದ ಮುಕ್ತ ಸಂಚಾರಕ್ಕೆ ರಸ್ತೆಯಲ್ಲಿ ಜಾಗ ಕಡಿಮೆಯೂ ಆಗುತ್ತದೆ. ಇಷ್ಟು ವಾಹನಗಳು ಸಂಚರಿಸುವುದರಿಂದ ಇವುಗಳಿಂದ ಹೊರಬರುವ ಹೊಗೆಯಿಂದ ವಾಯುಮಾಲಿನ್ಯ ಉಂಟಾಗುತ್ತದೆ; ಮತ್ತು ಈ ಎಲ್ಲ ಸಂಗತಿಗಳು ಜಾಗತಿಕ ಮಟ್ಟದಲ್ಲಿ ಪರಿಣಾಮ ಬೀರುತ್ತದೆ. ಹೀಗಾಗಿ ನಮ್ಮ ಪ್ರಸ್ತುತ ಸಾರಿಗೆ ವ್ಯವಸ್ಥೆ 'ಕಾಮನ್ಸ್ ದುರಂತ'ಕ್ಕೆ ಒಂದು ನಿದರ್ಶನವಾಗಿದೆ.

> ಜನರು ಸಂಚಾರಕ್ಕೆ ಖಾಸಗಿ ವಾಹನಗಳನ್ನು ತಮ್ಮದೇ ಹಣದಿಂದ ಖರೀದಿಸಿರುತ್ತಾರೆ. ಆದರೆ ಇದರಿಂದ ಅವರಿಗೇ ಹೆಚ್ಚು ತೊಡಕು ಕೂಡ ಉಂಟಾಗುತ್ತಿರುತ್ತದೆ. ಆದರೆ, ಮೆಷಿನ್ ಲರ್ನಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡರೆ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಬಹುದು

ಈಗಾಗಲೇ ಬೆಂಗಳೂರು ಸೇರಿದಂತೆ ಎಲ್ಲ ಜಿಲ್ಲಾ ಕೇಂದ್ರವಾಗಿರುವ ಊರುಗಳಲ್ಲಿ ಸರ್ಕಾರ ಸಾಂಕೇತಿಕವಾಗಿ ಸಾರ್ವಜನಿಕ ಬಸ್ ಸಾರಿಗೆ ಕಲ್ಪಿಸಿದೆ. ಆದರೆ ಇವು ಪರಿಣಾಮಕಾರಿಯಾಗಿಲ್ಲ. ಏಕೆಂದರೆ ಸಾರ್ವಜನಿಕ ಸಾರಿಗೆಯಲ್ಲಿ ಕೆಲವು ಪ್ರಮುಖ ಆಯಾಮಗಳಿವೆ. ಪ್ರಮುಖವಾಗಿ ಸಾರಿಗೆ ಸೇವೆಗಳು ನಿಗದಿತ ವೇಳೆಯಲ್ಲಿ ಮತ್ತು ನಿರ್ದಿಷ್ಟ ಸಮಯಕ್ಕೆ ಸಂಚರಿಸಬೇಕು. ಸಾರಿಗೆಗೆ ತಗಲುವ ವೆಚ್ಚ ಕೂಡ ಬಡ ಮತ್ತು ಮಾಧ್ಯಮ ವರ್ಗದ ಕುಟುಂಬದವರಿಗೆ ಹೊರೆಯಾಗಬಾರದು. ಈಗಿನ ವಾಹನಸಂಚಾರದಿಂದ ದಟ್ಟಣೆ ಹೆಚ್ಚಿ, ನಿರ್ದಿಷ್ಟ ಸಮಯಕ್ಕೆ ಮತ್ತು ನಿಗದಿತ ವೇಳೆಗೆ ನಿಗದಿತ ಸ್ಟಾಪ್‌ಗೆ ತಲುಪುವುದು ಅಸಾಧ್ಯ ಎಂಬುದು ಸಿದ್ಧವಾಗಿದೆ. ಈ ನಿಟ್ಟಿನಲ್ಲಿ ಯಂತ್ರ ಕಲಿಕೆಯ ಮಾಡೆಲ್ (ಮೆಷಿನ್ ಲರ್ನಿಂಗ್ ಮಾಡೆಲ್) ಸಹಾಯ ಮಾಡಬಹುದು.

ಬಸ್ ಗಳಲ್ಲಿ ಜಿ.ಪಿ.ಎಸ್. ಬಳಸಿ ಬಸ್ ಸಂಚಾರದ ಮಾಹಿತಿಯನ್ನು ಕ್ರೋಡೀಕರಿಸಬಹುದು. ಪ್ರತಿಯೊಂದು ರೂಟ್, ಬಸ್ ಸ್ಟಾಪ್, ಒಂದು ರೂಟ್ ಪೂರೈಸಲು ತಗಲುವ ಸಮಯ ಮತ್ತು ಯಾವ ಸ್ಟಾಪ್ ಇಂದ ಯಾವ ಸ್ಟಾಪ್ ವರೆಗೆ ಯಾವ ಯಾವ ವೇಳೆಯಲ್ಲಿ ಎಷ್ಟು ಜನರು ಪ್ರಯಾಣಿಸುತ್ತಾರೆ – ಎಂಬೆಲ್ಲ ಮಾಹಿತಿಯನ್ನು ಆಧರಿಸಿ, ಮಾಡೆಲ್ ಅನ್ನು ರೂಪಿಸಬಹುದು. ಯಂತ್ರ ಕಲಿಕೆಯ ಒಂದು ವಿಧಾನವಾದ 'ರೀ-ಇನ್ಫೋರ್ಸ್ಮೆಂಟ್ ಲರ್ನಿಂಗ್' ಅನ್ನು ಆಧರಿಸಿ ಈ ಮಾಡೆಲ್ ಅನ್ನು ಸುಧಾರಿಸಬಹುದು. ಲಭ್ಯ ಮಾಹಿತಿಯನ್ನು ಬಳಸಿ, ಮುಂದಿನ ನಿಲ್ದಾಣಕ್ಕೆ ಬಸ್ ಎಷ್ಟು ಹೊತ್ತಿನತಲ್ಲಿ ತಲುಪುತ್ತದೆ ಎಂದು ಊಹಿಸಬಹುದು. ಅಧಿಕ ಮಾಹಿತಿಯನ್ನು ಬಳಸಿ ವಿಶ್ಲೇಷಣೆಯನ್ನು ನಡೆಸಿದರೆ ಮಾಡೆಲ್ ಊಹಿಸುವ ನಿಖರತೆಯೂ ಹೆಚ್ಚಾಗುತ್ತದೆ. ಇದರಿಂದ ಪ್ರಯಾಣಿಕರಿಗೆ ಮುಂಚಿತವಾಗಿ 'ಇಷ್ಟು ಹೊತ್ತಿನಲ್ಲಿ ಯಾವ ಮಾರ್ಗದ ಬಸ್ ಬರುತ್ತದೆ' ಎಂದು ತಿಳಿಸಬಹುದು.

ಈ ರೀತಿ ಮಾಡೆಲ್ ಅನ್ನು ಬಳಸುವುದರಿಂದ ಸಾರಿಗೆ ಸಂಸ್ಥೆಗಳು ತಮ್ಮ ಸೇವೆಯ ಬಲವರ್ಧನೆಯನ್ನು ಹೆಚ್ಚಿಸಬಹುದು. ಇದರಿಂದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇನ್ನು

ಪರಿಣಾಮಕಾರಿಯಾಗಿ ಪ್ರಯೋಜನಕ್ಕೆ ಒದಗುತ್ತದೆ. ಆಗ ಹೆಚ್ಚು ಜನರು ಸಾರ್ವಜನಿಕ ಸೇವೆಯನ್ನು ಬಳಸಲೂಬಹುದು.

ಇದಲ್ಲದೆ ಯಂತ್ರ ಕಲಿಕೆಯನ್ನು ಟ್ರಾಫಿಕ್ ಸಿಗ್ನಲ್‌ಗಳಲ್ಲಿಯೂ ಬಳಸಬಹುದು. ಯಾವುದೇ ಒಂದು ಟ್ರಾಫಿಕ್ ಸಿಗ್ನಲ್‌ನಲ್ಲಿ ಸಾಧಾರಣವಾಗಿ ಮೂರು ಅಥವಾ ನಾಲ್ಕು ದಿಕ್ಕಿನಿಂದ ರಸ್ತೆಗಳು ಕೂಡುತ್ತವೆ. ಪ್ರತಿಯೊಂದು ದಿಕ್ಕಿನಿಂದ ಯಾವ ಯಾವ ಹೊತ್ತಿನಲ್ಲಿ ಯಾವ ಯಾವ ಬಗೆಯ ವಾಹನಗಳು ಸಂಚರಿಸುತ್ತವೆ ಎಂದು ವಿಡಿಯೋ ಕ್ಯಾಮೆರಾ ಮೂಲಕ ಮಾಹಿತಿ ಸಂಗ್ರಹಿಸಬಹುದು. ಇದರಿಂದ ನಿರಂತರವಾಗಿ ಬರುವ ಮಾಹಿತಿಯನ್ನು ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ ಮಾಡೆಲ್ ಬಳಸಿ ವಾಹನಗಳ ಅಂಕಿ-ಅಂಶಗಳನ್ನು ಕಲೆ ಹಾಕಬಹುದು. ಈ ಮಾಹಿತಿಯನ್ನು ಬಳಸಿಕೊಂಡು ಅಂಕಿ-ಅಂಶಗಳ ವಿಶ್ಲೇಷಣೆಯನ್ನು ಆಧರಿಸಿ ಮಾಡೆಲ್ ಅನ್ನು ರೂಪಿಸಬಹುದು. ಎಲ್ಲ ಸಿಗ್ನಲ್‌ಗಳ ಮಾಹಿತಿಯನ್ನು ಕಲೆಹಾಕಿ ಒಂದು ಸಮಗ್ರ ಮಾಡೆಲ್ ಅನ್ನು ರೂಪಿಸಬಹುದು. ಇದಕ್ಕೂ ಯಂತ್ರ ಕಲಿಕೆಯ ರೀ-ಇನ್ಫೋರ್ಸ್ಮೆಂಟ್ ಲರ್ನಿಂಗ್ ಅನ್ನು ಆಧರಿಸಿ ಈ ಮಾಡೆಲ್ ಅನ್ನು ಸುಧಾರಿಸಬಹುದು. ಈ ಮಾಡೆಲ್‌ಗೆ ಬಸ್ ವ್ಯವಸ್ಥೆಯ ಮಾಡೆಲ್ ಕೂಡ ಸೇರಿಸಿಕೊಂಡು ಇನ್ನೂ ಸಮಗ್ರ ಮಾಡೆಲ್ಗಳನ್ನು ರೂಪಿಸಲೂ ಸಾಧ್ಯವಿದೆ.

ಈಗಾಗಲೇ ನಗರ ಸಾರಿಗೆಗೆ ಬಳಸುವ ಸರ್ಕಾರಿ ಬಸ್‌ಗಳಲ್ಲಿ ಜಿ.ಪಿ.ಎಸ್. ಅಳವಡಿಸಿದೆ. ಸ್ಮಾರ್ಟ್ ಸಿಟಿ ಅಡಿಯಲ್ಲಿ ಊರೆಲ್ಲ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಹೀಗಾಗಿ ಮೂಲ ಮಾಹಿತಿಯ ಕೊರತೆ ಇಲ್ಲ. ಬೇಕಾಗಿರುವುದು ಪ್ರತಿಯೊಂದು ನಗರಕ್ಕೆ ತಕ್ಕಂತೆ ಆ ಊರಿನ ಸ್ಥಿತಿಗತಿಗೆ ಸೂಕ್ತರವಾಗುವ ಮಾಡೆಲ್‌ಗಳನ್ನು ರೂಪಿಸುವುದು. ಈ ಬಗೆಯ ಮಾಡೆಲ್ ಅನ್ನು ಬಳಸುವುದರಿಂದ ನಮ್ಮ ಸಾರಿಗೆ ವ್ಯವಸ್ಥೆ ಸ್ಮಾರ್ಟ್ ಆಗಬಲ್ಲದು. ಆಗ ಸಾರ್ವಜನಿಕರು ನಿರಾಳವಾಗಿ ತಮ್ಮ ದೈನಂದಿನ ಚಟುವಟಿಕೆಗಳನ್ನು ಯೋಜಿಸಿಕೊಂಡು, ನಿರಾಯಾಸವಾಗಿ ನಗರದಲ್ಲಿ ಸಂಚರಿಸಬಹುದು. ❖

ಬ್ಯಾಕ್ಟೀರಿಯಾ ಬೆನ್ನೇರಿದ ಔಷಧ

ನಮ್ಮ ದೇಹದೊಳಕ್ಕೆ ಔಷಧವನ್ನು ಸೇರಿಸಲು ಬ್ಯಾಕ್ಟೀರಿಯಾಗಳನ್ನೇ ಬಳಸಿಕೊಂಡರೆ ಹೇಗೆ? ಏನಿದು 'ಬ್ಯಾಕ್ಟೀರಿಯಾ ಬೋಟ್'?...

ಕೊಳ್ಳೇಗಾಲ ಶರ್ಮ

ಕೋವಿಡ್ ಬಂದಾಗ ವ್ಯಾಕ್ಸೀನನ್ನು ಚುಚ್ಚಿಸಿಕೊಳ್ಳುವ ಸಂದರ್ಭದಲ್ಲಿ ನನ್ನ ಹಿರಿಯ ಗೆಳೆಯರೊಬ್ಬರು ಗೊಣಗುತ್ತಿದ್ದರು: 'ಲಸಿಕೆಗಳನ್ನೂ ಗುಳಿಗೆಗಳ ರೂಪದಲ್ಲಿ ಸೇವಿಸುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!'

ಗುಳಿಗೆ ಔಷಧಗಳನ್ನು ಸೇವಿಸುವುದು ಸುಲಭ. ಸೂಜಿ ಚುಚ್ಚಿಸಿಕೊಳ್ಳುವುದು ನೋವು ಎಂದು ಅವರ ಅನಿಸಿಕೆ. ಆದರೆ ಗುಳಿಗೆ ಔಷಧ ಯಾವಾಗಲೂ ಪರಿಣಾಮಕಾರಿಯಲ್ಲ ಎನ್ನುವುದು ಅವರಿಗೆ ಗೊತ್ತಿರಲಿಲ್ಲ. ಇದೋ, ಎಂತಹ ಗುಳಿಗೆ ಔಷಧವನ್ನೂ ಪರಿಣಾಮಕಾರಿಯನ್ನಾಗಿ ಮಾಡಬಲ್ಲ ಉಪಾಯವೊಂದಿದೆಯಂತೆ. ಔಷಧವನ್ನು ಬೆನ್ನೇರಿಸಿಕೊಂಡ ಬ್ಯಾಕ್ಟೀರಿಯಾಗಳನ್ನು ನುಂಗಿಸಿದರೆ ಸಾಕಂತೆ! ಹೀಗೆಂದು ಪಂಜಾಬಿನ ಪಾಟಿಯಾಲಾದಲ್ಲಿರುವ 'ಥಾಪರ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ'ಯ ತಂತ್ರಜ್ಞ ದೀಪ್ತಿಮಾನ್ ಚೌಧರಿ ಮತ್ತು ಸಂಗಡಿಗರು ಮೊನ್ನೆ ಪ್ರಕಟಿಸಿದ್ದಾರೆ. ಈ ಉಪಾಯವನ್ನು 'ಬ್ಯಾಕ್ಟೀರಿಯಾ ಬೋಟ್' ಅರ್ಥಾತ್ 'ಬ್ಯಾಕ್ಟೀರಿಯಾ ದೋಣಿ' ಎಂದು ಕರೆದಿದ್ದಾರೆ.

ಗುಳಿಗೆ ಯಾವುದೇ ಆಗಲಿ ನಮ್ಮ ದೇಹ ನುಂಗದವುಗಳೆಲ್ಲವನ್ನೂ ಬಳಸಿಕೊಳ್ಳುವುದಿಲ್ಲ. ಹೀಗಾಗಿ ಔಷಧವಿಜ್ಞಾನಿಗಳಿಗೆ ನುಂಗಿದ ಗುಳಿಗೆಯೆಲ್ಲವೂ ದೇಹದಲ್ಲಿಯೇ ಉಳಿಯುವಂತೆ ಮಾಡುವುದೊಂದು ತೀರದ ಕನಸಾಗಿಬಿಟ್ಟಿದೆ. ಬಹುತೇಕ ಔಷಧಗಳನ್ನು ನುಂಗಿದ ಕೂಡಲೇ ಒಂದೋ ಹೊಟ್ಟೆಯಲ್ಲಿರುವ ಪ್ರಬಲವಾದ ಆಮ್ಲದಿಂದ ಅವು ನಿಷ್ಕ್ರಿಯವಾಗಿಬಿಡುತ್ತವೆ. ಅದನ್ನೂ ತಪ್ಪಿಸಿಕೊಂಡು ಕರುಳನ್ನು ಸೇರಿದರೂ, ಕರುಳಿನಿಂದ ರಕ್ತದೊಳಗೆ ಸೇರಲಾಗದೆ ಹಾಗೆಯೇ ಹೊರಗೆ ಹೋಗುತ್ತವೆ. ನಮ್ಮ ದೇಹ ಕೆಲವು ಔಷಧಗಳಲ್ಲಿನ ಕೇವಲ 3ರಿಂದ 10 ಶತಾಂಶದಷ್ಟನ್ನಷ್ಟೆ ಬಳಸಿಕೊಳ್ಳುತ್ತದೆಯಂತೆ. ಹೀಗಾಗಿಯೇ ಔಷಧಗಳನ್ನು ನೇರವಾಗಿ ರಕ್ತಕ್ಕೇ ಸೇರಿಸುವ ಚುಚ್ಚುಮದ್ದು ವೈದ್ಯರಿಗೆ ಪ್ರಿಯ; ರೋಗಿಗಳಿಗೆ ಕಹಿ.

ಇದನ್ನು ಬದಲಿಸಲಾಗದೇ? ಗುಳಿಗೆಗಳಲ್ಲಿರುವ ಔಷಧಗಳನ್ನೆಲ್ಲವೂ ದೇಹದೊಳಗೇ ಉಳಿಯುವಂತೆ, ದೇಹದ ಬಳಕೆಗೆ ಒಗ್ಗುವಂತೆ ಮಾಡುವುದು ಹೇಗೆ? ಇದು ವಿಜ್ಞಾನಿಗಳನ್ನೂ ಔಷಧಶಾಸ್ತ್ರಜ್ಞರನ್ನೂ ಕಾಡಿರುವ ಪ್ರಶ್ನೆ. ಇದಕ್ಕಾಗಿ ಹೊಸ ಹೊಸ ಉಪಾಯಗಳನ್ನು ರೂಪಿಸಲಾಗುತ್ತಿದೆ. ಹೊಟ್ಟೆಯೊಳಗೆ ನಿಧಾನವಾಗಿ ಕರಗುವಂತಹ ಹೊದಿಕೆ ಇರುವ ಗುಳಿಗೆಗಳನ್ನು ತಯಾರಿಸಲಾಗಿದೆ. ಅತಿ ಸೂಕ್ಷ್ಮವಾದ ಕೊಬ್ಬಿನ ಚೀಲಗಳೊಳಗೆ ಔಷಧವನ್ನು ತುಂಬಿಸಿ ಕುಡಿಸಿದ್ದೂ ಆಗಿದೆ. ಇವೆಲ್ಲ ನ್ಯಾನೋ ತಂತ್ರಜ್ಞಾನದ ಕೊಡುಗೆಗಳು. ಆದರೂ ಅತಿ ಹೆಚ್ಚು ಎಂದರೆ ಇಪ್ಪತ್ತೋ ಮೂವತ್ತೋ ಶತಾಂಶದಷ್ಟು ಔಷಧವನ್ನಷ್ಟೆ ದೇಹದೊಳಗೆ ಉಳಿಸುವ ಗುಳಿಗೆಗಳನ್ನು ತಯಾರಿಸಲು ಸಾಧ್ಯ. ಇವೆಲ್ಲ ಕಸರತ್ತಿನ ಜೊತೆಗೆ ಬ್ಯಾಕ್ಟೀರಿಯಾಗಳನ್ನೂ ಬಳಸಿಕೊಂಡರೆ ಇನ್ನಷ್ಟು ಉಪಯೋಗವಾಗಲಿದೆ ಎನ್ನುತ್ತದೆ, ದೀಪ್ತಿಮಾನ್ ಚೌಧರಿ ಸಂಶೋಧನೆ. ನಮ್ಮ ಹೊಟ್ಟೆಯಲ್ಲಿದ್ದರೂ ಕೇಡನ್ನುಂಟುಮಾಡದ ಬ್ಯಾಕ್ಟೀರಿಯಾಗಳ ಮೇಲೆ 'ಕೈಟೊಸಾನ್' ಎನ್ನುವ ಸಕ್ಕರೆಯ ಸೂಕ್ಷ್ಮ ಗುಳಿಗೆಗಳನ್ನು ಲೇಪಿಸಿ, ಆ ಗುಳಿಗೆಗಳೊಳಗೆ ಔಷಧವನ್ನು ಕೂಡಿಸುವ ಪ್ರಯತ್ನ ಮಾಡಿದೆ ಚೌಧರಿ ಅವರ ತಂಡ. ಹೊಟ್ಟೆಯೊಳ ಹೊಕ್ಕ ಬ್ಯಾಕ್ಟೀರಿಯಾಗಳು ಕರುಳಿನಲ್ಲಿ ಒಟ್ಟಾಗುತ್ತವೆ. ಹೀಗಾದಾಗ ಅವು 'ಮ್ಯೂಸಿಲೇಜು' ಎನ್ನುವ ಪದಾರ್ಥವನ್ನು ಸ್ರವಿಸುತ್ತವೆ. ಈ ಪದಾರ್ಥದಿಂದಾಗಿ ಬ್ಯಾಕ್ಟೀರಿಯಾಗಳೆಲ್ಲವೂ ಒಂದೇ ಕಡೆ ಒಟ್ಟಾಗಿ ಇರಬಹುದು. ಜೊತೆಗೆ ಇದು ಕೈಟೊಸಾನಿನಲ್ಲಿರುವ

ಔಷಧ ನಷ್ಟವಾಗದಂತೆ ರಕ್ಷಣೆ ಒದಗಿಸಬಹುದು ಎನ್ನುವುದು ಚೌಧರಿ ತಂಡದ ತರ್ಕ.

ಇದು ಕೇವಲ ತರ್ಕವಲ್ಲ. ಇಂತಹ ತಂತ್ರದಿಂದ ನಿಧಾನವಾಗಿ ಔಷಧವನ್ನು ಒಸರುವ ಗುಳಿಗೆಗಳನ್ನು ತಯಾರಿಸಬಹುದು ಎನ್ನುವುದನ್ನು ಇಲಿಗಳ ಮೇಲೆ ಪ್ರಯೋಗ ಮಾಡಿ ನಿರೂಪಿಸಿದ್ದಾರೆ. ಇದಕ್ಕಾಗಿ ಚೌಧರಿ 'ಲ್ಯಾಕ್ಟೊಬ್ಯಾಸಿಲಸ್ ಲ್ಯುಟೇರಿ' ಎನ್ನುವ ಕರುಳಿನಲ್ಲಿ ವಾಸಿಸಬಲ್ಲ ಬ್ಯಾಕ್ಟೀರಿಯಾವನ್ನು ಉಪಯೋಗಿಸಿದೆ. ಈ ಬ್ಯಾಕ್ಟೀರಿಯಾದ ಮೈ ಮೇಲೆ 15ರಿಂದ 25 ನ್ಯಾನೊಮೀಟರ್ ದಪ್ಪದ 'ಕೈಟೊಸಾನ್' ಗುಂಡುಗಳನ್ನು ಅಂಟಿಸಿದೆ.

ಕೈಟೊಸಾನ್ ಸಕ್ಕರೆಯ ಅಣುವಾದ್ದರಿಂದ ಸುಲಭವಾಗಿ ಬ್ಯಾಕ್ಟೀರಿಯಾದ ಹೊದಿಕೆಗೆ ಅಂಟಿಕೊಳ್ಳಬಲ್ಲುದು. ಈ ಗುಂಡುಗಳಲ್ಲಿ ಸುಮಾರು ಮೂರು ನ್ಯಾನೊಮೀಟರ್ ಅಗಲದ ರಂಧ್ರಗಳಿದ್ದುವು. ಅನಂತರ ಈ ಬ್ಯಾಕ್ಟೀರಿಯಾಗಳನ್ನು ಔಷಧವಿರುವ ದ್ರಾವಣದಲ್ಲಿಟ್ಟು ಬೆಳೆಸಿದ್ದಾರೆ. ನ್ಯಾನೊಗುಂಡುಗಳ ಹೊದಿಕೆ ಇರುವ ಬ್ಯಾಕ್ಟೀರಿಯಾ ಇಂತಹ ಹೊದಿಕೆ ಇಲ್ಲದವುಗಳಿಗಿಂತ ನಿಧಾನವಾಗಿ ಬೆಳೆಯುತ್ತದೆ. ನ್ಯಾನೊಹೊದಿಕೆಯೊಳಗೆ ಔಷಧವನ್ನು ಸೇರಿಸಿದ್ದಾರೆ. ಇದೇ ಬ್ಯಾಕ್ಟೀರಿಯಾ ಬೋಟ್.

ಹೀಗೆ ಔಷಧವನ್ನು ತುಂಬಿದ ನ್ಯಾನೊಗುಂಡುಗಳ ಹೊದಿಕೆ ಬ್ಯಾಕ್ಟೀರಿಯಾ ಬೋಟ್‌ಗಳು ಗುಳಿಗೆಗಳಂತೆ ವರ್ತಿಸಬಲ್ಲುವೇ ಎನ್ನುವುದನ್ನು ಪರೀಕ್ಷಿಸಲು ಇವನ್ನು ಇಲಿಗಳಿಗೆ ತಿನ್ನಿಸಿ ಪ್ರಯೋಗ ಮಾಡಿದ್ದಾರೆ. ಇಲಿಗಳಲ್ಲಿ ಉದ್ದೇಶಪೂರ್ವಕವಾಗಿ ಕ್ಯಾನ್ಸರ್ ಗಂಟುಗಳು ಬೆಳೆಯುವಂತೆ ಮಾಡಿ, ಅದರ ಚಿಕಿತ್ಸೆಗೆಂದು ನೀಡುವ 5-ಫ್ಲೂರೋಸಿಲ್ ಎನ್ನುವ ಔಷಧವನ್ನು ಬ್ಯಾಕ್ಟೀರಿಯಾ ಬೋಟ್‌ಗಳ ರೂಪದಲ್ಲಿ ಪ್ರಯೋಗಿಸಿದ್ದಾರೆ. ಸಾಮಾನ್ಯವಾಗಿ ಇಂತಹ ಕ್ಯಾನ್ಸರ್ ಗಂಟುಗಳು ಗಾತ್ರದಲ್ಲಿ ಬೆಳೆಯುತ್ತಲೇ ಹೋಗುತ್ತವಷ್ಟೆ. ಔಷಧಗಳನ್ನು ನೀಡಿದಾಗ ಅವುಗಳ ಬೆಳವಣಿಗೆ ಕುಂಠಿತವಾಗುತ್ತದೆ. ಒಂದು ತಿಂಗಳ ನಂತರ ಗಮನಿಸಿದಾಗ ಬ್ಯಾಕ್ಟೀರಿಯಾ ಬೋಟಿನ ಗುಳಿಗೆಗಳನ್ನು ತಿನ್ನಿಸಿದ ಇಲಿಗಳಲ್ಲಿ ಎಲ್ಲವುಗಳಲ್ಲಿಯೂ, ನೇರವಾಗಿ ಚುಚ್ಚುಮದ್ದಿನ ಮೂಲಕ ಔಷಧ ನೀಡಿದ ಇಲಿಗಳಲ್ಲಿ ಇದ್ದ ಗಂಟಿಗಿಂತಲೂ ಪುಟ್ಟ ಗಂಟುಗಳಿದ್ದುವು. ಔಷಧದ ಪ್ರಮಾಣ ಹೆಚ್ಚಿದ್ದ ಬ್ಯಾಕ್ಟೀರಿಯಾ ಬೋಟ್‌ಗಳನ್ನು ನುಂಗಿದ ಇಲಿಗಳಲ್ಲಿ ಗಂಟುಗಳ ಗಾತ್ರ ಎಲ್ಲದವುಗಳಿಗಿಂತಲೂ ಕಡಿಮೆ ಇತ್ತು.

ಇದು ಬ್ಯಾಕ್ಟೀರಿಯಾ ಬೋಟ್‌ಗಳು ಸಾಮಾನ್ಯ ಚುಚ್ಚುಮದ್ದಿಗಿಂತಲೂ ಪರಿಣಾಮಕಾರಿ ಎಂದು ತೋರಿಸುತ್ತದಷ್ಟೆ. ಹಾಗೆಯೇ ಇಲಿಗಳ ಕರುಳನ್ನೂ ಇವರು ಪರೀಕ್ಷಿಸಿದ್ದಾರೆ. 5-ಫ್ಲೂರೋಯುರಾಸಿಲ್ ಇರುವ ಜೀವಕೋಶಗಳ ಮೇಲೆ ಬೆಳಕು ಚೆಲ್ಲಿದಾಗ ಅವು ಔಷಧವಿರುವ ಪ್ರಮಾಣಕ್ಕೆ ಅನುಗುಣವಾಗಿ ಬೆಳಗುತ್ತವೆ. ಹೀಗೆ ವಿವಿಧ ಪ್ರಮಾಣದಲ್ಲಿ ಔಷಧವನ್ನು ಹೇರಿದ ಬ್ಯಾಕ್ಟೀರಿಯಾ ಬೋಟ್‌ಗಳನ್ನು ನುಂಗಿಸಿದ ಇಲಿಗಳ ಕರುಳಿನ ಜೀವಕೋಶಗಳಲ್ಲಿ ಬಹಳ ದೀರ್ಘಕಾಲದ ನಂತರವೂ ಔಷಧ ಇದ್ದುದನ್ನು ಗಮನಿಸಿದ್ದಾರೆ. ಚುಚ್ಚುಮದ್ದು ಪಡೆದ ಇಲಿಗಳ ಕರುಳಿನ ಕೋಶಗಳಲ್ಲಿ ಇವು ಕೆಲವೇ ದಿನಗಳಲ್ಲಿ ಮಾಯವಾಗಿದ್ದುವು. ಅರ್ಥಾತ್, ಕಡಿಮೆ ಪ್ರಮಾಣದ ಔಷಧವಿರುವ ಬ್ಯಾಕ್ಟೀರಿಯಾ ಬೋಟ್‌ನ ಗುಳಿಗೆಗಳ ಔಷಧಗಳೂ ದೀರ್ಘಕಾಲ ಪರಿಣಾಮಕಾರಿ. ಈ ಚಿಕಿತ್ಸೆ ಪಡೆದ ಇಲಿಗಳಲ್ಲಿ ಬದುಕಿ ಉಳಿದವುಗಳ ಪ್ರಮಾಣವೂ ಹೆಚ್ಚಿತ್ತು.

ಲ್ಯಾಕ್ಟೊಬ್ಯಾಸಿಲಸ್ ಲ್ಯುಟೇರಿ ಬ್ಯಾಕ್ಟೀರಿಯಾಗಳು ಕರುಳಿನ ಜೀವಕೋಶಗಳ ನಡುವೆ ಹೋಗಿ, ಮ್ಯುಸಿಲೇಜನ್ನು ಸ್ರವಿಸುವುದರಿಂದ ಹೀಗಾಗುತ್ತದೆ. ಅಲ್ಲಿ ಇವುಗಳ ಸಂಖ್ಯೆ ಹೆಚ್ಚುವುದರಿಂದ, ಬೋಟ್‌ಗಳಲ್ಲಿನ ಔಷಧ ನಿಧಾನವಾಗಿ ಹಾಗೂ ನೇರವಾಗಿ ಕರುಳಿನ ಕೋಶಗಳಿಗೆ ಸೇರುತ್ತದೆ. ಪರಿಣಾಮಕಾರಿ ಫಲ ದೊರೆಯುತ್ತದೆ ಎಂದು ಚೌಧರಿ ತಂಡ ತರ್ಕಿಸಿದೆ. ಅಷ್ಟೇ ಅಲ್ಲ. ರಕ್ತದಲ್ಲಿರುವ ಕೊಲೆಸ್ಟ್ರಾಲ್ ಅನ್ನು ತಗ್ಗಿಸುವ ಔಷಧಗಳನ್ನೂ ಬಳಸಿ ಫಲ ಸಿಗುತ್ತದೆಂದು ಕಂಡುಕೊಂಡಿದೆ. ಹಾಗೆಯೇ ಲ್ಯಾಕ್ಟೊಬ್ಯಾಸಿಲಸ್ ಲ್ಯುಟೇರಿಯಂತೆಯೇ ಕರುಳಿನ ಜೀವಕೋಶಗಳ ನಡುವೆ ವಾಸಿಸಬಲ್ಲ ಇತರೆ ಬ್ಯಾಕ್ಟೀರಿಯಾಗಳನ್ನು ಈ ಬಗೆಯಲ್ಲಿ ಔಷಧವನ್ನು ಹೊತ್ತೊಯ್ಯುವ ಬೋಟ್‌ಗಳನ್ನಾಗಿ ಮಾಡಬಹುದು ಎಂದು ನಿರೂಪಿಸಿದೆ.

ಬ್ಯಾಕ್ಟೀರಿಯಾ ಬೋಟ್ ಕುರಿತ ಈ ಸಂಶೋಧನೆಯ ವಿವರಗಳನ್ನು 'ಸೈನ್ಸ್ ಅಡ್ವಾನ್ಸಸ್' ಪತ್ರಿಕೆ ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟಿಸಿದೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಮ್ಮ ಅಂತರಂಗದ ಪುಸ್ತಕ ತೆರೆಯುವತನಕ ಉಳಿದೆಲ್ಲ ಪುಸ್ತಕಗಳು ಉಪಯೋಗಕ್ಕೆ ಬಾರವು.
–ಸ್ವಾಮಿ ವಿವೇಕಾನಂದ

ಆಕ್ಷೇಪಾರ್ಹ ಹೇಳಿಕೆ: ಸರ್ಕಾರ ಬಿಜೆಪಿ ಪಾಠ ಕಲಿಯಲಿ

ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡ ದ್ವೇಷ ಭಾಷಣಗಳಿಗೆ ಮಿತಿ ಇದೆ ಎಂಬುದು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತವಾದ ಆಕ್ರೋಶ ಮತ್ತು ಕೆಲವು ದೇಶಗಳ ರಾಜತಾಂತ್ರಿಕ ಕ್ರಮಗಳ ಬಳಿಕವಷ್ಟೇ ಬಿಜೆಪಿ ನಾಯಕರಿಗೆ ಅರ್ಥವಾಗಿದೆ. ಪ್ರವಾದಿ ಮಹಮ್ಮದ್ ಅವರ ವಿರುದ್ಧ ರಾಷ್ಟ್ರೀಯ ಸುದ್ದಿವಾಹಿನಿಯೊಂದರಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ್ದ ಬಿಜೆಪಿಯ ರಾಷ್ಟ್ರೀಯ ವಕ್ತಾರರಾಗಿದ್ದ ನೂಪುರ್ ಶರ್ಮಾ ಅವರನ್ನು ಅಮಾನತು ಮಾಡಲಾಗಿದೆ. ಅದೇ ರೀತಿಯಲ್ಲಿ, ಪ್ರವಾದಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೆಗಳನ್ನು ಪ್ರಕಟಿಸಿದ್ದ ದೆಹಲಿ ಬಿಜೆಪಿ ಘಟಕದ ಮಾಧ್ಯಮ ವಿಭಾಗದ ಮುಖ್ಯಸ್ಥ ನವೀನ್ ಕುಮಾರ್ ಜಿಂದಾಲ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ವಿವಿಧ ಧರ್ಮಗಳಿಗೆ ಸಂಬಂಧಿಸಿ ಸಾರ್ವಜನಿಕ ವರ್ತನೆ ಮತ್ತು ಹೇಳಿಕೆಗಳಿಗೊಂದು ಲಕ್ಷ್ಮಣ ರೇಖೆ ಇರಬೇಕು ಎಂಬುದನ್ನು ಈಗಿನ ವಿದ್ಯಮಾನವು ತೋರಿಸಿಕೊಟ್ಟಿದೆ. ಭಾರತಕ್ಕೆ ನಿಕಟವಾಗಿವೆ ಎಂದು ಪರಿಗಣಿಸಲಾದ ದೇಶಗಳ ಪ್ರತಿಭಟನೆಯ ಕಾರಣಕ್ಕಾಗಿಯೇ ಅಮಾನತು ಮತ್ತು ಉಚ್ಚಾಟನೆಯಂತಹ ಕ್ರಮ ಕೈಗೊಳ್ಳಲಾಗಿದೆ ಎಂಬುದು ಸ್ಪಷ್ಟ. ಕತಾರ್, ಕುವೈತ್ ಮತ್ತು ಇರಾನ್ ದೇಶಗಳು ಭಾರತದ ರಾಯಭಾರಿಗಳನ್ನು ಕರೆಸಿಕೊಂಡು ಹೇಳಿಕೆಯ ಬಗ್ಗೆ ತಮ್ಮ ಅಸಮಾಧಾನ ತೋರ್ಪಡಿಸಿವೆ. ಇಸ್ಲಾಮಿಕ್ ಸಹಕಾರ ಸಂಘಟನೆಯು (ಒಐಸಿ) ಹೇಳಿಕೆಯನ್ನು ಖಂಡಿಸಿದೆ. ಭಾರತದ ಉತ್ಪನ್ನಗಳನ್ನು ನಿಷೇಧಿಸಬೇಕು ಎಂದು ಸೌದಿ ಅರೇಬಿಯಾ, ಕುವೈತ್ ಸೇರಿ ಹಲವು ದೇಶಗಳಲ್ಲಿ ಕೂಗು ಕೇಳಿಬಂದಿದೆ. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಕತಾರ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿಯೇ ಆ ದೇಶವು ಹೇಳಿಕೆಯ ಬಗ್ಗೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದೆ. ಇದು ಭಾರತಕ್ಕೆ ರಾಜತಾಂತ್ರಿಕವಾಗಿ ಆಗಿರುವ ಹಿನ್ನಡೆ.

ಧರ್ಮಗಳಿಗೆ ಅಪಮಾನ ಮಾಡುವುದನ್ನು ಮತ್ತು ದ್ವೇಷ ಭಾಷಣವನ್ನು ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿ ಮಾಡಿದರೂ ಅದು ತಪ್ಪು

ನೂಪುರ್ ಅವರು ನೀಡಿದ್ದ ಆಕ್ಷೇಪಾರ್ಹ ಹೇಳಿಕೆಯ ವಿರುದ್ಧ ಕಾನ್ಪುರದಲ್ಲಿ ನಡೆದ ಪ್ರತಿಭಟನೆಯು ಹಿಂಸೆಗೆ ತಿರುಗಿತ್ತು. ಆದರೆ, ಆ ಸಂದರ್ಭದಲ್ಲಿ ಬಿಜೆಪಿಗೆ ಏನೂ ಅನ್ನಿಸಿರಲಿಲ್ಲ. ಅಲ್ಪಸಂಖ್ಯಾತ ಸಮುದಾಯಗಳು ಅದರಲ್ಲೂ ವಿಶೇಷವಾಗಿ ಮುಸ್ಲಿಮರನ್ನು ಮನಸೋಇಚ್ಛೆ ಟೀಕಿಸುವುದು ತಮಗೊಂದು ಹೆಗ್ಗಳಿಕೆಯ ವಿಚಾರ ಎಂದು ಬಿಜೆಪಿಯ ಹಲವು ಮುಖಂಡರು ಮತ್ತು ಹಿಂದುತ್ವವಾದವನ್ನು ಪ್ರತಿಪಾದಿಸುವ ಹಲವು ನಾಯಕರು ಭಾವಿಸಿದ್ದಾರೆ. ದ್ವೇಷ ಭಾಷಣ ಮಾಡುವುದಕ್ಕೆ ಇಂತಹ ಮುಖಂಡರ ನಡುವೆ ಪೈಪೋಟಿಯೇ ಇದೆ. ಇಂತಹ ವಾತಾವರಣವು ದೇಶದ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ಯೋಚಿಸದೆಯೇ ಬೇಜವಾಬ್ದಾರಿಯಿಂದ ಕೂಡಿದ ಮತ್ತು ಆಕ್ಷೇಪಾರ್ಹವಾದ ಹೇಳಿಕೆ ನೀಡುವ ಧೈರ್ಯವನ್ನು ಈ ಮುಖಂಡರಿಗೆ ಕೊಟ್ಟಿದೆ. ಈ ರೀತಿಯ ಹೇಳಿಕೆಗಳು ಮತ್ತು ಕೃತ್ಯಗಳ ಹಿಂದೆ ಇರುವುದು ಒಂದೇ ಉದ್ದೇಶ– ಬಹುಸಂಖ್ಯಾತ ಸಮುದಾಯದ ಪ್ರಾಬಲ್ಯವನ್ನು ದೃಢಪಡಿಸಿಕೊಳ್ಳಬೇಕು ಮತ್ತು ಅಲ್ಪಸಂಖ್ಯಾತರನ್ನು ಅಧೀನದಲ್ಲಿ ಇರಿಸಿಕೊಳ್ಳಬೇಕು.

ದ್ವೇಷ ಭಾಷಣಗಳನ್ನು ಆಕ್ಷೇಪಿಸಿದವರನ್ನು ಮತ್ತು ಸಹಿಷ್ಣುತೆ, ವಿವೇಕ ಬೇಕು ಎಂದು ಹೇಳಿದವರನ್ನು 'ನಗರ ನಕ್ಸಲ್' ಎಂದೋ 'ಹುಸಿ ಜಾತ್ಯತೀತವಾದಿ'ಗಳೆಂದೋ ಅಥವಾ ಇನ್ನಿತರ ಹೀನ ಬೈಗುಳ ಬಳಸಿ ಅವಮಾನಿಸಲಾಗಿದೆ. ಹಿಂದೂಯೇತರ ಧರ್ಮಗಳ ಮೇಲೆ ಕೆಸರು ಎರಚಿದ್ದನ್ನು ಸಮರ್ಥಿಸಿಕೊಳ್ಳಲು 'ಚಾರ್ಲಿ ಹೆಬ್ಡೊದಂತಹ ಪ್ರಕರಣ'ಗಳನ್ನು ಆಗೊಮ್ಮೆ ಈಗೊಮ್ಮೆ ಉಲ್ಲೇಖಿಸಲಾಗುತ್ತದೆ. ವಕ್ತಾರರ ವಿರುದ್ಧದ ಕ್ರಮದಿಂದಾಗಿ ಅಂತರರಾಷ್ಟ್ರೀಯ ಒತ್ತಡಕ್ಕೆ ಶರಣಾದಂತೆ ಆಯಿತು ಎಂದು ಕೆಲವರು ಟೀಕಿಸಿದ್ದೂ ಇದೆ. ಹಾಗೆ ನೋಡಿದರೆ, ಬಿಜೆಪಿ ಕೈಗೊಂಡ ಕ್ರಮ ಏನೇನೂ ಸಾಲದು. ಧರ್ಮಗಳಿಗೆ ಅಪಮಾನ ಮಾಡುವುದನ್ನು ಮತ್ತು ದ್ವೇಷ ಭಾಷಣವನ್ನು ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿ ಮಾಡಿದರೂ ಅದು ತಪ್ಪು ಮತ್ತು ಸ್ವೀಕಾರಾರ್ಹ ಅಲ್ಲವೇ ಅಲ್ಲ. ಅಂತರರಾಷ್ಟ್ರೀಯ ಒತ್ತಡಕ್ಕೆ ಮಣಿದು ಸರ್ಕಾರ ಕ್ರಮ ಕೈಗೊಂಡಿದೆ. ಆದರೆ ಮಾಡಬೇಕಾದದ್ದು ಇನ್ನೂ ಬಹಳವಿದೆ. ಒಐಸಿಯ ಹೇಳಿಕೆಯನ್ನು 'ಅನಪೇಕ್ಷಿತ ಮತ್ತು ದುರುದ್ದೇಶಪೂರಿತ' ಎಂದು ಭಾರತವು ಬಣ್ಣಿಸಿದೆ. ಬಿಜೆಪಿ ವಕ್ತಾರರ ಹೇಳಿಕೆಗಳಿಂದ ಅಂತರ ಕಾಯ್ದುಕೊಳ್ಳಲಾಗಿದೆ ಮತ್ತು ಪಕ್ಷವು 'ಕಠಿಣ ಕ್ರಮ' ಕೈಗೊಂಡಿದೆ ಎಂದು ಹೇಳಲಾಗಿದೆ. ಈ ಮೂಲಕ ಇಂತಹ ವಿಚಾರಗಳಲ್ಲಿ ತನ್ನ ದ್ವಂದ್ವ ನಿಲುವನ್ನು ಸರ್ಕಾರವು ಎತ್ತಿ ಹಿಡಿದಿದೆ. ದೇಶದ ಹೊರಗಿನಿಂದ ಆಕ್ಷೇಪ ವ್ಯಕ್ತವಾಗುವ ತನಕ ಸರ್ಕಾರ ಅಥವಾ ಬಿಜೆಪಿಯು ವಕ್ತಾರರ ಹೇಳಿಕೆಗಳನ್ನು ಖಂಡಿಸಿರಲಿಲ್ಲ. ಇಂತಹ ನಿಲುವೇ ದ್ವೇಷ ಭಾಷಣ ಮಾಡುವವರಿಗೆ ಉತ್ತೇಜನ ನೀಡುತ್ತದೆ. ತಮ್ಮೆಡೆಗೆ ಬೊಟ್ಟು ತೋರುವವರನ್ನು ಟೀಕಿಸುವುದು ಮತ್ತು ಅವರ ಮೇಲೆ ಪ್ರತಿದಾಳಿ ನಡೆಸುವುದು ತಪ್ಪು ಮತ್ತು ಅದರಿಂದ ಯಾವುದೇ ಉಪಯೋಗ ಇಲ್ಲ. ಅಲ್ಪಸಂಖ್ಯಾತರನ್ನು ದೇಶದೊಳಗೆ ಗೌರವಯುತವಾಗಿ ನೋಡಿಕೊಳ್ಳಲಾಗುತ್ತಿದೆ ಎಂಬುದನ್ನು ಸರ್ಕಾರ ಮತ್ತು ರಾಜಕೀಯ ಪಕ್ಷಗಳು ಖಾತರಿಪಡಿಸಬೇಕು.

ದಿನದ ಟ್ವೀಟ್

ಆಹಾರ ಸುರಕ್ಷಿತವಾಗಿರಲಿ

ರುಚಿಕರವಾಗಿದೆ ಎಂಬ ಒಂದೇ ಕಾರಣಕ್ಕೆ ನಿಮ್ಮ ಆಹಾರದ ಸುರಕ್ಷತೆಯ ವಿಚಾರದಲ್ಲಿ ಎಂದಿಗೂ ರಾಜಿಯಾಗಬೇಡಿ. ವಿಶ್ವ ಆಹಾರ ಸುರಕ್ಷತಾ ದಿನದ ಹಾರ್ದಿಕ ಶುಭಾಶಯ.

ಸ್ಟೀಫನ್ ರವೀಂದ್ರ, ಐಪಿಎಸ್ ಅಧಿಕಾರಿ

ಕಿಡಿನುಡಿ

ನೂಪುರ್ ಶರ್ಮಾ ಅವರನ್ನು ನಾನು ಯಾವ ಹಿಂಜರಿಕೆಯೂ ಇಲ್ಲದೆ ಖಂಡಿಸುತ್ತೇನೆ. ಇಸ್ಲಾಮೊಫೋಬಿಕ್ ಹೇಳಿಕೆಗಳನ್ನು ನೀಡುವ ಶರ್ಮಾ ಅವರಂತಹ ಇತರರನ್ನೂ ಖಂಡಿಸುತ್ತೇನೆ. ಹಾಗೆಯೇ, ಶರ್ಮಾ ಅವರಿಗೆ ಜೀವ ಬೆದರಿಕೆ ಒಡ್ಡಿರುವವರನ್ನೂ ನಾನು ಖಂಡಿಸುತ್ತೇನೆ.



ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ
ಭಾನುವಾರ, 8-6-1997

• ಜನತಾದಳ ಕಾರ್ಯಕಾರಿಣಿ ಸಭೆಗೆ ಕೋರ್ಟ್ ತಡೆ

ನವದೆಹಲಿ, ಜೂನ್ 7– ನ್ಯಾಯಾಲಯದ ಕಟಕಟೆ ಹತ್ತಿದ, ನಾಳಿದ್ದು ನಡೆಯಬೇಕಿದ್ದ ವಿವಾದಿತ ಜನತಾದಳ ಅಧ್ಯಕ್ಷ ಚುನಾವಣೆಯನ್ನು ದೆಹಲಿ ಹೈಕೋರ್ಟ್ ಜೂನ್ 18ಕ್ಕೆ ಮುಂದೂಡಿತು. ಈ ಮಧ್ಯೆ ದಳದ ಅಧ್ಯಕ್ಷ ಹಾಗೂ ಅಭ್ಯರ್ಥಿ ಲಾಲೂ ಪ್ರಸಾದ್ ಯಾದವ್ ಅವರು ನಾಳೆ ಕರೆದಿದ್ದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಗೆ ದೆಹಲಿ ಜಿಲ್ಲಾ ಮಟ್ಟದ ನ್ಯಾಯಾಲಯ ತಡೆ ನೀಡಿದ್ದರಿಂದ ಸದ್ಯಕ್ಕೆ ಗೊಂದಲ ನಿವಾರಣೆಯಾದಂತಾಗಿದೆ.

ಈ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಲಾಲೂ ಪ್ರಸಾದ್ ಯಾದವ್ ಆಗಲಿ ಇಲ್ಲವೇ ಶರದ್ ಯಾದವ್ ಅವರಾಗಲಿ ಯಾವುದೇ ರೀತಿಯಲ್ಲೂ ತಲೆ ಹಾಕಕೂಡದು ಎಂದು ನ್ಯಾಯಮೂರ್ತಿಗಳು ಎಚ್ಚರಿಸಿದ್ದಾರೆ. ಗೊಂದಲ ಮತ್ತು ವಿವಾದಕ್ಕೆ ಸಿಲುಕಿದ್ದ ಜನತಾದಳದ ಅಧ್ಯಕ್ಷ ಚುನಾವಣೆ ಮೇಲಿನ ಪೂರ್ಣ ನಿಯಂತ್ರಣವನ್ನು ಈಗ ನ್ಯಾಯಾಲಯ ತನ್ನ ವಶಕ್ಕೆ ತೆಗೆದುಕೊಂಡಂತಾಯಿತು.

• ಪಿಸಿಸಿ ಅಧ್ಯಕ್ಷತೆಗೆ ಬಂಗಾರಪ್ಪ, ಮೊಯಿಲಿ, ಧರ್ಮಸಿಂಗ್ ಸ್ಪರ್ಧೆ

ಬೆಂಗಳೂರು, ಜೂನ್ 7– ಪ್ರದೇಶ ಕಾಂಗ್ರೆಸ್ (ಪಿಸಿಸಿ) ಅಧ್ಯಕ್ಷ ಸ್ಥಾನಕ್ಕೆ ಹಾಲಿ ಅಧ್ಯಕ್ಷ ಧರ್ಮಸಿಂಗ್ ಅವರಲ್ಲದೆ ಮಾಜಿ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪ, ವೀರಪ್ಪ ಮೊಯಿಲಿ ಅವರು ಸ್ಪರ್ಧಿಸುವುದು ಬಹುತೇಕ ಖಚಿತವಾಗಿದ್ದು, ಇದರಿಂದ ತ್ರಿಕೋನ ಸ್ಪರ್ಧೆ ನಡೆಯುವ ಸಂಭವವಿದೆ. ಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಜೂನ್ 10ರಂದು ಚುನಾವಣೆ ನಡೆಯಲಿದೆ.

50 ವರ್ಷಗಳ ಹಿಂದೆ
ಗುರುವಾರ, 8-6-1972

• 29ನೇ ಸಂವಿಧಾನ ತಿದ್ದುಪಡಿ ಮಸೂದೆ ವಾಪಸ್: ಕೇಂದ್ರ ನಿರ್ಧಾರ

ನವದೆಹಲಿ, ಜೂನ್ 7– ಈ ವರ್ಷದ ಆದಿಯಲ್ಲಿ ಸಂಸತ್ತಿನಲ್ಲಿ ಮಂಡಿಸಲಾದ 29ನೇ ಸಂವಿಧಾನ ತಿದ್ದುಪಡಿ ಮಸೂದೆ ಹಿಂತೆಗೆದುಕೊಳ್ಳಲು ಕೇಂದ್ರ ಸಚಿವ ಸಂಪುಟದ ಸಭೆ ಇಂದು ನಿರ್ಧರಿಸಿದೆ.

ಹಿಂದಿನ ಶಾಸನಗಳಲ್ಲಿನ ಭೂ ಹಿಡುವಳಿ ಮೇಲಿನ ಮಿತಿಯನ್ನು ಮತ್ತಷ್ಟು ತಗ್ಗಿಸುವುದಕ್ಕೆ ಸಂಬಂಧಿಸಿದ ಭೂ-ಶಾಸನಗಳಿಗೆ ರಕ್ಷಣೆ ನೀಡುವುದೇ ಈ ತಿದ್ದುಪಡಿ ಮಸೂದೆ ಉದ್ದೇಶವಾಗಿತ್ತು.

ಜಮೀನು ವಶಪಡಿಸಿಕೊಳ್ಳಲಾದ ಮಾಲೀಕರಿಗೆ ಪರಿಹಾರ ನೀಡುವ ಪ್ರಶ್ನೆ ಸಮಯದಲ್ಲಿ ಕಾನೂನು ತಜ್ಞರಲ್ಲಿ ಭಿನ್ನಾಭಿಪ್ರಾಯ ಉಂಟಾಗಿದೆ.

• ಆಡಳಿತ ಸುಧಾರಣೆಗೆ ಸೂಚನೆ

ಬೆಂಗಳೂರು, ಜೂನ್ 7– ಬೆಂಗಳೂರು ವಿಶ್ವವಿದ್ಯಾಲಯದ ವ್ಯವಹಾರಗಳ ಬಗೆಗೆ ಸಾಮ್ಯುಯಲ್ ಮಥಾಯ್ ವರದಿಯನ್ನು ಸರ್ಕಾರವಿನ್ನೂ ಪರಿಶೀಲಿಸಬೇಕಾಗಿದ್ದರೂ ಕುಲಪತಿ ಶ್ರೀ ಮೋಹಲಾಲ್ ಸುಖಾಡಿಯಾ ಅವರ ಸೂಚನೆ ಪ್ರಕಾರ ವಿಶ್ವವಿದ್ಯಾಲಯದ ಆಡಳಿತದ ಸಂಬಂಧದಲ್ಲಿ ಅದರ ಕೆಲವು ನಿರ್ದಿಷ್ಟ ಶಿಫಾರಸುಗಳನ್ನು ಕಾರ್ಯಗತಗೊಳಿಸಲು ವಿಶ್ವವಿದ್ಯಾಲಯದ ಅಧಿಕಾರಿಗಳು ನಿರ್ಧರಿಸಿದ್ದಾರೆ. ತತ್‌ಕ್ಷಣ ಕ್ರಮ ಕೈಗೊಳ್ಳಬೇಕಾದ ನಿರ್ದಿಷ್ಟ ವಿಷಯಗಳನ್ನು, ವಿಶೇಷ ಸಿಬ್ಬಂದಿ ವರ್ಗದ ಕೆಲವರ ವಿರುದ್ಧ ಶಿಸ್ತುಕ್ರಮ ಕುರಿತು, ಸುಖಾಡಿಯಾ ಅವರು ಪಟ್ಟಿ ಮಾಡಿ ವಿಶ್ವವಿದ್ಯಾಲಯಕ್ಕೆ ಬರೆದು ತಿಳಿಸಿದ್ದಾರೆಂದು ಗೊತ್ತಾಗಿದೆ.

ಹಿತಾಸಕ್ತಿ ಸಂಘರ್ಷ, ಅವ್ಯವಸ್ಥೆ, ಭ್ರಷ್ಟಾಚಾರದಲ್ಲಿ ನಲುಗಿರುವ ಕ್ರೀಡಾಕ್ಷೇತ್ರ

ಕ್ರೀಡೆಯೊಳಗಣ ಪೀಡೆಗೆ ಪರಿಹಾರ ಸಿಒಎ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

'ಭಾರತದ ಕ್ರೀಡೆಗೆ ಹಿತಾಸಕ್ತಿ ಸಂಘರ್ಷ ಎಂಬುದು ದೊಡ್ಡ ಶಾಪ. ಇದು ದೇಶದ ಕ್ರೀಡಾಕ್ಷೇತ್ರದ ಬೆಳವಣಿಗೆಗೆ ದೊಡ್ಡ ತೊಡಕಾಗಿದೆ. ಬಹುತೇಕ ಎಲ್ಲ ಫೆಡರೇಷನ್‌ಗಳಲ್ಲಿಯ ಅವ್ಯವಸ್ಥೆ, ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರಗಳಿಗೆ ಈ ಹಿತಾಸಕ್ತಿಯೇ ಮೂಲಸೆಲೆ'–

ಭಾರತ ಟೇಬಲ್ ಟೆನಿಸ್ ಫೆಡರೇಷನ್‌ನಲ್ಲಿ ಆಡಳಿತ ಸುಧಾರಣೆ ಮತ್ತು ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸಲು ದೆಹಲಿ ಹೈಕೋರ್ಟ್ ನೇಮಕ ಮಾಡಿರುವ ಆಡಳಿತ ಸಮಿತಿ (ಸಿಒಎ) ಮುಖ್ಯಸ್ಥೆ, ನಿವೃತ್ತ ನ್ಯಾಯಮೂರ್ತಿ ಗೀತಾ ಮಿತ್ತಲ್ ಅವರ ಮಾತುಗಳಿವು.

ರಾಜ್ಯ ಟಿ.ಟಿ ಸಂಸ್ಥೆಯೊಂದರ ಕಾರ್ಯದರ್ಶಿ ಆಗಿದ್ದವರೇ ರಾಷ್ಟ್ರೀಯ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಅವರನ್ನು ಪದಚ್ಯುತಗೊಳಿಸಲಾಗಿದೆ ಎಂಬ ಮಾಹಿತಿಯನ್ನೂ ಅವರು ನೀಡುತ್ತಾರೆ. ಇದು ಒಂದು ಉದಾಹರಣೆಯಷ್ಟೆ. ಇಂತಹ ಹಲವಾರು ಕಥನಗಳು ಪ್ರತಿಯೊಂದು ಫೆಡರೇಷನ್‌ನಲ್ಲಿಯೂ ಇವೆ. ವಂಶಾಡಳಿತವೇ ಹಾಸುಹೊಕ್ಕಾಗಿರುವ ಫೆಡರೇಷನ್‌ಗಳೂ ಇವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ದಶಕಗಳ ಹಿಂದೆ ಪ್ರತಿಷ್ಠೆ, ಹೆಸರು ಹಾಗೂ ಯುವ ಸಮೂಹದಲ್ಲಿ ಛಾಪು ಮೂಡಿಸುವ ಸಲುವಾಗಿ ಕ್ರೀಡಾ ಫೆಡರೇಷನ್‌ಗಳ ಪದಾಧಿಕಾರಿಗಳಾಗುತ್ತಿದ್ದ ರಾಜಕಾರಣಿಗಳಿದ್ದರು. ಆದರೆ, ಈಗ ಭಾರತದ ಕ್ರೀಡಾಲೋಕ ಬದಲಾಗಿದೆ. ಕ್ರಿಕೆಟ್ ಅಲ್ಲದೆ ಬೇರೆ ಬೇರೆ ಕ್ರೀಡೆಗಳಲ್ಲಿಯೂ ತಾರೆಗಳು ಉದಯಿಸುತ್ತಿದ್ದಾರೆ. ಕಾರ್ಪೊರೇಟ್ ಸಂಸ್ಥೆಗಳು ಪ್ರಾಯೋಜಕತ್ವ ನೀಡಲು ಮುಂದಾಗಿವೆ. ಮೆಲ್ಲಗೆ ಹಣದ ಒಳಹರಿವು ಹೆಚ್ಚಾಗಿದೆ. ಇದು ಪಟ್ಟಭದ್ರರಿಗೆ ಮತ್ತೊಂದು ಆಕರ್ಷಣೆಯಾಗಿರುವುದು ಸುಳ್ಳಲ್ಲ.

ಆದರೆ, ಇದರಿಂದಾಗಿ ಕ್ರೀಡೆಗಳಲ್ಲಿ ನಿಜವಾದ ಪ್ರತಿಭೆಗಳಿಗೆ ಅನ್ಯಾಯ ಆಗುತ್ತಿರುವುದರ ವಿರುದ್ಧ ದನಿಯೆತ್ತುವ ದಿಟ್ಟ ಕ್ರೀಡಾಪಟುಗಳು ಇರುವುದು ಹೊಸ ಕ್ರಾಂತಿಗೆ ದಾರಿ ಮಾಡಿಕೊಡುತ್ತಿದೆ. ತಮ್ಮ ಕೋಚ್ ವಿರುದ್ಧ ದೂರು ದಾಖಲಿಸಿದ ಒಲಿಂಪಿಯನ್ ಮಣಿಕಾ ಬಾತ್ರಾ ಅವರಿಂದಾಗಿ ಟಿಟಿಎಫ್‌ಐನಲ್ಲಿ ಆಡಳಿತ ಸುಧಾರಣೆಗೆ ಡೆಲ್ಲಿ ಹೈಕೋರ್ಟ್ ಗಮನ ಹರಿಸಿತು. 2011ರ ರಾಷ್ಟ್ರೀಯ ಕ್ರೀಡಾ ನೀತಿ ಸಮರ್ಪಕವಾಗಿ ಜಾರಿಯಾಗಿಲ್ಲ ಎಂಬ ಸತ್ಯ ಕಣ್ಣಿಗೆ ರಾಚಿತು. ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಲಯವು ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಬಿಸಿ ಮುಟ್ಟಿಸಿತು. ನೀತಿಯನ್ನು ಜಾರಿಗೊಳಿಸದ ಫೆಡರೇಷನ್‌ಗಳನ್ನು ಅಮಾನತಿನಲ್ಲಿಡಲು ಆದೇಶಿಸಿತು. ಇದರಿಂದಾಗಿ ಫುಟ್‌ಬಾಲ್ ಫೆಡರೇಷನ್‌ನ ದೀರ್ಘಕಾಲದ ಮುಖ್ಯಸ್ಥ ಪ್ರಫುಲ್ ಪಟೇಲ್ ಮತ್ತು ಹಾಕಿ ಇಂಡಿಯಾದ ನರಿಂದರ್ ಬಾತ್ರಾ ಅವರೂ ಅಧಿಕಾರ ಕಳೆದುಕೊಂಡಿದ್ದಾರೆ. ಈ ಎರಡೂ ಫೆಡರೇಷನ್‌ಗಳಿಗೆ ಸಿಒಎ ನೇಮಕ ಮಾಡಲಾಗಿದೆ. ಫೆಬ್ರುವರಿಯಿಂದ ಇಲ್ಲಿಯವರೆಗೆ ಒಟ್ಟು ಮೂರು ಫೆಡರೇಷನ್‌ಗಳಿಗೆ ಈ ಸಿಒಎ ನೇಮಕವಾಗಿದೆ.

ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಗಳು ಈಗ ಫೆಡರೇಷನ್‌ಗಳಲ್ಲಿ ಇಷ್ಟು ವರ್ಷಗಳಿಂದ ಜಡ್ಡುಗಟ್ಟಿರುವ ವ್ಯವಸ್ಥೆಯನ್ನು ಸರಿಪಡಿಸುವ ಹಾದಿಯಲ್ಲಿವೆ. ಅದಕ್ಕಾಗಿ ಬಾಹ್ಯ ಒತ್ತಡಗಳನ್ನೂ ಎದುರಿಸುತ್ತಿವೆ. ಇವೆಲ್ಲವುಗಳ ನಡುವೆಯೇ ಈ ಎಲ್ಲ ಕಸರತ್ತುಗಳಿಂದ ಕ್ರೀಡೆಗಳಿಗೆ ಮತ್ತು ಕ್ರೀಡಾಪಟುಗಳ ಕಲ್ಯಾಣಕ್ಕೆ ಸಂಪೂರ್ಣ ಲಾಭವಾಗಲಿದೆಯೇ ಎಂಬ ಪ್ರಶ್ನೆಯೂ ಕಾಡುತ್ತಿದೆ.

ಏಕೆಂದರೆ, ಭಾರತದ ಕ್ರೀಡಾರಂಗದಲ್ಲಿ ಅತಿದೊಡ್ಡ 'ಆಡಳಿತ ಸ್ವಚ್ಛತೆ' ಪ್ರಕ್ರಿಯೆ ನಡೆದಿದ್ದು ಕ್ರಿಕೆಟ್‌ನಲ್ಲಿ. ಅದೇ ಮಾದರಿಯಲ್ಲಿ ಈಗ ಉಳಿದ ಕ್ರೀಡೆಗಳಿಗೂ ಸಿಒಎ ನೇಮಕ ಮಾಡಲಾಗುತ್ತಿದೆ. ಬಿಹಾರದ ರಾಜ್ಯ ಕ್ರಿಕೆಟ್ ಸಂಸ್ಥೆಯ ಮಾಜಿ ಮುಖ್ಯಸ್ಥ ಆದಿತ್ಯ ವರ್ಮಾ ಆಗಿನ ಬಿಸಿಸಿಐ ಅಧ್ಯಕ್ಷ ಎನ್.ಶ್ರೀನಿವಾಸನ್ ಅವರ ವಿರುದ್ಧ ಹಾಕಿದ ಮೊಕದ್ದಮೆಯು ದೊಡ್ಡ ಬದಲಾವಣೆಗೆ ನಾಂದಿ ಹಾಡಿತು. ಶ್ರೀನಿವಾಸನ್ ಅಧಿಕಾರ ಕಳೆದುಕೊಂಡ ನಂತರ ಬಿಸಿಸಿಐ ಅಧ್ಯಕ್ಷರಾಗಿದ್ದ ಅನುರಾಗ್ ಠಾಕೂರ್ (ಈಗ ಕೇಂದ್ರ ಕ್ರೀಡಾ ಸಚಿವ) ಅವರನ್ನು 2017ರಲ್ಲಿ ಪದಚ್ಯುತಗೊಳಿಸಿದ್ದ ಸುಪ್ರೀಂ ಕೋರ್ಟ್, ವಿನೋದ್ ರಾಯ್ ನೇತೃತ್ವದ ಆಡಳಿತ ಸಮಿತಿಯನ್ನು ನೇಮಕ ಮಾಡಿತ್ತು.

ಸುಪ್ರೀಂ ಕೋರ್ಟ್ ನೇಮಕ ಮಾಡಿದ ಆಡಳಿತ ಸಮಿತಿಯು ಹೊಸ ನಿಯಮಾವಳಿಯನ್ನು (ನಿವೃತ್ತ ನ್ಯಾಯಮೂರ್ತಿ ಆರ್.ಎಂ.ಲೋಧಾ ಸಮಿತಿ ಶಿಫಾರಸುಗಳ ಮೇರೆಗೆ ರಚಿತ) ಎರಡು ವರ್ಷಗಳ ಕಾಲ ಕಾರ್ಯನಿರ್ವಹಿಸಿ ಜಾರಿಗೊಳಿಸಿತು. ಮಾಜಿ ಮಹಾಲೇಖಪಾಲ ವಿನೋದ್ ರಾಯ್, ಇತಿಹಾಸಕಾರ ರಾಮಚಂದ್ರ ಗುಹಾ, ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಡಯಾನಾ ಎಡುಲ್ಜಿ ಮತ್ತು ಆರ್ಥಿಕ ತಜ್ಞ ವಿಕ್ರಂ ಲಿಮಯೆ ಅವರು ಈ ಸಮಿತಿಯಲ್ಲಿದ್ದರು. ಕೆಲಕಾಲದ ನಂತರ ಗುಹಾ ಮತ್ತು ಲಿಮಯೆ ರಾಜೀನಾಮೆ ನೀಡಿದ್ದರು. ಹಲವು ಅಡೆತಡೆಗಳ ನಡುವೆಯೂ ಪರಿಷ್ಕೃತ ನಿಯಮಾವಳಿಯನ್ನು ಜಾರಿಗೊಳಿಸಿದ್ದ ಸಿಒಎ, ಚುನಾಯಿತ ಮಂಡಳಿಗೆ ಅಧಿಕಾರ ಕೊಟ್ಟು ನಿರ್ಗಮಿಸಿತ್ತು.

ಆದರೆ, ನೂತನ ನಿಯಮದ ಪ್ರಕಾರ, ಆಗ ಅಧಿಕಾರದ ಗದ್ದುಗೆಯೇರಿದ್ದ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರ ಅವಧಿಯು 2020ರಲ್ಲಿಯೇ ಮುಗಿದು ಹೋಗಿದೆ. ನಿಯಮಗಳ ಪರಿಷ್ಕರಣೆಗೆ ಅನುಮತಿ ಕೋರಿ ಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯ ನೆಪದಲ್ಲಿಯೇ ಇವರಿಬ್ಬರೂ ತಮ್ಮ ಸ್ಥಾನಗಳಲ್ಲಿ ಮುಂದುವರಿದಿದ್ದಾರೆ. ಇದರೊಂದಿಗೆ ನಿಯಮಾವಳಿಯನ್ನು ಬುಡಮೇಲು ಮಾಡುವತ್ತ ಮೊದಲ ಹೆಜ್ಜೆಯಿಟ್ಟಂತಾಗಿದೆ. ಆಟಗಾರರ ವ್ಯವಹಾರಗಳನ್ನು ನಿರ್ವಹಿಸುವ ವೃತ್ತಿಪರ ಕಂಪನಿಗಳನ್ನು ನಡೆಸುವ ಮಾಜಿ ಆಟಗಾರರೊಬ್ಬರು ಕಾಮೆಂಟ್ರಿ ತಂಡದಲ್ಲಿ ಸದಾ ಇರುತ್ತಾರೆಂದು ತಾವು ರಾಜೀನಾಮೆ ನೀಡುವ ಸಂದರ್ಭದಲ್ಲಿ ರಾಮಚಂದ್ರ ಗುಹಾ ಆರೋಪಿಸಿದ್ದರು. ಅಂತಹವರು ಈಗಲೂ ಬಿಸಿಸಿಐ ಆಯಕಟ್ಟಿನ ಸ್ಥಳಗಳಲ್ಲಿ ಮುಂದುವರಿದಿದ್ದಾರೆ ಎನ್ನುವುದು ಸುಳ್ಳಲ್ಲ. ರಾಜಕಾರಣಿಗಳ ಹಸ್ತಕ್ಷೇಪವನ್ನು ದೂರ ಇಡಬೇಕು ಎಂಬ ನಿಯಮವಿದೆ. ಆದರೆ ಪ್ರಭಾವಿ ರಾಜಕಾರಣಿಗಳ ಮಕ್ಕಳು ತಮ್ಮ ಮಕ್ಕಳನ್ನು ಮಂಡಳಿ, ರಾಜ್ಯಸಂಸ್ಥೆಗಳ ದೊಡ್ಡ ಸ್ಥಾನಗಳಲ್ಲಿ ಕೂರಿಸಿದ್ದಾರೆ. ಆ ಮೂಲಕ ಪರೋಕ್ಷವಾಗಿ ತಮ್ಮ ಪ್ರಭಾವವನ್ನು ಮಂಡಳಿಯಲ್ಲಿ ಉಳಿಸಿಕೊಂಡಿದ್ದಾರೆ. ದೆಹಲಿಯ ಸಂಸದರೂ ಆಗಿರುವ ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಈಚೆಗೆ ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ಮೆಂಟರ್ ಆಗಿ ಡಗ್‌ಔಟ್‌ನಲ್ಲಿದ್ದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಬಿಸಿಸಿಐ ಸರ್ಕಾರದಿಂದ ಅನುದಾನ ಪಡೆಯುತ್ತಿಲ್ಲ. ಸ್ವಾಯತ್ತ ಮತ್ತು ಶ್ರೀಮಂತ ಕ್ರೀಡಾ ಸಂಸ್ಥೆಯೆಂಬ ಹಮ್ಮು ಈ ಮಂಡಳಿಗೆ ಇದೆ. ಅದರಿಂದಾಗಿ ಈ ಮಂಡಳಿಯ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ, ಉಳಿದ ಕ್ರೀಡಾ ಫೆಡರೇಷನ್‌ಗಳಿಗೆ ಕೋಟ್ಯಂತರ ರೂಪಾಯಿ ಅನುದಾನವನ್ನು ಕ್ರೀಡಾ ಇಲಾಖೆ ನೀಡುತ್ತಿದೆ. ಆದರೂ ಒಂದು ದಶಕದಿಂದಲೂ ನಿಯಮ ಜಾರಿಗೊಳಿಸದ ಈ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿ ಸದಿರುವುದರ ಹಿಂದಿನ ಮರ್ಮವೇನೆಂಬುದು ಬಹಳಷ್ಟು ಜನರಿಗೆ ಗೊತ್ತೇ ಇದೆ. ಅದಕ್ಕಾಗಿ ಮತ್ತೆ ನ್ಯಾಯಾಂಗವೇ ಮಧ್ಯಪ್ರವೇಶಿಸಿರುವುದು ಆಡಳಿತಾಂಗದ ವೈಫಲ್ಯವೇ ಅಲ್ಲವೇ?

ಕ್ರೀಡಾ ಆಡಳಿತದಲ್ಲಿ ಪಾರದರ್ಶಕ ವ್ಯವಸ್ಥೆ ಜಾರಿಗೊಳಿಸುವುದು ತಮ್ಮ ಧ್ಯೇಯ ಎಂದು ಸಿಒಎಗಳು ಹೇಳುತ್ತಿವೆ. ಆದರೆ, ಈ ಹಾದಿಯಲ್ಲಿ ವಿವೇಚನೆಯೊಂದಿಗೆ ಈ ಸಮಿತಿಗಳು ಕಾರ್ಯನಿರ್ವಹಿಸಬೇಕಾದ ಅಗತ್ಯವೂ ಇದೆ. ತಂಡಗಳ ಆಯ್ಕೆ, ತರಬೇತುದಾರರ ನೇಮಕ ಇತ್ಯಾದಿ ಚಟುವಟಿಕೆಗಳನ್ನು ಆಯಾ ಕ್ರೀಡೆಗಳ ಪರಿಣತರಿಗೆ ವಹಿಸುವುದೇ ಸೂಕ್ತ. ಕಾಮನ್‌ವೆಲ್ತ್ ಗೇಮ್ಸ್‌ಗಾಗಿ ಆಯ್ಕೆ ಮಾಡಲಾಗಿರುವ ಟಿಟಿ ತಂಡದ ಆಯ್ಕೆ ಸಮಿತಿಯಲ್ಲಿ ಮಾಜಿ ಡೆಕಾಥ್ಲಾನ್ ಅಥ್ಲೀಟ್ ಎಸ್‌ಡಿ ಮೌದ್ಗಿಲ್ ಅವರನ್ನು ನೇಮಕ ಮಾಡಿದ್ದು ಈಗ ವಿವಾದಕ್ಕೆ ಕಾರಣವಾಗಿದೆ. ಆಟಗಾರ್ತಿ ದಿಯಾ ಚಿತಳೆ ಮತ್ತು ಆಟಗಾರ ಮನುಷ್ ಶಾ ತಮ್ಮನ್ನು ಮೀಸಲು ಆಟಗಾರರನ್ನಾಗಿ ನೇಮಕ ಮಾಡಿರುವುದು ಅಸಮರ್ಪಕ ಎಂದು ಆರೋಪಿಸಿ ಕೋರ್ಟ್ ಮೆಟ್ಟಿಲೇರಿದ್ದರು. ಈ ರೀತಿಯ ಬೆಳವಣಿಗೆಗಳಿಂದ ಸಮಿತಿಗಳ ವಿಶ್ವಾಸಾರ್ಹತೆಗೆ ಧಕ್ಕೆ ಬರುವ ಸಾಧ್ಯತೆ ಇದೆ. ಆ ರೀತಿಯಾದರೆ ಕ್ರೀಡಾ ನೀತಿಯ ಜಾರಿಗೆ ಹಿನ್ನಡೆಯಾಗುತ್ತದೆ. ಅದರಿಂದಾಗಿ ಕ್ರೀಡಾಪಟುಗಳೇ ಆಯಾ ಕ್ರೀಡೆಗಳ ಆಡಳಿತದ ಚುಕ್ಕಾಣಿ ಹಿಡಿದು, ರಾಷ್ಟ್ರ, ರಾಜ್ಯ ಸಂಸ್ಥೆಗಳಲ್ಲಿ ಹಲವು ವರ್ಷಗಳಿಂದ ಇರುವ ಪಟ್ಟಭದ್ರರನ್ನು ಕಿತ್ತೊಗೆಯುವ ಕಾರ್ಯ ಈಡೇರುವುದು ಕಷ್ಟವಾಗಬಹುದು. ಪುರುಷ, ಮಹಿಳೆಯರಿಗೆ ಸಮಾನ ನಗದು ಪುರಸ್ಕಾರ, ತರಬೇತಿ ಸೌಲಭ್ಯ, ಪ್ರತಿಭಾಶೋಧದಲ್ಲಿ ಪಾರದರ್ಶಕತೆ ತರುವ ಉದ್ದೇಶಗಳೂ ಈಡೇರುವುದಿಲ್ಲ.

ಚುರುಮುರಿ

ಬೈಯ್ಯೋಗ್ರಫಿ

• ಮಣ್ಣೆರಾಜು

'ನಮ್ಮ ಮಹನೀಯರು ಕತೆ, ಕವನದಂಥ ಬರಹಗಳ ಜೊತೆ ತಮ್ಮ ಬಯಾಗ್ರಫಿಯನ್ನೂ ಬರೆಯಬೇಕಾಗಿತ್ತೂರೀ, ಅವರ ಚರಿತ್ರೆಯನ್ನು ಇನ್ಯಾರೋ ಬರೆದು, ಅದು ಸರಿಯಿಲ್ಲ ಅಂತ ಮತ್ಯಾರೋ ಹೇಳಿ ಗೊಂದಲ ಆಗುವುದು ತಪ್ಪುತ್ತಿತ್ತು' ಅಂದಳು ಸುಮಿ.

'ಹೌದು, ಮುಂದೆ ಪಠ್ಯವಾಗಬಹುದಾದ ಮಹನೀಯರು ಈಗಲಾದರೂ ತಮ್ಮ ಚರಿತ್ರೆಯನ್ನು ತಾವೇ ಬರೆಯಬೇಕು. ಆಗ ಇತಿಹಾಸ ತಿರುಚುವುದು, ಚರಿತ್ರೆಯನ್ನು ಪರಚುವುದು ತಪ್ಪುತ್ತದೆ. ಮುಖ್ಯವಾಗಿ ರಾಜಕಾರಣಿಗಳು ಬೈದಾಡಿಕೊಳ್ಳುವುದು ತಪ್ಪುತ್ತದೆ' ಎಂದ ಶಂಕ್ರಿ.

'ಅದಕ್ಕಿಂತ ಮುಖ್ಯವಾಗಿ ರಾಜಕಾರಣಿಗಳು ತಮ್ಮ ಬೈಯ್ಯೋಗ್ರಫಿಯನ್ನು ಬದಲಾಯಿಸಿಕೊಳ್ಳಬೇಕು. ಅವರು ಅಸಂವಿಧಾನಾತ್ಮಕ ಪದ ಬಳಸಿ ಬೈದಾಡುವುದನ್ನು ಕೇಳಲಾಗುತ್ತಿಲ್ಲ...' ಟಿ.ವಿ. ನ್ಯೂಸ್ ಆಫ್ ಮಾಡಿದಳು.

'ಸಂವಿಧಾನಬದ್ಧ ಬೈಗುಳ ಅಂತ ಯಾವುದೂ ಇಲ್ಲ. ಆಡಳಿತ ಪಕ್ಷ, ವಿರೋಧ ಪಕ್ಷಗಳು ಅತ್ತೆ, ಸೊಸೆ ಇದ್ದಂತೆ ಬೈದಾಡಿಕೊಂಡು ಬಾಳ್ವೆ ಮಾಡಬೇಕು'.

'ಸಾರ್ವಜನಿಕವಾಗಿ ಬೈಯ್ಯುವಾಗ ಆರೋಗ್ಯಕರ ಬೈಗುಳ ಬಳಸಬೇಕು ಅಲ್ಲವೇನ್ರೀ?'

'ಆಗಬಹುದು, ಆದರೆ ಆನಂದಕರ, ಆಹ್ಲಾದಕರ, ಹಿತಕರವಾದ ಬೈಗುಳಗಳಿಲ್ಲ, ನೋವಾಗಲಿ ಅನ್ನುವ ಉದ್ದೇಶದಿಂದಲೇ ಬೈಯ್ಯುತ್ತಾರೆ'.

'ಏನೋಪ್ಪಾ, ವೇದಿಕೆ, ಮೈಕು ಸಿಕ್ಕಿಬಿಟ್ಟರೆ ರಾಜಕಾರಣಿಗಳು ಎದುರಾಳಿಗಳನ್ನು ಬೈದು ಅವರ ಬಣ್ಣ ಬಯಲು ಮಾಡಿಬಿಡ್ತಾರೆ'.

'ಎದುರು ಪಕ್ಷದವರನ್ನು ಎದುರಿಸಲು ಬೈಗುಳವೇ ಅಸ್ತ್ರವಾಗಿರುವಾಗ ರಾಜಕಾರಣಿಗಳು ಬೈಯ್ಯುವ ಸಾಮರ್ಥ್ಯ ಬೆಳೆಸಿಕೊಳ್ಳಬಹುದು. ಇಲ್ಲವಾದರೆ ಅಸಹಾಯಕ, ದುರ್ಬಲ ಎಂದು ಪಕ್ಷದ ನಾಯಕರು, ಬೆಂಬಲಿಗರು ಕಡೆಗಣಿಸಬಹುದು ಅನ್ನೋ ಆತಂಕ ಅವರಿಗಿರಬಹುದು. ಈಗಂತೂ ರಾಜಕಾರಣಿಗಳ ಮೈಮೇಲೆ ಎಲೆಕ್ಷನ್ ದೇವರು ಬಂದಿದೆ, ಅವರನ್ನು ಕಂಟ್ರೋಲ್ ಮಾಡೋದು ಕಷ್ಟ. ಬೈಗುಳವನ್ನು ಮನರಂಜನೆ ಅಂದುಕೊಂಡು ಆನಂದಿಸು...' ಎಂದು ಶಂಕ್ರಿ ಸಮಾಧಾನ ಹೇಳಿದ.

ಸಂಗತ

ಸರ್ಕಾರಿ ಶಾಲೆಯ ಉಜ್ವಲ ಮಾದರಿ

ಸ್ಥಳೀಯ ಸಮುದಾಯವು ಸರ್ಕಾರದ ಜೊತೆ ಸಕ್ರಿಯ ಸಹಭಾಗಿತ್ವ ಹೊಂದುವುದರಿಂದ ಸರ್ಕಾರಿ ಶಾಲೆಯು ಪ್ರಗತಿಯ ಮೆಟ್ಟಿಲು ಏರಲು ಸಾಧ್ಯ

• ಡಾ. ಎಚ್.ಬಿ.ಚಂದ್ರಶೇಖರ್

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ರಾಜ್ಯದ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯ ಅವಲೋಕನವು ಕುತೂಹಲಕಾರಿಯಾಗಿದೆ. 2011- 12ರಿಂದ 2021- 22ನೇ ಸಾಲಿನವರೆಗಿನ ಅವಧಿಯಲ್ಲಿ ಒಂದರಿಂದ ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳ ಒಟ್ಟು ದಾಖಲಾತಿಯಲ್ಲಿ ಐದೂವರೆ ಲಕ್ಷದಷ್ಟು ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ.

ಈ ಹತ್ತು ವರ್ಷಗಳಲ್ಲಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಕಡಿಮೆಯಾಗಿದ್ದರೆ, ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದೆ. ಆದರೆ ಕೊರೊನಾದ ಎರಡು ವರ್ಷಗಳ ಕಾಲಘಟ್ಟದಲ್ಲಿ, ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ 4.22 ಲಕ್ಷದಷ್ಟು ಹೆಚ್ಚು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿದ್ದಾರೆ. ಇದೇ ಅವಧಿಯಲ್ಲಿ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ 1.33 ಲಕ್ಷದಷ್ಟು ವಿದ್ಯಾರ್ಥಿಗಳು ಕಡಿಮೆ ಆಗಿದ್ದಾರೆ. ಅದೇ ರೀತಿ ಈ ಎರಡು ವರ್ಷಗಳಲ್ಲಿ ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 38,629ರಷ್ಟು ಕಡಿಮೆ ಆಗಿದೆ.

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ ಅಡಿ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಉಚಿತವಾಗಿ ದಾಖಲಿಸಲು ಅವಕಾಶ ಕಲ್ಪಿಸಿದ್ದು, 2012- 13ನೇ ಸಾಲಿನಿಂದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣದಲ್ಲಿ ಕುಸಿತವಾಗಲು ಕಾರಣವಾಯಿತು. ರಾಜ್ಯದಲ್ಲಿ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ– 2009ರ ಅಡಿ 2012- 13ನೇ ಸಾಲಿನಿಂದ 2021- 22ನೇ ಸಾಲಿನವರೆಗೆ ಒಟ್ಟು 6,54,628 ವಿದ್ಯಾರ್ಥಿಗಳು ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ದಾಖಲಾಗಿದ್ದರು.

2019- 20ನೇ ಸಾಲಿನಿಂದ ಅನ್ವಯವಾಗುವಂತೆ ಮಕ್ಕಳ ವಾಸಸ್ಥಳದ ನೆರೆಹೊರೆಯಲ್ಲಿ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿದ್ದರೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ದಾಖಲಾತಿ ನೀಡದೆ, ಹತ್ತಿರದ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿಗೆ ದಾಖಲಿಸುವ ನಿಯಮವನ್ನು ಒಳಗೊಂಡು ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ– 2009ಕ್ಕೆ ತಿದ್ದುಪಡಿ ತಂದ ಮೇಲೆ, ವಿದ್ಯಾರ್ಥಿಗಳ ಸಂಖ್ಯೆ ಖಾಸಗಿ ಶಾಲೆಗಳಲ್ಲಿ ಕಡಿಮೆಯಾಗುತ್ತಾ ಬರುವುದರ ಜೊತೆಗೆ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಾಗುತ್ತಾ ಹೋಯಿತು. ಈ ಹಿನ್ನೆಲೆಯಲ್ಲಿ 2019- 20ರಿಂದ 2021- 22ರವರೆಗೆ 11,248 ವಿದ್ಯಾರ್ಥಿಗಳು ಮಾತ್ರ ಆರ್‌ಟಿಇ ನಿಯಮದಡಿ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಉಚಿತವಾಗಿ ದಾಖಲಾಗಿದ್ದಾರೆ.

ಕೋವಿಡ್ ತಂದೊಡ್ಡಿದ ಆರ್ಥಿಕ ಸಂಕಷ್ಟದ ಕಾರಣ ಪೋಷಕರು ಮಕ್ಕಳನ್ನು ಖಾಸಗಿ ಶಾಲೆಗಳಿಂದ ಬಿಡಿಸಿ, ಸರ್ಕಾರಿ ಶಾಲೆಗಳಿಗೆ ದಾಖಲಿಸಲು ಶುರುವಿಟ್ಟುಕೊಂಡ ಪರಿಣಾಮ, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಉತ್ತಮಗೊಳ್ಳುತ್ತಾ ಸಾಗಿದೆ. ಇಂಗ್ಲಿಷ್ ಮಾಧ್ಯಮದೆಡೆ ವ್ಯಾಮೋಹ ಹಾಗೂ ಇತರ ಆಕರ್ಷಣೆಗಳ ಪರಿಣಾಮವಾಗಿ ಖಾಸಗಿ ಶಾಲೆಗಳ ಕಡೆ ಮುಖ ಮಾಡುತ್ತಿದ್ದ ಪೋಷಕರು ಉತ್ತಮವಾಗಿ ನಡೆಯುತ್ತಿರುವ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುತ್ತಿದ್ದಾರೆ. ಸ್ಥಳೀಯ ಸಮುದಾಯ ಹಾಗೂ ಕೆಲವು ಆಸಕ್ತ ಶಿಕ್ಷಣಾಸಕ್ತರ ಪ್ರೇರಣೆ, ಪ್ರಯತ್ನಗಳ ಫಲವಾಗಿ ಅನೇಕ ಸರ್ಕಾರಿ ಶಾಲೆಗಳು ಮೂಲ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಿಕೊಂಡು, ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಖಾಸಗಿ ಶಾಲೆಗಳಿಗೆ ತೀವ್ರ ಸ್ಪರ್ಧೆ ನೀಡುತ್ತಿವೆ.

ಇದೇ ಮೇ 7ರಂದು ಶಿಕ್ಷಣ ಸಚಿವರ ಜೊತೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ದಡ್ಡಲಕಾಡು ಸರ್ಕಾರಿ ಶಾಲೆಗೆ ಭೇಟಿ ನೀಡುವ ಅವಕಾಶ ದೊರೆತಿತ್ತು. ಅಂದು ಶಾಲೆಯ ನೂತನ ಕೊಠಡಿಗಳು ಹಾಗೂ ಕಲಿಕಾ ಭವನದ ಉದ್ಘಾಟನೆಯ ಕಾರ್ಯಕ್ರಮವಿತ್ತು. ಭವ್ಯವಾಗಿ ಮೈತಳೆದು ನಿಂತ ಶಾಲೆಯ ಮುಂದೆ ದೊಡ್ಡ ಸಭಾಮಂಟಪ ನಿರ್ಮಿಸಿ, ಊರಿನ ಜನರನ್ನೆಲ್ಲಾ ಸೇರಿಸಿ, ದೊಡ್ಡ ಉತ್ಸವವನ್ನು ಆಚರಿಸಿದ್ದು ವಿಶೇಷ.

ಇಲ್ಲಿ ಗಮನ ಸೆಳೆದ ಇನ್ನೊಂದು ವಿಷಯವೆಂದರೆ, ಶಾಲೆಯ ಎಲ್ಲಾ ಮಕ್ಕಳಿಗೆ ಭೋಜನಾಲಯ ನಿರ್ಮಿಸುವ ಯೋಜನೆಯ ನೀಲನಕಾಶೆಗೆ ಶಂಕುಸ್ಥಾಪನೆ ನೆರವೇರಿಸಿದ್ದು. ಸರ್ಕಾರಿ ಶಾಲೆಯ ಬೆಳವಣಿಗೆ ಕುರಿತಂತೆ ಈ ರೀತಿಯ ಮುನ್ನೋಟವು ಯಾವುದೇ ಶಾಲೆಯನ್ನು ಅಭಿವೃದ್ಧಿಯ ಪಥದಲ್ಲಿ ಸಾಗುವಂತೆ ಮಾಡುತ್ತದೆ.

2015- 16ರಲ್ಲಿ 28 ವಿದ್ಯಾರ್ಥಿಗಳ ದಾಖಲಾತಿ ಇದ್ದ ಈ ಶಾಲೆಯಲ್ಲಿ, ಸ್ಥಳೀಯ ಶಿಕ್ಷಣಪ್ರೇಮಿ ಪ್ರಕಾಶ್ ಅಂಚನ್ ಮತ್ತು ಸಹಚರರ ಪ್ರಯತ್ನದ ಫಲವಾಗಿ ಪ್ರಸ್ತುತ ದಾಖಲಾತಿ 1,200 ಮುಟ್ಟಿದೆ. ಏಳು ಬಸ್‌ಗಳಿದ್ದು, ಸುತ್ತಮುತ್ತಲ ಅನೇಕ ಗ್ರಾಮಗಳಿಂದ ಮಕ್ಕಳು ಬರುತ್ತಿದ್ದಾರೆ. ಉತ್ತಮ ಗ್ರಂಥಾಲಯ, ಪ್ರಯೋಗಾಲಯಗಳ ಜೊತೆ ಕರಾಟೆ, ನೃತ್ಯ, ಸಂಗೀತದಲ್ಲಿ ತರಬೇತಿ ನೀಡಲಾಗುತ್ತಿದೆ. ಬೋಧನೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಲಾಗುತ್ತಿದೆ. ಶಾಲೆಯ ಅಭಿವೃದ್ಧಿಯಲ್ಲಿ ಸ್ಥಳೀಯ ಶಾಸಕರು ಹಾಗೂ ಜನಪ್ರತಿನಿಧಿಗಳೂ ಕೈಜೋಡಿಸಿರುವುದು ವಿಶೇಷ.

ಸ್ಥಳೀಯ ಸಮುದಾಯವು ಸರ್ಕಾರಿ ಶಾಲೆಯನ್ನು ತಮ್ಮದೇ ಶಾಲೆಯೆಂದು ಸಂಭ್ರಮಿಸುತ್ತಾ ಪ್ರಗತಿಯ ಒಂದೊಂದು ಮೆಟ್ಟಿಲನ್ನು ಏರುತ್ತಿರುವುದು ಸರ್ಕಾರಿ ಶಾಲೆಗಳ ಬೆಳವಣಿಗೆಯ ಬಗ್ಗೆ ಭರವಸೆ ಹುಟ್ಟಿಸಿದೆ. ಸ್ಥಳೀಯ ಸಮುದಾಯವು ಸರ್ಕಾರದ ಜೊತೆ ಸಕ್ರಿಯ ಸಹಭಾಗಿತ್ವ ಹೊಂದುವುದರಿಂದ ಸರ್ಕಾರಿ ಶಾಲೆಗಳು ಉಜ್ವಲವಾಗುವ ಹೊಸ ಮಾದರಿಯನ್ನು ನಮ್ಮ ಮುಂದೆ ತೆರೆದಿಟ್ಟಿದೆ.

ವಾಚಕರ ವಾಣಿ

ಮುನ್ನೆಚ್ಚರಿಕೆಯಿಂದಷ್ಟೇ ಪರಿಹಾರ

ದೇಶದಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ಸಣ್ಣಗೆ ಹೆಚ್ಚುತ್ತಿರುವುದು ವರದಿಯಾಗುತ್ತಿದೆ. ಮಹಾರಾಷ್ಟ್ರದಲ್ಲಿ ಸೋಂಕು ವ್ಯಾಪಿಸುತ್ತಿರುವ ಲಕ್ಷಣಗಳು ಗೋಚರಿಸಿವೆ. ಸೋಂಕು ತೀವ್ರವಾಗಿ ಹರಡುವ ಮೊದಲೇ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ವಿವಿಧ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಬಗ್ಗೆ ಜನರಲ್ಲಿ ವ್ಯಾಪಕ ಅರಿವು ಮೂಡಿಸಬೇಕು. ಹೀಗೆ ಮುನ್ನೆಚ್ಚರಿಕೆ ವಹಿಸಿದರೆ ಮಾತ್ರವೇ ಸೋಂಕು ತಡೆಗಟ್ಟಬಹುದು. ಒಂದು ವೇಳೆ ಬಂದರೂ ಸಮರ್ಥವಾಗಿ ಎದುರಿಸಬಹುದು.

ಆನಂದ ಜೇವೂರ್, ಕಲಬುರಗಿ

ಅಭಿಯಾನದ ಯಶಸ್ಸಿಗೆ ಬೇಕು ಪ್ರೋತ್ಸಾಹಧನ

ಕೇಂದ್ರ ಮೋಟಾರು ವಾಹನಗಳ ನಿಯಮಾನುಸಾರ, ವಾಹನಗಳ ನೋಂದಣಿ ಫಲಕಗಳ ಮೇಲೆ ಸ್ಥಳೀಯ ಸಂಸ್ಥೆಗಳ ಹೆಸರು, ಚಿಹ್ನೆ, ಲಾಂಛನಗಳನ್ನು ಅಳವಡಿಸುವುದು ಕಾನೂನುಬಾಹಿರ. ಇಂತಹ ಫಲಕಗಳು ಕಂಡುಬಂದಲ್ಲಿ ಸಾರ್ವಜನಿಕರು ಅದರ ಭಾವಚಿತ್ರವನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿಕೊಟ್ಟರೆ ಕ್ರಮ ಜರುಗಿಸುವುದಾಗಿ ಸಾರಿಗೆ ಇಲಾಖೆಯು ಪತ್ರಿಕಾ ಜಾಹೀರಾತು ನೀಡಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪೊಲೀಸರು ಹಿಂದೆ ಹಲವು ಬಾರಿ ಕ್ರಮ ಕೈಗೊಂಡಿದ್ದಾರೆ. ಆದರೆ, ಕೆಲವು ದಿನಗಳ ಬಳಿಕ ಯಥಾಸ್ಥಿತಿ ಮುಂದುವರಿಯುತ್ತದೆ. ಅನಧಿಕೃತ ನೋಂದಣಿ ಫಲಕಗಳು ರಾರಾಜಿಸುತ್ತವೆ. ನೋಂದಣಿ ಫಲಕ, ಸ್ಥಳ ಸಮೇತ ಭಾವಚಿತ್ರವನ್ನು ತೆಗೆದು ಕಳುಹಿಸುವ ಸಾರ್ವಜನಿಕರಿಗೆ ಪ್ರೋತ್ಸಾಹಧನ ನೀಡಿದರೆ, ದಿನ ಬೆಳಗಾಗುವುದರೊಳಗೆ ಈ ಅಭಿಯಾನ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ರಘುನಾಥರಾವ್ ತಾಪ್ಸೆ, ದಾವಣಗೆರೆ

ದೋಷ ಪತ್ತೆಗೆ ಬೇಕಾಯಿತು 18 ವರ್ಷ!

ಖ್ಯಾತ ಕಾರು ಉತ್ಪಾದಕ ಮರ್ಸಿಡಿಸ್ ಬೆಂಜ್ ಕಂಪನಿಯು, ಇದುವರೆಗೆ ಮಾರಾಟವಾಗಿರುವ ಬರೋಬ್ಬರಿ ಹತ್ತು ಲಕ್ಷ ಕಾರುಗಳನ್ನು ಬ್ರೇಕಿಂಗ್ ವ್ಯವಸ್ಥೆಯಲ್ಲಿನ ದೋಷದ ಕಾರಣ ಹಿಂದಕ್ಕೆ ಪಡೆದು, ಪರಿಶೀಲನೆಗೆ ಒಳಪಡಿಸಿದ ಬಳಿಕ ಅಗತ್ಯ ಬಿದ್ದರೆ ಬಿಡಿಭಾಗವನ್ನು ಬದಲಾಯಿಸಿಕೊಡುವುದಾಗಿ ತಿಳಿಸಿದೆ ಎಂದು ವರದಿಯಾಗಿದೆ (ಪ್ರ.ವಾ., ಜೂನ್ 6). ಕುಚೋದ್ಯದ ಸಂಗತಿಯೆಂದರೆ, ಈ ಕಾರುಗಳು 2004ರಿಂದ 2015ರ ಅವಧಿಯಲ್ಲಿ ತಯಾರಾಗಿವೆಯಂತೆ! ಇಷ್ಟು ವರ್ಷಗಳ ನಂತರ ಬ್ರೇಕಿಂಗ್ ವ್ಯವಸ್ಥೆಯಲ್ಲಿ ದೋಷ ಇರುವುದನ್ನು, ಆರಂಭಿಕ ಬೆಲೆಯು ಕನಿಷ್ಠ ₹ 25 ಲಕ್ಷ ಮೌಲ್ಯ ಹೊಂದಿರುವ ಕಂಪನಿಯ ಕಾರುಗಳ ತಯಾರಕರು ಗುರುತಿಸುತ್ತಾರೆ!

ಪಾಪ, ಹಾಗಾಗಿಯೇ ಪ್ರತಿಷ್ಠಿತರ ಬೆಂಜ್ ಕಾರುಗಳು ಹಲವೆಡೆ ಫುಟ್‌ಪಾತ್ ಮೇಲೇರಿ, ಪಾದಚಾರಿಗಳು, ಬಡ ಕೂಲಿಕಾರ್ಮಿಕರು ಪರಮಾತ್ಮನ ಪಾದ ಸೇರುವಂತೆ ಮಾಡಿವೆ. ನಾವು ದಡ್ಡರು, ಇಂತಹ ಬ್ರೇಕಿಂಗ್ ವ್ಯವಸ್ಥೆ ಅಳವಡಿಸಿರುವ ಕಂಪನಿಯ ವಿರುದ್ಧ ಕೇಸ್ ದಾಖಲಿಸುವುದನ್ನು ಬಿಟ್ಟು, ಖ್ಯಾತನಾಮರ ವಿರುದ್ಧ ಕೇಸ್ ದಾಖಲಿಸುತ್ತೇವೆ. ಬ್ರೇಕಿಂಗ್ ವ್ಯವಸ್ಥೆಯ ತಾಂತ್ರಿಕ ದೋಷ ಕಂಡು ಹಿಡಿಯಲು ಕಾರು ತಯಾರಕರಿಗೆ 18 ವರ್ಷ ಬೇಕಾದರೆ, ಸಾಕ್ಷ್ಯ, ಸನ್ನಿವೇಶ, ಕಾನೂನುಗಳೆಲ್ಲವನ್ನೂ ಸಾದ್ಯಂತವಾಗಿ ಪರಾಮರ್ಶಿಸಿ, ನ್ಯಾಯ ತೀರ್ಮಾನ ಮಾಡಲು 18-20 ವರ್ಷ ಬೇಕಾಗುವುದು ಸಹಜವಲ್ಲವೇ?!

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಆಗ– ಈಗ

ವಿದ್ಯಾ ವಿನಯಗಳ ಅಭಾವವೇ
ದುಃಸ್ಥಿತಿಗೆ ಕಾರಣ ಎಂದಿದ್ದರು ಚಾಣಕ್ಯ
ಈಗಿನ ಶಾಲಾ ಪಠ್ಯಗಳ ಲೇಖನಗಳೇ
ಘರ್ಷಣೆಗೆ ಹೂರಣ ಎಂದಿತು ಸಾಹಿತ್ಯ

ಕೆ.ಎನ್.ಭಗವಾನ್, ಬೆಂಗಳೂರು

ಅರ್ಹರಿಗೆ ಮರೀಚಿಕೆಯಾಗದಿರಲಿ ಡಿಪ್ಲೊಮಾ ಪ್ರವೇಶ

ರಾಜ್ಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾದ ಕೂಡಲೇ, ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೊದಲು ಬಂದವರಿಗೆ ಮೊದಲ ಆದ್ಯತೆಯ ಮೇರೆಗೆ ಡಿಪ್ಲೊಮಾ ಎಂಜಿನಿಯರಿಂಗ್‌ಗೆ ಪ್ರವೇಶ ನೀಡಲು ಅಧಿಸೂಚನೆ ಹೊರಡಿಸಲಾಗಿದೆ. ಇದರ ಅನುಸಾರ, ರಾಜ್ಯದ ಬಹುತೇಕ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ರಾಜ್ಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳೇ ಪ್ರವೇಶ ಪಡೆದಿದ್ದು, ಬಹುತೇಕ ಎಲ್ಲಾ ಸೀಟುಗಳು ಈಗಾಗಲೇ ಭರ್ತಿಯಾಗಿವೆ. ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದ ಪರೀಕ್ಷಾ ಫಲಿತಾಂಶ ಇನ್ನೂ ಪ್ರಕಟವಾಗದಿರುವುದರಿಂದ ಈ ಪರೀಕ್ಷೆಗಳನ್ನು ಬರೆದಿರುವ ಪ್ರತಿಭಾವಂತ ಡಿಪ್ಲೊಮಾ ಆಕಾಂಕ್ಷಿ ಬಡ ವಿದ್ಯಾರ್ಥಿಗಳಿಗೆ ಡಿಪ್ಲೊಮಾ ಪ್ರವೇಶ ಮರೀಚಿಕೆಯಾಗಿದೆ. ಈ ವಿದ್ಯಾರ್ಥಿಗಳು ಖಾಸಗಿ ಸಂಸ್ಥೆಗಳ ಆಡಳಿತ ಮಂಡಳಿ ಕೋಟಾದಲ್ಲಿ ಪ್ರವೇಶ ಪಡೆಯುವಂತಾಗಿದೆ.

ಸಿಬಿಎಸ್‌ಇ, ಐಸಿಎಸ್‌ಇ ಪರೀಕ್ಷೆ ಫಲಿತಾಂಶ ಪ್ರಕಟವಾದ ನಂತರ ಡಿಪ್ಲೊಮಾ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ಮುಂದಿನ ಶೈಕ್ಷಣಿಕ ವರ್ಷದಿಂದಲಾದರೂ ಸಾಧಕ– ಬಾಧಕಗಳನ್ನು ಅವಲೋಕಿಸಿ, ಇಂಥ ತಪ್ಪು ಮರುಕಳಿಸದಂತೆ ಎಚ್ಚರ ವಹಿಸಬೇಕು.

ಆರ್.ಕುಮಾರ್, ಬೆಂಗಳೂರು

ಆರ್‌ಬಿಐ ಶ್ಲಾಘನೀಯ ಕ್ರಮ

ಭಾರತೀಯ ರಿಸರ್ವ್ ಬ್ಯಾಂಕ್ ಕರೆನ್ಸಿ ನೋಟುಗಳ ಮೇಲೆ ಕವಿ ರವೀಂದ್ರನಾಥ ಟ್ಯಾಗೋರ್ ಮತ್ತು ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಭಾವಚಿತ್ರಗಳನ್ನು ಮುದ್ರಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಸ್ಪಷ್ಟಪಡಿಸಿರುವುದು ಸಂತಸದ ವಿಷಯ. ಟ್ಯಾಗೋರ್ ಮತ್ತು ಕಲಾಂ ಅವರು ಭಾರತ ಕಂಡ ಅತ್ಯಂತ ಗೌರವಾನ್ವಿತ ವ್ಯಕ್ತಿಗಳಾದರೂ ಮಹಾತ್ಮ ಗಾಂಧಿ ಅವರ ಸ್ಥಾನವನ್ನು ತುಂಬಲಾರರು. ಈ ರೀತಿಯ ಬದಲಾವಣೆ ಭವಿಷ್ಯದಲ್ಲಿ ಕೋಲಾಹಲಕ್ಕೆ ಅವಕಾಶ ನೀಡುತ್ತದೆ. ಪ್ರತಿಯೊಂದು ಜಾತಿ ಜನಾಂಗವೂ ತಮ್ಮ ತಮ್ಮ ಧರ್ಮಗುರುವಿನ ಅಥವಾ ಮಠಾಧೀಶರ ಭಾವಚಿತ್ರಗಳನ್ನು ನೋಟಿನ ಮೇಲೆ ಮುದ್ರಿಸುವಂತೆ ಒತ್ತಾಯಿಸಬಹುದು. ಅಲ್ಲದೆ ಮಹಾತ್ಮರ ಭಾವಚಿತ್ರ ಬದಲಾವಣೆಯ ಹಿಂದೆ ಮತೀಯವಾದಿ ಜನರ ಕುತಂತ್ರ ಇರುವ ಸಾಧ್ಯತೆಗಳೂ ಇರಬಹುದು. ಈಗ ಬದಲಾವಣೆಯಾದರೆ ಮುಂದೊಂದು ದಿನ ತಮ್ಮ ಧಾರ್ಮಿಕ ನಾಯಕ ಅಥವಾ ರಾಜಕೀಯ ಮುಖಂಡನ ಚಿತ್ರವನ್ನು ಮುದ್ರಿಸಲು ಅವಕಾಶ ದೊರೆಯುವುದೆಂಬ ದೂರದೃಷ್ಟಿ ಇರಬಹುದು. ಇವೆಲ್ಲಕ್ಕೂ ತೆರೆ ಎಳೆದಿರುವ ರಿಸರ್ವ್ ಬ್ಯಾಂಕಿನ ಕ್ರಮ ಅಭಿನಂದನಾರ್ಹ.

ಮೋದೂರು ಮಹೇಶಾರಾಧ್ಯ, ಹುಣಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದ್ವೇಷದ ಹೇಳಿಕೆ ಸೌಹಾರ್ದ ಕದಡೀತೇ?

ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಯುಎಇಯ ಅತ್ಯುನ್ನತ ಗೌರವ 'ಆರ್ಡರ್ ಆಫ್ ಝಾಯೇದ್' ಅನ್ನು ಅಲ್ಲಿನ ರಾಜಕುಮಾರ ಶೇಖ್ ಮಹಮ್ಮದ್ ಬಿನ್ ಜಾಯೇದ್ ಅಲ್ ನಹ್ಯಾನ್ ಅವರು 2019ರಲ್ಲಿ ಪ್ರದಾನ ಮಾಡಿದ ಸಂದರ್ಭ

ಪ್ರವಾದಿ ಮಹಮ್ಮದರ ಕುರಿತು ಬಿಜೆಪಿ ನಾಯಕರು ನೀಡಿದ ಹೇಳಿಕೆಗೆ ಜಾಗತಿಕ ಮಟ್ಟದಲ್ಲಿ ದೊಡ್ಡ ಮಟ್ಟದ ಆಕ್ಷೇಪ ವ್ಯಕ್ತವಾಗಿದೆ. ಹೀಗೆ ಆಕ್ಷೇಪ ವ್ಯಕ್ತಪಡಿಸಿದ ಮುಸ್ಲಿಂ ರಾಷ್ಟ್ರಗಳಲ್ಲಿ, ಕೊಲ್ಲಿ ರಾಷ್ಟ್ರಗಳು ಭಾರತ ಸರ್ಕಾರದ ಕ್ಷಮೆಗೆ ಪಟ್ಟುಹಿಡಿದಿವೆ. ಕೊಲ್ಲಿ ಸಹಕಾರ ಮಂಡಳಿ (ಜಿಸಿಸಿ) ಸದಸ್ಯ ರಾಷ್ಟ್ರಗಳಾದ ಸೌದಿ ಅರೇಬಿಯಾ, ಯುಎಇ, ಕುವೈತ್, ಒಮಾನ್, ಕತಾರ್ ಮತ್ತು ಬಹರೈನ್ ದೇಶಗಳು ಭಾರತದ ರಾಯಭಾರಿಯನ್ನು ಕರೆಸಿಕೊಂಡು ತಮ್ಮ ಆಕ್ಷೇಪವನ್ನು ದಾಖಲಿಸಿವೆ.

ಇದರ ಬೆನ್ನಲ್ಲೇ, ಕತಾರ್‌ನ ಸೂಪರ್ ಮಾರುಕಟ್ಟೆಯೊಂದರಲ್ಲಿ ಭಾರತದ ಉತ್ಪನ್ನಗಳನ್ನು ಮಾರಾಟದಿಂದ ತೆಗೆಯಲಾಗಿದೆ. ಇದಕ್ಕೆ ಪ್ರತಿಯಾಗಿ ಕೊಲ್ಲಿ ಅಥವಾ ಅರಬ್ ದೇಶಗಳ ಉತ್ಪನ್ನಗಳನ್ನು ಬಹಿಷ್ಕರಿಸಬೇಕು ಎಂಬ ಅಭಿಯಾನ ಭಾರತದಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿದೆ. #ಬಾಯ್ಕಾಟ್ ಅರಬ್, ಬಾಯ್ಕಾಟ್ ಕತಾರ್ ಏರ್‌ವೇಸ್ ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ಈ ಅಭಿಯಾನ ನಡೆಸಲಾಗುತ್ತಿದೆ.

ಇದರ ಮಧ್ಯೆಯೇ ಅರಬ್ ದೇಶಗಳ ಜತೆಗಿನ ವ್ಯಾಪಾರ ಸಂಬಂಧವನ್ನು ಭಾರತವು ಕಡಿದುಕೊಳ್ಳಲು ಸಾಧ್ಯವೇ ಎಂಬ ಚರ್ಚೆಯೂ ನಡೆಯುತ್ತಿದೆ. ಬಹಳ ಮುಖ್ಯವಾದ ಅಂಶವೆಂದರೆ, ಈಚಿನ ವರ್ಷಗಳಲ್ಲಿ ಈ ದೇಶಗಳೊಂದಿಗೆ ಭಾರತದ ವಾಣಿಜ್ಯ ವಹಿವಾಟು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. 2020–21ನೇ ಸಾಲಿನಲ್ಲಿ ₹4.40 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಈ ಆರು ಕೊಲ್ಲಿ ದೇಶಗಳಿಂದ ಆಮದು ಮಾಡಿಕೊಂಡಿತ್ತು. 2021–22ನೇ ಸಾಲಿನಲ್ಲಿ ಈ ದೇಶಗಳಿಂದ ಆಮದು ಮಾಡಿಕೊಂಡ ಸರಕುಗಳ ಮೌಲ್ಯ ₹8.26 ಲಕ್ಷ ಕೋಟಿಗೆ ಏರಿಕೆಯಾಗಿದೆ. ಅಂದರೆ ಒಂದೇ ವರ್ಷದಲ್ಲಿ ಆಮದಿನ ಮೌಲ್ಯ ಶೇ 87ರಷ್ಟು ಏರಿಕೆಯಾಗಿದೆ.

ಇದೇ ರೀತಿ ಈ ದೇಶಗಳಿಗೆ ಭಾರತವು ರಫ್ತು ಮಾಡಿದ ಸರಕುಗಳ ಮೌಲ್ಯದಲ್ಲಿಯೂ ಭಾರಿ ಪ್ರಮಾಣದ ಏರಿಕೆಯಾಗಿದೆ. 2020–21ನೇ ಸಾಲಿನಲ್ಲಿ ಭಾರತವು ಈ ಆರೂ ದೇಶಗಳಿಗೆ ₹2.05 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಿತ್ತು. 2021–22ನೇ ಸಾಲಿನಲ್ಲಿ ರಫ್ತು ಮಾಡಿದ ಸರಕುಗಳ ಮೌಲ್ಯ ₹3.27 ಲಕ್ಷ ಕೋಟಿಯಷ್ಟು ಇತ್ತು. ಇದು ಶೇ 59.6ರಷ್ಟು ಏರಿಕೆ. ಈ ದೇಶಗಳೊಂದಿಗೆ ಭಾರತದ ವಾಣಿಜ್ಯ ವಹಿವಾಟು ವೃದ್ಧಿಸುತ್ತಿರುವುದನ್ನು ಈ ದತ್ತಾಂಶಗಳು ಸೂಚಿಸುತ್ತವೆ.

ಭಾರತವು ಕಚ್ಚಾತೈಲ, ಪೆಟ್ರೋಲಿಯಂ ಉತ್ಪನ್ನಗಳು, ರಸಗೊಬ್ಬರ, ಒಣಹಣ್ಣುಗಳು, ಗಾಜು ಮತ್ತು ಸೆರಾಮಿಕ್ ಉತ್ಪನ್ನಗಳಿಗಾಗಿ ಈ ದೇಶಗಳನ್ನು ಅವಲಂಬಿಸಿದೆ. ಈ ದೇಶಗಳು ಸಹ ಮಾಂಸ, ಹಣ್ಣು–ತರಕಾರಿ, ಹಾಲಿನ ಉತ್ಪನ್ನಗಳು, ಹವಳ–ಮುತ್ತು–ರತ್ನಗಳು, ಪರಮಾಣು ರಿಯಾಕ್ಟರ್‌ಗಳಿಗಾಗಿ ಭಾರತವನ್ನು ಅವಲಂಬಿಸಿವೆ.

2021–22ನೇ ಸಾಲಿನಲ್ಲಿ ಭಾರತವು ಈ ದೇಶಗಳಿಂದ ಒಟ್ಟು ₹8.26 ಲಕ್ಷ ಕೋಟಿ ಮೌಲ್ಯದಷ್ಟು ಸರಕುಗಳನ್ನು ಆಮದು ಮಾಡಿಕೊಂಡಿದ್ದರೆ, ಅದರಲ್ಲಿ ಕಚ್ಚಾತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೌಲ್ಯ ₹5.48 ಲಕ್ಷ ಕೋಟಿ. ಇಷ್ಟು ದೊಡ್ಡ ಪ್ರಮಾಣದ ಕಚ್ಚಾತೈಲವನ್ನು ಬೇರೆ ದೇಶಗಳಿಂದ ತರಿಸಿಕೊಳ್ಳಲು ಸಾಧ್ಯವಿಲ್ಲ. ಈ ಪರಸ್ಪರ ಅವಲಂಬನೆಯನ್ನು ತೊಡೆದುಹಾಕಲು ತಕ್ಷಣಕ್ಕೆ ಸಾಧ್ಯವಿಲ್ಲ ಎಂಬುದನ್ನು ಈ ಅಂಕಿಅಂಶಗಳು ಹೇಳುತ್ತವೆ.

2021–22ನೇ ಸಾಲಿನ ವ್ಯಾಪಾರ ವಹಿವಾಟು

₹8.26 ಲಕ್ಷ ಕೋಟಿ ಕೊಲ್ಲಿ ದೇಶಗಳಿಂದ ಭಾರತವು ಆಮದು ಮಾಡಿಕೊಂಡ ಸರಕುಗಳ ಒಟ್ಟು ಮೌಲ್ಯ

- ₹141 ಕೋಟಿ – ಸಂಸ್ಕರಿಸಿದ ಮಾಂಸ ಮತ್ತು ಪ್ರಾಣಿಜನ್ಯ ಆಹಾರ ಪದಾರ್ಥಗಳು
- ₹24,765 ಕೋಟಿ – ಚರ್ಮ, ಚರ್ಮದ ಉತ್ಪನ್ನಗಳು, ಚರ್ಮದ ಬಟ್ಟೆಗಳು
- ₹12,082 ಕೋಟಿ – ಗಾಜು ಮತ್ತು ಸೆರಾಮಿಕ್ ಆಲಂಕಾರಿಕ ಮತ್ತು ಗೃಹ ಬಳಕೆ ವಸ್ತುಗಳು
- ₹16,050 ಕೋಟಿ – ಒಣಹಣ್ಣು, ಸಸ್ಯಜನ್ಯ ಆಹಾರ ಪದಾರ್ಥಗಳು, ಪ್ರಾಣಿಜನ್ಯ ಮೇಣ ಇತ್ಯಾದಿ
- ₹37,075 ಕೋಟಿ – ರಸಗೊಬ್ಬರ, ಸಾವಯವ ಗೊಬ್ಬರ ಮತ್ತು ರಾಸಾಯನಿಕ ವಸ್ತುಗಳು
- ₹33,799 ಕೋಟಿ – ಆಟಿಕೆ, ವಾದ್ಯಗಳು, ಪೀಠೋಪಕರಣಗಳು ಇತ್ಯಾದಿ
- ₹5.48 ಲಕ್ಷ ಕೋಟಿ – ಕಚ್ಚಾತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳು
- ₹2,109 ಕೋಟಿ – ಮರ–ಚರ್ಮ–ಜವಳಿಯ ಕುಶಲವಸ್ತುಗಳು
- ₹45,615 ಕೋಟಿ – ಖನಿಜ ವಸ್ತುಗಳು, ಆಟೊಮೊಬೈಲ್ ಬಿಡಿಭಾಗಗಳು, ಆಪ್ಟಿಕಲ್ ಉತ್ಪನ್ನಗಳು



₹3.02 ಲಕ್ಷ ಕೋಟಿ ಕೊಲ್ಲಿ ರಾಷ್ಟ್ರಗಳಿಗೆ ಭಾರತವು ರಫ್ತು ಮಾಡಿದ ಸರಕುಗಳ ಒಟ್ಟು ಮೌಲ್ಯ

- ₹5,129 ಕೋಟಿ – ದನ–ಕುರಿ–ಆಡಿನ ಸಂಸ್ಕರಿಸಿದ ಮಾಂಸ
- ₹8,665 ಕೋಟಿ – ಹಣ್ಣು–ತರಕಾರಿ ಮತ್ತು ಸಸ್ಯಜನ್ಯ ಆಹಾರ ಪದಾರ್ಥಗಳು, ಮಸಾಲೆ ಪದಾರ್ಥಗಳು
- ₹12,435 ಕೋಟಿ – ಧಾನ್ಯಗಳು
- ₹39,490 ಕೋಟಿ – ಖನಿಜ ವಸ್ತುಗಳು, ಅದಿರು
- ₹3,089 ಕೋಟಿ – ಅಡುಗೆ ಎಣ್ಣೆ, ಎಣ್ಣೆಕಾಳುಗಳು
- ₹11,269 ಕೋಟಿ – ಸಕ್ಕರೆ, ತಂಪು ಪಾನೀಯ, ತಂಬಾಕು ಉತ್ಪನ್ನಗಳು
- ₹1.03 ಲಕ್ಷ ಕೋಟಿ – ಔಷಧಗಳು, ವೈದ್ಯಕೀಯ ಉಪಕರಣಗಳು, ಅಂಟು ಪದಾರ್ಥಗಳು, ಸಾವಯವ ವಸ್ತುಗಳು
- ₹68,526 ಕೋಟಿ – ಪರಮಾಣು ರಿಯಾಕ್ಟರ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳು, ಟೂಲ್ಸ್‌ಗಳು
- ₹14,423 ಕೋಟಿ – ರಬ್ಬರ್, ಚರ್ಮ, ಕಾಗದದ ಉತ್ಪನ್ನಗಳು
- ₹27,236 ಕೋಟಿ – ಜವಳಿ ಉತ್ಪನ್ನಗಳು
- ₹54,759 ಕೋಟಿ – ಹವಳ, ಮುತ್ತು–ರತ್ನ, ಗಾಜು ಮತ್ತು ಸೆರಾಮಿಕ್ ವಸ್ತುಗಳು
- ₹21,262 ಕೋಟಿ – ರೈಲು, ವಿಮಾನ, ದೋಣಿಗಳ ಬಿಡಿಭಾಗಗಳು
- ₹1,598 ಕೋಟಿ – ಆಟಿಕೆಗಳು, ಪ್ಲಾಸ್ಟಿಕ್ ಆಲಂಕಾರಿಕ ವಸ್ತುಗಳು ಇತ್ಯಾದಿ

ಆಧಾರ: ವಾಣಿಜ್ಯ ಸಚಿವಾಲಯದ ಆಮದು–ರಫ್ತು ದತ್ತಾಂಶ ಬ್ಯಾಂಕ್, ಪಿಟಿಐ, ವಿಶ್ವಬ್ಯಾಂಕ್ ವರದಿ

ಜಿಸಿಸಿ ದೇಶಗಳಲ್ಲಿದ್ದಾರೆ 88 ಲಕ್ಷ ಭಾರತೀಯರು

ಕೊಲ್ಲಿ ದೇಶಗಳಲ್ಲಿ ಭಾರಿ ಸಂಖ್ಯೆಯಲ್ಲಿ ಭಾರತೀಯರು ವಾಸಿಸುತ್ತಿದ್ದಾರೆ. ವಿದೇಶಗಳಲ್ಲಿ ವಾಸ ಮಾಡುತ್ತಿರುವ 3.2 ಕೋಟಿ ಅನಿವಾಸಿ ಭಾರತೀಯರಲ್ಲಿ ಅರ್ಧದಷ್ಟು ಜನರು ಕೊಲ್ಲಿ ದೇಶಗಳಲ್ಲಿ ಇದ್ದಾರೆ ಎನ್ನಲಾಗಿದೆ. ಕೊಲ್ಲಿ ಸಹಕಾರ ಮಂಡಳಿಯ (ಜಿಸಿಸಿ) ಆರು ದೇಶಗಳಾದ ಯುಎಇ, ಸೌದಿ ಅರೇಬಿಯಾ, ಕುವೈತ್, ಒಮಾನ್, ಕತಾರ್ ಹಾಗೂ ಬಹರೈನ್‌ನಲ್ಲಿ 88.7 ಲಕ್ಷ ಭಾರತೀಯರು ಇದ್ದಾರೆ ಎಂದು ವಿದೇಶಾಂಗ ಸಚಿವಾಲಯ ನೀಡಿರುವ ಅಂಕಿ–ಅಂಶಗಳು ತಿಳಿಸುತ್ತವೆ. ಈ ಪೈಕಿ ಬಹುತೇಕರು ಕೊಲ್ಲಿ ದೇಶಗಳ ಪೆಟ್ರೋಲಿಯಂ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನಲಾಗಿದೆ.

ಯುಎಇಯಲ್ಲಿಯೇ ಭಾರತದ ಸುಮಾರು 70 ಸಾವಿರ ಜನರು ಅನಧಿಕೃತವಾಗಿ ವಾಸಿಸುತ್ತಿದ್ದಾರೆ ಎಂಬ ಮಾಹಿತಿಯಿದೆ. ಈ ಮಾಹಿತಿ ಖಚಿತವೇ ಎಂದು ಸಂಸದ ಕೆ.ಸಿ. ರಾಮಮೂರ್ತಿ ಅವರು 2018ರಲ್ಲಿ ರಾಜ್ಯಸಭೆಯಲ್ಲಿ ಸರ್ಕಾರವನ್ನು ಪ್ರಶ್ನಿಸಿದ್ದರು. ಇದಕ್ಕೆ ಉತ್ತರಿಸಿದ ಸಚಿವ ಜನರಲ್ ವಿ.ಕೆ. ಸಿಂಗ್ ಅವರು, ಅನಧಿಕೃತವಾಗಿ ವಾಸಿಸುವವರ ಸ್ಪಷ್ಟ ಸಂಖ್ಯೆಯನ್ನು ಯುಎಇ ಮೊದಲಾದ ಕೊಲ್ಲಿ ದೇಶಗಳು ನೀಡಿಲ್ಲ ಎಂದು ಹೇಳಿದ್ದರು.

ಜಿಸಿಸಿ ದೇಶಗಳಲ್ಲಿ 88.7 ಲಕ್ಷ ಅನಿವಾಸಿ ಭಾರತೀಯರು ಅಧಿಕೃತವಾಗಿ ವಾಸಿಸುತ್ತಿದ್ದು, ಅನಧಿಕೃತವಾಗಿ ವಾಸಿಸುವವರ ಸಂಖ್ಯೆಯ ಬಗ್ಗೆ ಸ್ಪಷ್ಟತೆ ಇಲ್ಲ. ಮಾಹಿತಿ ಪ್ರಕಾರ, ಸುಮಾರು ಒಂದೂವರೆ ಕೋಟಿ ಭಾರತೀಯರು ಜಿಸಿಸಿ ದೇಶಗಳಲ್ಲಿ ವಾಸಿಸುತ್ತಿದ್ದಾರೆ ಎನ್ನಲಾಗಿದೆ. ಒಂದು ವೇಳೆ, ಈ ಎಲ್ಲ ಭಾರತೀಯರಿಗೆ ಉದ್ಯೋಗ ನಿರಾಕರಿಸಿದರೆ, ಅವರೆಲ್ಲರೂ ತವರಿಗೆ ಬರಬೇಕಾಗಬಹುದು. ಇಷ್ಟು ಸಂಖ್ಯೆಯ ಜನರಿಗೆ ಭಾರತದಲ್ಲಿ ಉದ್ಯೋಗ ಒದಗಿಸುವ ದೊಡ್ಡ ಸವಾಲು ಸರ್ಕಾರಕ್ಕೆ ಎದುರಾಗಬಹುದು ಎಂದು ವಿಶ್ಲೇಷಿಸಲಾಗಿದೆ.

ಜಿಸಿಸಿ ದೇಶಗಳಲ್ಲಿರುವ ಭಾರತೀಯರ ಸಂಖ್ಯೆ



ವಿದೇಶಗಳಿಂದ ಹಣ ರವಾನೆ: ಭಾರತ ಮುಂದು

ವಿದೇಶಗಳಲ್ಲಿ ಕೆಲಸ ಮಾಡುವ ಜನರು ತಾವು ದುಡಿದ ಹಣವನ್ನು ತಾಯ್ನಾಡಿಗೆ (ರೆಮಿಟೆನ್ಸ್) ಕಳುಹಿಸುತ್ತಿದ್ದಾರೆ. ಹೀಗೆ ಹೆಚ್ಚಿನ ಪ್ರಮಾಣದಲ್ಲಿ ಹಣ ರವಾನೆಯಾದ ದೇಶಗಳಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ ಎಂದು 2021ರ ನವೆಂಬರ್‌ನಲ್ಲಿ ಪ್ರಕಟವಾದ ವಿಶ್ವಬ್ಯಾಂಕ್ ವರದಿ ಹೇಳುತ್ತದೆ. ₹6.52 ಲಕ್ಷ ಕೋಟಿ (8,700 ಕೋಟಿ ಡಾಲರ್) ಹಣ ವಿದೇಶಗಳಿಂದ ಭಾರತಕ್ಕೆ ಹರಿದುಬಂದಿದೆ.

ಹಣ ರವಾನೆಯಾದ ದೇಶಗಳ ಸಾಲಿನಲ್ಲಿ ಭಾರತದ ಬಳಿಕ ಚೀನಾ, ಮೆಕ್ಸಿಕೊ, ಫಿಲಿಪ್ಪೀನ್ಸ್ ಹಾಗೂ ಈಜಿಪ್ಟ್ ಇವೆ. 2022ರಲ್ಲಿ ಭಾರತಕ್ಕೆ ಹಣ ರವಾನೆ ಶೇ 3ರಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ.

ಭಾರತಕ್ಕೆ ರವಾನೆಯಾದ ಹಣದಲ್ಲಿ ಶೇ 20ರಷ್ಟು ಪಾಲು ಅಮೆರಿಕಕ್ಕೆ ಸೇರಿದೆ. ಉಳಿದಂತೆ ದೊಡ್ಡ ಮೊತ್ತವು ಜಿಸಿಸಿ ದೇಶಗಳಿಂದ ಬಂದಿದೆ. ಜಿಸಿಸಿ ದೇಶಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಭಾರತೀಯರು, ತಾವು ಗಳಿಸುವ ಹಣವನ್ನು ಭಾರತದಲ್ಲಿರುವ ತಮ್ಮ ಕುಟುಂಬಗಳಿಗೆ ರವಾನೆ ಮಾಡುತ್ತಿದ್ದಾರೆ. ಈ ಹಣವನ್ನು ನಂಬಿಕೊಂಡು ಜೀವನ ಸಾಗಿಸುವ ಸಾವಿರಾರು ಕುಟುಂಬಗಳು ದೇಶದಲ್ಲಿವೆ. ಒಂದು ವೇಳೆ ಜಿಸಿಸಿ ದೇಶಗಳಲ್ಲಿರುವ ಭಾರತೀಯರ ಉದ್ಯೋಗಕ್ಕೆ ಕತ್ತರಿ ಬಿದ್ದರೆ, ಭಾರತಕ್ಕೆ ಹರಿದುಬರುವ ಇಷ್ಟೂ ಪ್ರಮಾಣದ ಹಣ ನಿಂತುಹೋಗಲಿದೆ.

ಜಿಸಿಸಿ ದೇಶಗಳಲ್ಲಿರುವ ಭಾರತದ ಕೌಶಲರಹಿತ ಕೆಲಸಗಾರರು ಪ್ರತೀ ತಿಂಗಳು ಅಂದಾಜು ₹30,000 ಹಣವನ್ನು ಭಾರತದ ತಮ್ಮ ಕುಟುಂಬಗಳಿಗೆ ಕಳುಹಿಸುತ್ತಿದ್ದಾರೆ. ಇದೇ ಸ್ವರೂಪದ ಕೆಲಸ ಮಾಡುವ ಚೀನಾ ಹಾಗೂ ಫಿಲಿಪ್ಪೀನ್ಸ್‌ನ ವಲಸಿಗರಿಗೆ ಹೋಲಿಸಿದರೆ, ಭಾರತದ ಕೆಲಸಗಾರರು ಜಿಸಿಸಿ ದೇಶಗಳಿಂದ ಕಳುಹಿಸುವ ಹಣ ಕಡಿಮೆಯಿದೆ ಎಂದು ವರದಿ ತಿಳಿಸಿದೆ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 141

ಸತಿಯಾಗಲು ಒಪ್ಪಿದ ಜಗನ್ಮಾತೆ

ಶಿವಶಕ್ತಿಯ ಸಾಕ್ಷಾತ್ಕಾರಕ್ಕೆ ತಪಸ್ಸಿಗೆ ಕುಳಿತ ಬ್ರಹ್ಮ ಪರಿಪರಿಯಾಗಿ ದೇವಿಯನ್ನು ಸ್ತುತಿಸಿದ. ಬ್ರಹ್ಮನ ಧ್ಯಾನಕ್ಕೆ ಮೆಚ್ಚಿದ ಜಗತ್ಕಾರಣಳಾದ ಕಾಳಿದೇವಿಯು ಪ್ರಸನ್ನಳಾಗಿ ಮೇಘಧ್ವನಿಯಂತೆ ಗಂಭೀರವಾದ ಧ್ವನಿಯಿಂದ ಹೇಳಿದಳು: 'ಎಲೈ ಬ್ರಹ್ಮನೇ! ಏತಕ್ಕಾಗಿ ನೀನು ನನ್ನನ್ನು ಸ್ತುತಿಸುತ್ತಿರುವೆ? ಅಸಾಧ್ಯವಾದಂತಹ ಅದಾವ ಕಾರ್ಯವು ಬಂದೊದಗಿರುವುದು?'

ಆಗ ಬ್ರಹ್ಮ 'ಓ ದೇವಿ, ನಿನ್ನ ಪ್ರಿಯನಾದ ಶಿವನು ನನ್ನ ಲಲಾಟದಿಂದ ರುದ್ರರೂಪನಾಗಿ ಅವತರಿಸಿದ್ದಾನೆ. ಆ ರುದ್ರನು ಮಹಾಯೋಗಿಯಾಗಿದ್ದು ಕೈಲಾಸಪರ್ವತದಲ್ಲಿ ವಾಸಿಸುತ್ತಿದ್ದಾನೆ. ಆದರೆ ರುದ್ರನು ಪತ್ನಿಯನ್ನು ಪರಿಗ್ರಹಿಸದೇ ಸಂಸಾರವಿಮುಖನಾಗಿ ಓರ್ವನೇ ತಪಸ್ಸನ್ನಾಚರಿಸುತ್ತಿದ್ದಾನೆ. ಅವನು ಪತ್ನಿಯನ್ನು ಅಪೇಕ್ಷಿಸಲು ನಾನು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ಆದ್ದರಿಂದ ನೀನು ರುದ್ರದೇವನು ಪತ್ನಿಯನ್ನು ಪರಿಗ್ರಹಿಸಲಿಚ್ಛಿಸುವಂತೆ ಅವನನ್ನು ಮೋಹಗೊಳಿಸಬೇಕು. ನಿನ್ನ ಹೊರತು ಶಿವನ ಮನಸ್ಸನ್ನು ಇನ್ನಾವ ಸ್ತ್ರೀಯೂ ಅಪಹರಿಸಲಾರಳು. ನೀನೇ ಅವತರಿಸಿ ಆ ರುದ್ರನನ್ನು ಮೋಹಗೊಳಿಸು. ಇದಕ್ಕಾಗಿ ದಕ್ಷಬ್ರಹ್ಮನ ಸುತೆಯಾಗಿ ಜನಿಸಿ ರುದ್ರನನ್ನು ಪತಿಯಾಗಿ ವರಿಸು. ನೀನು ಲಕ್ಷ್ಮೀರೂಪದಿಂದ ಅವತರಿಸಿ ಹರಿಯನ್ನು ಮೋಹಗೊಳಿಸಿರುವಂತೆಯೆ, ರುದ್ರನನ್ನೂ ಲೋಕಹಿತಕ್ಕಾಗಿ ಮೋಹಗೊಳಿಸು. ಈ ಹಿಂದೆ ನಾನು ಸ್ತ್ರೀಯಲ್ಲಿ ಅಭಿಲಾಷೆಗೊಂಡಿರುವುದನ್ನು ನೋಡಿ ಆ ರುದ್ರನು ನನ್ನನ್ನು ನಿಂದಿಸಿದ್ದ. ಇಂತಹವನು ತನ್ನ ಇಚ್ಛೆಯಿಂದ ಹೇಗೆ ತಾನೇ ಕಾಮಿನಿಯನ್ನು ಪರಿಗ್ರಹಿಸುತ್ತಾನೆ ಅನ್ನೋ ಅನುಮಾನವೂ ಇದೆ. ರುದ್ರನು ಪತ್ನಿಯನ್ನು ಪರಿಗ್ರಹಿಸದಿದ್ದರೆ ಸೃಷ್ಟಿಯು ಸುಖವಾಗಿ ಹೇಗೆ ಸಾಗುವುದು? ಸೃಷ್ಟಿಯ ಆದಿಮಧ್ಯಾಂತರಗಳಿಗೆ ಕಾರಣನಾದ ರುದ್ರನು ವಿರಕ್ತನಾದರೆ ಸೃಷ್ಟಿಕ್ರಿಯೆ ನಡೆಯುವುದಾದರೂ ಹೇಗೆ ಎಂಬ ಆತಂಕವೂ ನನಗಿದೆ. ಆದುದರಿಂದ ನೀನು ರುದ್ರನ ಪತ್ನಿಯಾಗಲು ಮಹಾಯೋಗಿಯಾದ ಅವನನ್ನು ಮೋಹಗೊಳಿಸು. ಈಗಾಗಲೇ ದಕ್ಷನು ಮನಸ್ಸನ್ನು ಸ್ಥಿರೀಕರಿಸಿ ಜಿತೇಂದ್ರಿಯನಾಗಿ ನಿಯಮಬದ್ಧನಾಗಿ ಕ್ಷೀರಸಾಗರದ ಉತ್ತರತೀರದಲ್ಲಿ ನಿನ್ನನ್ನುದ್ದೇಶಿಸಿ ತಪಸ್ಸು ಮಾಡುತ್ತಿದ್ದಾನೆ. ನೀನು ಅವನ ಮಗಳಾಗಿ ಜನಿಸಬೇಕೆಂದು ಬಯಸಿದ್ದಾನೆ. ನಮ್ಮಿಬ್ಬರ ಬಯಕೆಯಂತೆ ನೀನು ದಿವ್ಯವಾದ ರೂಪವುಳ್ಳವಳಾಗಿ ದಕ್ಷನ ಪುತ್ರಿಯಾಗಿ ಜನಿಸಬೇಕು' ಎಂದು ಕೋರುತ್ತಾನೆ.

'ಪರಬ್ರಹ್ಮಸ್ವರೂಪನಾದ ಶಂಕರನು ಪ್ರಕೃತಿ ಸಂಬಂಧವಾದ ಯಾವ ಗುಣಗಳು ಇಲ್ಲದ ಪರಬ್ರಹ್ಮಸ್ವರೂಪ; ಯಾವ ವಿಕಾರಗಳೂ ಇಲ್ಲದವನು. ಆ ಶಂಕರನಿಗೆ ನಾನು ಪರಿಚಾರಕಳು. ಅವನ ಅಪ್ಪಣೆಯಂತೆ ಸದಾ ನಡೆಯತಕ್ಕವಳು. ಹೀಗಾಗಿ ನಿನ್ನ ಕೋರಿಕೆಯನ್ನು ಈಡೇರಿಸುವುದು ಬಹಳ ಕಷ್ಟ. ನಾನು ನಿನಗೆ ವರವನ್ನು ಕೊಡದಿದ್ದರೆ, ದೇವಿಯನ್ನು ಧ್ಯಾನಿಸಿದರೆ ಬೇಕಾದುದನ್ನು ಪಡೆಯಬಹುದು ಎಂಬ ವೇದನೀತಿಯು ಸುಳ್ಳಾಗುವುದು. ವರವನ್ನು ಕೊಟ್ಟರೆ ನನ್ನ ಸ್ವಾಮಿಯಾದ ಆ ಶಿವನು ಕೋಪಗೊಳ್ಳುವನೋ ಏನೋ? ಆದ ಕಾರಣ ಈಗೇನು ಮಾಡಲಿ?' ಎಂದು ಆಲೋಚಿಸಿದ ದೇವಿಯು, ಪರಮೇಶ್ವರನನ್ನು ಸ್ಮರಿಸಿ ಅವನ ಅನುಜ್ಞೆಯನ್ನು ಪಡೆದು ಬಳಿಕ ಬ್ರಹ್ಮನಿಗೆ ಹೀಗೆ ಹೇಳಿದಳು.

'ಬ್ರಹ್ಮ, ನೀನು ಹೇಳಿದುದೆಲ್ಲವೂ ನಿಜವಾದುದು. ನನ್ನ ಹೊರತು ಇನ್ನಾರೂ ಶಂಕರನನ್ನು ಮೋಹಗೊಳಿಸಲಾರರು. ಹರನು ಪತ್ನಿಯನ್ನು ಪರಿಗ್ರಹಿಸದಿದ್ದರೆ ಅನಾದಿಯಾದ ಈ ಸೃಷ್ಟಿಯು ನಡೆಯಲಾರದೆಂಬುದು ನಿಜವಾದ ಮಾತು. ಅದಕ್ಕಾಗಿ ಹರನು ಮೋಹಗೊಂಡು ತಾನಾಗಿಯೇ ಪತ್ನಿಯನ್ನು ಪರಿಗ್ರಹಿಸುವಂತೆ ಮಾಡುವೆ. ನಾನು ದಕ್ಷನ ಪತ್ನಿಯ ಗರ್ಭದಲ್ಲಿ ಸತೀದೇವಿಯ ರೂಪದಿಂದ ಅವತರಿಸಿ, ಹರನನ್ನು ಮದುವೆಯಾಗುವೆ. ವಿಷ್ಣುವಿಗೆ ಲಕ್ಷ್ಮಿಯು ಹೇಗೋ ಹಾಗೆ ಅವನಿಗೆ ಪ್ರಿಯಳಾಗಿರುವೆ. ಲೋಕದಲ್ಲಿ ಸಾಮಾನ್ಯ ಪ್ರಾಣಿಯು ಸ್ತ್ರೀಯ ವಶದಲ್ಲಿರುವಂತೆ ಶಿವನನ್ನೂ ಭಕ್ತಿಯಿಂದ ನನ್ನ ವಶದಲ್ಲಿಟ್ಟುಕೊಳ್ಳುವೆ' ಎಂದು ಬ್ರಹ್ಮನಿಗೆ ಭರವಸೆ ನೀಡಿದ ಜಗನ್ಮಾತೆಯಾದ ದೇವಿಯು ಬ್ರಹ್ಮ ನೋಡುತ್ತಿರುವಂತೆ ಅಲ್ಲಿಯೇ ಅಂತರ್ಧಾನಳಾದಳು.

ಮಹಾದೇವಿಯು ಅಂತರ್ಧಾನಳಾದ ನಂತರ ಜಗತ್ತಿಗೆ ತಾತನೆನಿಸಿದ ಬ್ರಹ್ಮ ತನ್ನ ಕೋರಿಕೆ ಈಡೇರಿದ ಸಂತೃಪ್ತಿಯಿಂದ ತನ್ನ ಮಾನಸಪುತ್ರರಾದ ದಕ್ಷನೇ ಮೊದಲಾದವರು ಇರುವಲ್ಲಿಗೆ ತೆರಳಿದನು ಎಂಬಲ್ಲಿಗೆ ಶಿವಪುರಾಣದ ಎರಡನೇ ಸಂಹಿತೆಯಾದ ರುದ್ರಸಂಹಿತೆಯಲ್ಲಿನ ಸತೀಖಂಡದ ಹನ್ನೊಂದನೆಯ ಅಧ್ಯಾಯವು ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇವಸ್ಥಾನದಂತೆ ಕಾಣುವ ಆದರೆ ಗುಮ್ಮಟವನ್ನು ಹೊಂದಿರುವ ಪ್ರಾಚೀನ ಕಟ್ಟಡವೊಂದರ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಸುಂದರವಾದ ದೇವಸ್ಥಾನ, ಅದಕ್ಕೆ ಕುರೂಪಿ ಗುಮ್ಮಟ. ಹಿಂದೂ ದೇವಸ್ಥಾನವನ್ನು ಮೊಘಲರು ಮಸೀದಿಯನ್ನಾಗಿ ಮಾರ್ಪಾಡು ಮಾಡಿದ್ದಾರೆ. ಇತಿಹಾಸಕಾರರು ಈ ಕುರಿತು ಏನಾದರೂ ಹೇಳುತ್ತಾರಾ?' ಎಂಬ ವಿವರಣೆಯನ್ನು ಈ ಚಿತ್ರಕ್ಕೆ ನೀಡಲಾಗಿದೆ. ಬಿಜೆಪಿ ಸದಸ್ಯ ಸುರೇಂದ್ರ ಪೂನಿಯಾ ಸೇರಿ ಹಲವರು ಈ ಚಿತ್ರವನ್ನು ಹಂಚಿಕೊಂಡಿದ್ದಾರೆ.

ಈ ಚಿತ್ರದ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ಆಲ್ಟ್ ನ್ಯೂಸ್' ವೇದಿಕೆ ವರದಿ ಮಾಡಿದೆ. 'ಚಿತ್ರದಲ್ಲಿರುವ ದೇವಸ್ಥಾನ ಇರುವುದು ರಾಜಸ್ಥಾನದ ಚಿತ್ತೋರಗಡದ ಕೋಟೆಯಲ್ಲಿ. ಇದು ಶಿವ ದೇವಾಲಯವಾಗಿದ್ದು, ಇದನ್ನು 1277ರಲ್ಲಿ ನಿರ್ಮಿಸಲಾಗಿದೆ. ಇದರ ಹೆಸರು 'ಶೃಂಗಾರ ಚೌರಿ'. 1448ರಲ್ಲಿ ಮೇವಾಡ ವಂಶಸ್ಥರು ಈ ದೇವಸ್ಥಾನವನ್ನು ನವೀಕರಣ ಮಾಡಿದರು' ಎಂಬ ಮಾಹಿತಿಯು 'ಚಿತ್ತೋರಗಡ' ಎಂಬ ಪುಸ್ತಕದಲ್ಲಿದೆ. ಮೊಘಲರು ಈ ದೇವಸ್ಥಾನವನ್ನು ಮಸೀದಿಯನ್ನಾಗಿ ಮಾರ್ಪಾಡು ಮಾಡಿದ್ದರ ಕುರಿತು ಯಾವುದೇ ಮಾಹಿತಿ ಇಲ್ಲ ಎಂದು ಆಲ್ಟ್ ನ್ಯೂಸ್ ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಆತ್ಮ ಚಿಕಿತ್ಸೆ-1109

ಚಿಂತೆಸಂತಾಪಗಳು ಮನಸಿಗೆ ವಿರೇಚಕವೊ |
ಸಂತಸೋತ್ಸಾಹಗಳೆ ಪಥ್ಯದುಪಚಾರ ||
ಇಂತುಮಂತುಂ ನಡೆಯುತಿರುವುದಾತ್ಮ ಚಿಕಿತ್ಸೆ |
ಎಂತಾದೊಡಂತೆ ಸರಿ – ಮಂಕುತಿಮ್ಮ || 645 ||

ಪದ-ಅರ್ಥ: ವಿರೇಚಕ = ಹೊಟ್ಟೆಯನ್ನು ಶುದ್ಧಗೊಳಿಸುವ ಔಷಧಿ, ಸಂತಸೋತ್ಸಾಹಗಳೆ = ಸಂತಸ = ಉತ್ಸಾಹಗಳೆ, ಪಥ್ಯದುಪಚಾರ = ಪಥ್ಯದ(ಆರೋಗ್ಯ ಸುಧಾರಣೆಗೆ ಆಹಾರ ಕ್ರಮ) + ಉಪಚಾರ, ಇಂತುಮಂತುಂ = ಇಂತು + ಅಂತುಂ(ಯಾವುದೋ ರೀತಿ), ಎಂತಾದೊಡಂತೆ = ಎಂತಾದೊಡೆ (ಹೇಗಾದರೂ) + ಅಂತೆ

ವಾಚ್ಯಾರ್ಥ: ಚಿಂತೆಗಳು, ನೋವುಗಳು ಮನಸ್ಸನ್ನು ಶುದ್ಧಮಾಡುವ ಔಷಧಿಗಳು. ಸಂತೋಷ, ಉತ್ಸಾಹಗಳೇ ಈ ರೋಗಕ್ಕೆ ಒಳ್ಳೆಯ ಪಥ್ಯ. ಅಂತೋ ಇಂತೋ,ಆತ್ಮಚಿಕಿತ್ಸೆ ನಡೆಯುತ್ತಿದೆ. ಹೇಗಾದರೂ ಸರಿಯೆ.

ವಿವರಣೆ: ತಂದೆ, ತಮ್ಮ ಚಿಕ್ಕ ಮಗನನ್ನು ಕರೆದುಕೊಂಡು ಊರಿನ ಕಮ್ಮಾರನ ಮನೆಗೆ ನಡೆದರು. ಅವರು ಎರಡು ಗುದ್ದಲಿಗಳನ್ನು ಮಾಡಲು ಹೇಳಿದ್ದರು. ಕಮ್ಮಾರರ ಮನೆಗೆ ಹೋದಾಗ ಅವರು ಕೆಲಸದಲ್ಲಿದ್ದರು. ಇಬ್ಬರೂ ಕುಳಿತು ಕೆಲಸವನ್ನು ನೋಡತೊಡಗಿದರು. ಕಮ್ಮಾರ ಕಬ್ಬಿಣವನ್ನು ಒಲೆಯಲ್ಲಿ ಹಾಕಿ ತಿದಿಯನ್ನು ಒತ್ತಿ ಒತ್ತಿ ಬೆಂಕಿ ಮಾಡಿದ. ಕಪ್ಪು ಕಬ್ಬಿಣ ಕಾಯ್ದು ಕೆಂಪಗಾಯಿತು. ಆಗ ಕಮ್ಮಾರ ಕೆಂಪಗೆ ಕಾದಿದ್ದ ಕಬ್ಬಿಣವನ್ನು ಅಗಲವಾದ ಪಾತ್ರೆಯಲ್ಲಿಟ್ಟಿದ್ದ ನೀರಿನಲ್ಲಿ ಅದ್ದಿದ, ಛಸ್, ಛಸ್ ಎಂದು ಕಬ್ಬಿಣ ಸದ್ದು ಮಾಡುತ್ತ ಕಪ್ಪಗಾಯಿತು. ಆಗ ಆತ ಅದನ್ನು ಒಂದು ಕಬ್ಬಿಣದ ಕಟ್ಟೆಯ ಮೇಲಿಟ್ಟು ಸುತ್ತಿಗೆಯಿಂದ ಪಟಪಟನೆ ಹೊಡೆದ. ಆಗೊಂದಿಷ್ಟು ಕರಿ ಬಣ್ಣದ ಪುಡಿ ಉದುರಿತು. ಮತ್ತೆ ಕಬ್ಬಿಣವನ್ನು ಕಾಯಿಸಿ, ಈ ಬಾರಿ ಕಾದ ಕಬ್ಬಿಣದ ಮೇಲೇ ಹೊಡೆದ. ನಂತರ, ಮತ್ತೆ ನೀರಿನಲ್ಲಿ ಅದ್ದಿದ. ಹುಡುಗನಿಗೆ ಕುತೂಹಲ. ಕೇಳಿಯೇ ಬಿಟ್ಟ, 'ಮಾಮಾ ಕಬ್ಬಿಣವನ್ನು ನೀರಿಗೆ ಹಾಕುವುದಿದ್ದರೆ ಕಾಸಿದ್ದು ಏಕೆ? ಮತ್ತೆ ಮತ್ತೆ ಕಾಸಿ ಹೊಡೆಯುವುದೇಕೆ?', ಕಮ್ಮಾರ ಮಾವ ಹೇಳಿದ, 'ಮಗೂ ಕಬ್ಬಿಣ ಶುದ್ಧವಾಗುವುದು ಹೀಗೆಯೇ. ಚೆನ್ನಾಗಿ ಕೆಂಪಗೆ ಕಾಸಿದಾಗಲೂ ಕಸ ಹೊರಗೆ ಹೋಗಿ ಕಬ್ಬಿಣ ಮೃದುವಾಗುತ್ತದೆ. ಆಗ ಅದನ್ನು ನಮಗೆ ಬೇಕಾದ ಆಕಾರಕ್ಕೆ ಮಣಿಸಬಹುದು.' ಮನೆಗೆ ಬರುವಾಗ ತಂದೆ ಹೇಳಿದರು, 'ಪುಟ್ಟಾ, ಮನುಷ್ಯರಿಗೂ ಹಾಗೆಯೇ ಕಷ್ಟ, ತೊಂದರೆ, ನೋವುಗಳು ಬಂದಾಗ ಮನಸ್ಸು ಕುದಿಯುತ್ತದೆ, ತಪ್ಪುಗಳ ಬಗ್ಗೆ ಚಿಂತನೆ ಮಾಡುತ್ತದೆ. ತನಗೆ ಗೊತ್ತಿಲ್ಲದಂತೆ ಈ ಸಂಕಟ, ನೋವು ಬದುಕನ್ನು ಶುದ್ಧಮಾಡುತ್ತದೆ. ಕಷ್ಟಗಳನ್ನು ಅನುಭವಿಸಿದವನು ಪ್ರಪಂಚದ ಕಷ್ಟಕ್ಕೆ ಹೆದರುವುದಿಲ್ಲ.' ಹುಡುಗನಿಗೆ ಎಷ್ಟು ಅರ್ಥವಾಯಿತೋ? ಅವರ ಮಾತು ಸತ್ಯ.

ಬೆಂಕಿಯಲ್ಲಿ ಹಾದು ಬಂದ ಬಂಗಾರ ಪರಿಶುದ್ಧವಾಗುವಂತೆ, ಕಷ್ಟಗಳು, ನೋವುಗಳು ನಮ್ಮನ್ನು ಗಟ್ಟಿಮಾಡುತ್ತವೆ. ಕಗ್ಗ ಹೇಳುವಂತೆ ಅವು ವಿರೇಚಕ. ಔಷಧಿ ನಮ್ಮ ಹೊಟ್ಟೆಯನ್ನು ತೊಳೆದು, ಕಲ್ಮಷವನ್ನು ಹೊರಹಾಕುವಂತೆ, ನೋವು, ಚಿಂತೆಗಳು ಮನಸ್ಸಿನಲ್ಲಿಯ ಕೊಳೆಯನ್ನು ತೆಗೆದುಬಿಡುತ್ತವೆ. ವಾತಾವರಣದಲ್ಲಿ ಒತ್ತಡ ಕಡಿಮೆಯಾದಾಗ ಗಾಳಿ ಬೇರೆ ಕಡೆಯಿಂದ ನುಗ್ಗಿ ಬರುತ್ತದೆ. ಅಂತೆಯೇ, ಕಷ್ಟ, ಚಿಂತೆ, ನೋವುಗಳಿಂದ ಮನಸ್ಸು ಹಗುರಾದಾಗ ಅದನ್ನು ತುಂಬಲು ಉತ್ಸಾಹ, ಸಂತೋಷಗಳು ಬರುತ್ತವೆ. ಒಂದು ಹೊರಹಾಕುವ, ಮತ್ತೊಂದು ಒಳಗೆ ತುಂಬಿಕೊಳ್ಳುವ ಪ್ರಕ್ರಿಯೆಗಳು. ನೋವು, ಸಂಕಟಗಳು ರೋಗವಾದರೆ ಸಂತೋಷ, ಉತ್ಸಾಹಗಳು ಪಥ್ಯದ ಉಪಚಾರಗಳು. ಇವೆರಡರಿಂದಲೂ ಆತ್ಮಕ್ಕೆ ಚಿಕಿತ್ಸೆ ನಡೆಯುತ್ತದೆ. ಹೇಗಾದರೂ ಸರಿ, ಆತ್ಮ ಶುದ್ಧಿಯಾದರೆ ಒಳ್ಳೆಯದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಅಷ್ಟಮಿ ಗಂ. 08-31 **ನಕ್ಷತ್ರ:** ಉತ್ತರಫಲ್ಗುನಿ ಗಂ. 28-31 **ಯೋಗ:** ಸಿದ್ಧಿ(ಆಸ್ರಿಕ್) ಗಂ. 27-26, **ಕರಣ:** ಬವ ಗಂ. 08-31, ವೃಷಭ ಮಾಸದ 24ನೇ ದಿನ.
ರಾಹುಕಾಲ: ಮಧ್ಯಾಹ್ನ 12:00–01:30
ಸೂರ್ಯೋದಯ: 06-07 **ಸೂರ್ಯಾಸ್ತ:** 06-53
ಮುಸ್ಲಿಂ ದಿನಾಂಕ: 08 ಜುಲ್ಖಾಯದ್
ಅದೃಷ್ಟ ಸಂಖ್ಯೆ: 5, 11

ಮೇಷ: ವೃತ್ತಿಯಲ್ಲಿ ಬದಲಾವಣೆ ಅನಿವಾರ್ಯವೆನಿಸಲಿದೆ ಅಥವಾ ವೃತ್ತಿಯ ನಿಮಿತ್ತ ವಾಸ ಸ್ಥಳವನ್ನು ಬದಲಿಸಬೇಕಾದ ಅನಿವಾರ್ಯತೆ ಉಂಟಾಗುವುದು. ಹಣಕಾಸು ಸ್ಥಿತಿ ಸುಧಾರಣೆಗೊಳ್ಳುವುದು.

ವೃಷಭ: ನಿಮ್ಮ ಸಂಬಂಧಿಕರೆಲ್ಲ ಹತ್ತಿರದವರಾಗುತ್ತಾರೆ. ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆಗಳು ಬರುವುದು. ಆದರೆ ಯಾವುದೇ ತರಹದ ತೀರ್ಮಾನ ತೆಗೆದುಕೊಳ್ಳಬೇಡಿ.

ಮಿಥುನ: ನಿಮ್ಮಲ್ಲಿರುವ ಉದ್ವೇಗ ಹಾಗೂ ಕೆಲ ವೈಮನಸ್ಯಗಳು ತಂದೆಯ ತಿಳುವಳಿಕೆ ನುಡಿಯಿಂದ ದೂರಾಗುವುದು. ನಿಮ್ಮ ಸಮಯೋಚಿತವಾದ ಬುದ್ಧಿಶಕ್ತಿಯು ಸಂಕಟಗಳನ್ನು ದೂರ ಮಾಡಲಿದೆ.

ಕರ್ಕಾಟಕ: ಆಪ್ತರ ಕಷ್ಟಗಳ ಕಡೆಗೆ ಗಮನ ಹರಿಸುವುದು ಪುಣ್ಯದ ಕೆಲಸವೆಂದು ಭಾವಿಸಿ, ಪ್ರತಿಫಲವನ್ನು ಅಪೇಕ್ಷಿಸಬೇಡಿ. ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣವೆಂಬುವುದು ಮರೆತು ಮಕ್ಕಳನ್ನು ಅತಿಯಾಗಿ ಶಿಕ್ಷಿಸಬೇಡಿ.

ಸಿಂಹ: ವಿವಾಹದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮ. ಅಕ್ಕ ಅಥವಾ ತಂಗಿಯ ಆರೋಗ್ಯದ ಬಗ್ಗೆ ಖರ್ಚು ಮಾಡಬೇಕಾದ ಸಂದರ್ಭ ಬರುವುದು.

ಕನ್ಯಾ: ವ್ಯಾಪಾರದಲ್ಲಿ ಮೋಸ ಹೋಗುವ ಸಾಧ್ಯತೆ. ಹೊಸ ಮನೆಯನ್ನು ಭೋಗ್ಯಕ್ಕೆ ಕೊಡಲು ಮಾತುಕತೆ ನಡೆಯುವುದು. ನಿಮ್ಮ ಹಿರಿಯರ ಆಸ್ತಿ ಸ್ವತ್ತುಗಳು ನಿಮ್ಮ ಪಾಲಿಗೆ ಬರಲಿದೆ.

ತುಲಾ: ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಜಾಗ್ರತೆ ವಹಿಸುವುದು ಉತ್ತಮ. ಮಂಗಳ ಕಾರ್ಯಗಳು ಸುಗಮವಾಗಿ ನಡೆಯಲೆಂದು ಮನೆ ದೇವರಿಗೆ ಪೂಜೆ ಸಲ್ಲಿಸುವಿರಿ. ಹೆಚ್ಚಿನ ಬಂಡವಾಳ ಹೂಡುವಂತೆ ಮಗನಿಂದ ಒತ್ತಾಯ.

ವೃಶ್ಚಿಕ: ನಾಳೆಯ ಬಗ್ಗೆ ಯೋಚಿಸಿ ಬುದ್ಧಿವಂತಿಕೆಯಿಂದ ಬದುಕಬೇಕಾದ ದಿನ. ಮನೆಯ ಅಲಂಕಾರಗಳಿಗೆ ಹೇರಳ ಹಣ ವ್ಯಯಿಸುವಿರಿ. ರೈತರ ಫಸಲಿಗೆ ಉತ್ತಮ ಬೆಲೆಯ ನಿರೀಕ್ಷೆ.

ಧನು: ಮೊಬೈಲ್ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಹೆಚ್ಚಿನ ಆದಾಯ. ನಿಮ್ಮ ಅಭಿವೃದ್ಧಿಯ ವಿಚಾರದಲ್ಲಿ ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ.

ಮಕರ: ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಏಕಾಗ್ರತೆ ಅನಿವಾರ್ಯವಾಗುತ್ತದೆ. ಹಿತೈಷಿಗಳಾಗಿದ್ದ ಬಂಧು-ಮಿತ್ರರು ಹಿತಶತ್ರುಗಳಾಗುವ ಸಾಧ್ಯತೆಯು ಅಧಿಕವಾಗಿ ತೋರುವುದು.

ಕುಂಭ: ಸಾರ್ವಜನಿಕರಲ್ಲಿ ಹೆಚ್ಚಾಗಿ ಬೆರೆಯುವ ಸಂದರ್ಭ ಬರುವುದರಿಂದ ಆರೋಗ್ಯದಲ್ಲಿ ಗಮನ ವಹಿಸಿ. ನಿಮ್ಮ ದಿನ ನಿತ್ಯದ ವೃತ್ತಿಗಳಲ್ಲಿ ಬದಲಾವಣೆ ಇರುವುದಿಲ್ಲ. ಗಂಭೀರವಾಗಿ ಚಿಂತಿಸಿ ನಿರ್ಧರಿಸುವುದು ಉತ್ತಮ.

ಮೀನ: ಉದ್ಯೋಗದಲ್ಲಿ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವ ಸಂದರ್ಭ ಬರಲಿದೆ. ಮನೆ ಕಟ್ಟಲು ಅಥವಾ ಮನೆಯನ್ನು ನವೀಕರಿಸಲು ಹಣದ ವ್ಯವಸ್ಥೆ ಸಹೋದರರಿಂದ ಆಗಲಿದೆ.

ಪದಬಂಧ 4982

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ತಾಪವಿದ್ದಾಗ ನಡೆಸಿದ ಸಲ್ಲದ ವ್ಯವಹಾರ (4)
5.ಯಜಮಾನನ ಹುಟ್ಟುಗುಣ (4)
6.ಧಾನ್ಯಕುಯ್ಯಲು ಬಳಸುವ ಕೊಂಕಿದಧಾರೆಯುಳ್ಳ ಸಾಧನ (4)
8.ಬಟ್ಟೆಗಳನ್ನು ಮಡಿ ಮಾಡುವ ಅಗಸ (4)
12.ನಸುಕಿನಲ್ಲಿ ಕಾಣಿಸಿದ ಕಾಡು ಹೂ (4)
14.ಬಿಗುಮಾನವಲ್ಲ! ಇದು ಆತ್ಮ ಪ್ರತಿಷ್ಠೆ (4)
15.ಅವನು ತೋರಿಸುತ್ತಿರುವ ಸಹಾನುಭೂತಿ! (4)
16.ಗರತಿ ಸೇರಿರುವ ವರ್ಗ! (4)

ಮೇಲಿಂದ ಕೆಳಕ್ಕೆ
1.ಶತ್ರುವೇ ಹುಟ್ಟಿಲ್ಲದವನು (5)
2.ಸಮಾಧಾನದಿಂದ ಸೇರುವಿಕೆ (4)
3.ಕುಳ್ಳ ಕೊಡುತ್ತಿರುವ ತೊಂದರೆ! (4)
4.ನೆಕ್ಕಲು ಬಂದವನದ್ದು ವಿಚಿತ್ರ ವರ್ತನೆ! (3)
7.ಹೆಣವನ್ನು ಹೂಳುವ ಸ್ಥಳ (2)
9.ಕುಳ್ಳ ಇಲ್ಲಿ ಕಾಣುತ್ತಿದ್ದಾನೆ (3)
10.ಶಾಖವನ್ನು ಅಳೆಯುವ ಸಾಧನ (5)
11.ಸಭಿಕನಿಗೆ ಕಾಣುತ್ತಿರುವ ಹೊಕ್ಕಳು (2)
12.ಸಸ್ಯಗಳಿಂದ ತೆಗೆದಿರುವ ಜಿಡ್ಡು (4)
13.ಮಡಿವಂತನು ನೀಡಿರುವ ಪ್ರತ್ಯುತ್ತರ! (4)
14.ಅಮೃತವೆಂದಿರುವುದು ಬರೀ ಸುಳ್ಳು! (3)



4981ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನೆ 3.ಹರಾಮಿ
5.ಪುರುಷ 7.ನವಜಾತ
9.ಅಸಲು 10.ದಾಂಗುಡಿ
11.ಕರ್ನಾಟಕ 13.ಜಗತಿ
15.ರಿವಾಜು 16.ಟಕ್ಕ

ಮೇಲಿಂದ ಕೆಳಕ್ಕೆ:
2.ನೆನಪು 3.ಹರುಷ
4.ಮಿಥುನ 6.ರುಮಾಲು
8.ತಕ್ಕಡಿ 9.ಅಳ್ಳಕ
10.ದಾಂಡಿಗ 12.ಕಸ್ತೂರಿ
13.ಜಹಜು 14.ತಿಕ್ಕಾಟ

ಸುಡೊಕು 5368

		1						
			1		6			
3		5		2			8	1
	8						1	
		4	7		3	8		9
5	9						7	
		2		7		1		5
1					5			
	5			4		2		8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5367 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಪಂಜಾಬ್ ಮಾಜಿ ಸಚಿವ ಧರ್ಮಸೋತ್ ಬಂಧನ

ಒಂದನೇ ಪುಟದಿಂದ

ಕೆಲವು ದಿನಗಳ ಹಿಂದೆ ಜಿಲ್ಲಾ ಅರಣ್ಯ ಅಧಿಕಾರಿ ಗುರಮನ್‌ಪ್ರೀತ್ ಸಿಂಗ್ ಮತ್ತು ಗುತ್ತಿಗೆದಾರ ಹರ್ಮಿಂದರ್ ಸಿಂಗ್ ಹಮ್ಮಿ ಅವರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿಸಲಾಗಿತ್ತು. ಧರ್ಮಸೋತ್ ಸಚಿವರಾಗಿದ್ದಾಗ ಅರಣ್ಯ ಇಲಾಖೆಯಲ್ಲಿ ನಡೆದ ಅಕ್ರಮಗಳ ಕುರಿತ ವಿವರಗಳನ್ನು ಇವರಿಬ್ಬರೂ ಒದಗಿಸಿದ್ದಾರೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಚರಣ್‌ಜಿತ್ ಸಿಂಗ್ ಚನ್ನಿ ನೇತೃತ್ವದ ಸರ್ಕಾರದಲ್ಲಿ ಅರಣ್ಯ ಸಚಿವರಾಗಿದ್ದ ಮಾಜಿ ಸಚಿವ ಸಂಗತ್ ಸಿಂಗ್ ಗಿಲ್ಜಿಯಾನ್ ಅವರ ಹೆಸರನ್ನೂ ಎಫ್‌ಐ-ಆರ್‌ನಲ್ಲಿ ಸೇರಿಸಲಾಗಿದೆ. ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ಅಮರಿಂದರ್ ಸಿಂಗ್ ರಾಜಾ ಅವರು ಧರ್ಮಸೋತ್ ಬಂಧನವನ್ನು 'ರಾಜಕೀಯ ಸೇಡು' ಎಂದು ಆರೋಪಿಸಿದ್ದಾರೆ.

'ಪ್ರತಿ ಮರವನ್ನು ಕಡಿಯಲು ₹500 ಅನ್ನು ಧರ್ಮಸೂತ್‌ಗೆ ನೀಡಲಾಗುತ್ತಿತ್ತು. ಕಾಲಾಂತರದಲ್ಲಿ ಸಚಿವರಿಗೆ ₹ 1.25 ಕೋಟಿ ಕಮಿಷನ್ ನೀಡಿದ ಆರೋಪ ಇದೆ' ಅವರು ಹೇಳಿದ್ದಾರೆ.

'ಮಾಜಿ ಸಚಿವರು ತಮ್ಮ ಇಲಾಖೆಯ ಅಧಿಕಾರಿಗಳ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿ ಮತ್ತು ನಿರಾಕ್ಷೇಪಣಾ ಪತ್ರ ನೀಡಲೂ ಹಣ ತೆಗೆದುಕೊಳ್ಳುತ್ತಿದ್ದರು' ಎಂದು ನಿರ್ದೇಶಕರು ತಿಳಿಸಿದ್ದಾರೆ.

ಮಾಜಿ ಸಚಿವರ ಪರವಾಗಿ ಅವರ ಸಹಾಯಕರು ಹಣ ಪಡೆಯುತ್ತಿದ್ದರು ಎನ್ನಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form



ಶ್ರದ್ಧಾಂಜಲಿ

ಶ್ರೀಮಾನ್ ಶ್ರೀ ಎಸ್. ಗೋವಿಂದಪ್ಪನವರು

ಶ್ರೀಯುತರು ದಿನಾಂಕ: 07.06.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಮನೆಯ ವಿಳಾಸ: ನಂ. 1, 1ನೇ ಅಡ್ಡರಸ್ತೆ, ಸೀತಪ್ಪ ಲೇಔಟ್, ಮನ್ನಾರಾಯನ ಪಾಳ್ಯ, ಆರ್.ಟಿ. ನಗರ,ಬೆಂಗಳೂರು–32. ಇವರ ಅಂತ್ಯಕ್ರಿಯೆಯನ್ನು ಇಂದು ಮಧ್ಯಾಹ್ನ 2:00 ಘಂಟೆಗೆ ಚೋಳನಾಯಕನಹಳ್ಳಿ, ಸೀತಪ್ಪ ಲೇಔಟ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಕುಟುಂಬ ವರ್ಗ

ಸವಿನೆನಪು

ಸುಂದರ್ ಗೋಪಿ

ಅದ್ಭುತ ಮನುಷ್ಯ, ಅತ್ಯುತ್ತಮ ಸಹುದ್ಯೋಗಿ ಮತ್ತು ಸ್ನೇಹಜೀವಿಯೊಬ್ಬ 07 ಜೂನ್, 2022ರಂದು ಸ್ವರ್ಗಸ್ಥರಾದರು.

IAI INDIA PVT. LTD. | ELCOM SYSTEMS PVT. LTD.

ಐದನೇ ವರ್ಷದ ಚಿರಸ್ಮರಣೆ

ಜನನ: 15-07-1957

ನಿಧನ: 08-06-2017

ಶ್ರೀ ಕೆ.ಎ. ರಾಮಚಂದ್ರರೆಡ್ಡಿ (ಕೂಡ್ಲು)

ಅಣ್ಣಯ್ಯರೆಡ್ಡಿರವರ ಮಗ,

ಮಾಲೀಕರು: ಎಸ್.ಬಿ.ಡಬ್ಲ್ಯೂ ಆಸ್ಫಲೆಟ್ಸ್, ಪ್ರಥಮದರ್ಜೆ ಗುತ್ತಿಗೆದಾರರು, ಬೆಂಗಳೂರು

ನೀವು ನಮ್ಮನಗಲಿ ಇಂದಿಗೆ ಐದು ವರ್ಷಗಳು ಕಳೆದರೂ, ನಿಮ್ಮ ಪ್ರೀತಿ, ತ್ಯಾಗಮಯ ಜೀವನ, ತಾಳ್ಮೆ, ಆದರ್ಶಗಳೇ ನಮ್ಮ ಬದುಕಿಗೆ ದಾರಿದೀಪ, ನಿಮ್ಮ ಮರ್ಗದರ್ಶನದಲ್ಲಿ ಸಾಗುತ್ತಿರುವ

ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತ: ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು

For Online Classified Booking

Name Change / Education / Property / Job / Services & many more

Log on to :

dhclassifieds.com

ಕಸ್ತೂರಿರಂಗನ್ ಸಮಿತಿ ವರದಿಗೆ ವಿರೋಧಿಸಿದ ರಾಜ್ಯಗಳ ಅಹವಾಲು ಪರಿಶೀಲನೆ

ಪಶ್ಚಿಮಘಟ್ಟ: ಹೊಸ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಘಟ್ಟ ಪ್ರದೇಶ-ಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಸ್ತೂರಿರಂಗನ್ ಸಮಿತಿ ನೀಡಿದ ವರದಿಗೆ ವಿರೋಧ ಸೂಚಿಸಿದ ರಾಜ್ಯಗಳ ಅಹವಾಲುಗಳ-ನ್ನು ಪರಿಶೀಲಿಸುವ ಸಲುವಾಗಿ ಕೇಂದ್ರ ಪರಿಸರ ಸಚಿವಾಲಯವು ಹೊಸ ಸಮಿತಿಯನ್ನು ರಚಿಸಿದೆ.

ಕಸ್ತೂರಿರಂಗನ್ ಸಮಿತಿಯು ಪಶ್ಚಿಮ ಘಟ್ಟ ಪ್ರದೇಶದ ಮೂರನೇ ಒಂದಕ್ಕಿಂತಲೂ ಅಧಿಕ ಭಾಗವನ್ನು 'ಪರಿಸರ ಸೂಕ್ಷ್ಮ ಪ್ರದೇಶ' ಎಂದು ಗುರುತಿಸಲು ಸಲಹೆ ನೀಡಿತ್ತು. ಕರ್ನಾಟಕ ಸಹಿತ ಪಶ್ಚಿಮ ಘಟ್ಟ ಪ್ರದೇಶ ವ್ಯಾಪ್ತಿಗೆ ಬರುವ ಆರು ರಾಜ್ಯಗಳಿಂದ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿರುವ ಕಾರಣ ಹಿರಿಯ ಅರಣ್ಯ ಅಧಿಕಾರ ಸಂಜಯ್ ಕುಮಾರ್ ನೇತೃತ್ವದ ಐವರು ಸದಸ್ಯರ ಸಮಿತಿಯನ್ನು ರಚಿಸಲಾಗಿದೆ.

ಈಗಾಗಲೇ ರಚನೆಯಾಗಿರುವ ಈ ಸಮಿತಿ ಮೇ 30ರೊಳಗೆ ತನ್ನ ವರದಿ ಸಲ್ಲಿಸಬೇಕಿತ್ತು. ಆದರೆ ಆ ಗಡುವು ಮೀರಿರುವ ಕಾರಣ ವರದಿ ಸಲ್ಲಿಕೆಗೆ ಇನ್ನಷ್ಟು ಸಮಯ ನೀಡುವ ಸಾಧ್ಯತೆ ಇದೆ ಎಂದು ಮೂಲಗಳ 'ಪ್ರಜಾವಾಣಿ'ಗೆ ತಿಳಿಸಿವೆ.

ಪಶ್ಚಿಮ ಘಟ್ಟ ಸಂರಕ್ಷಣೆಗೆ ಸಂಬಂಧಿಸಿದಂತೆ ಮಾಧವ ಗಾಡ್ಗೀಳ್ ಸಮಿತಿ ವರದಿ ಸಲ್ಲಿಸಿ 12 ವರ್ಷ ಕಳೆದಿದ್ದು, ಕಸ್ತೂರಿರಂಗನ್ ಸಮಿತಿ ವರದಿ ನೀಡಿ ದಶಕವೇ ಕಳೆದಿದೆ. ಕಸ್ತೂರಿರಂಗನ್ ವರದಿ ಆಧರಿಸಿ ಪರಿಸರ ಸಚಿವಾಲಯವು 2014ರಲ್ಲಿ ಪರಿಸರ ಸೂಕ್ಷ್ಮ ಪ್ರದೇಶ ಗುರುತಿಸುವ ನಿಟ್ಟನಲ್ಲಿ ಕರಡು ಅಧಿಸೂಚನೆ ಹೊರಡಿಸಿತ್ತು. ವಿವಿಧ ರಾಜ್ಯಗಳಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ನಾಲ್ಕು ಬಾರಿ ಕರಡು ವರದಿಯನ್ನು ದೃಢೀಕರಿಸುವ ಅವಕಾಶ ತಪ್ಪಿಹೋಗಿದೆ. ಸದ್ಯದ ಅಧಿಸೂಚನೆಗೆ ಇದೇ 30ರವರೆಗೆ ಅವಧಿ ಇದೆ.

'ಕೇರಳದ ಬಿಷಪ್‌ಗಳು ಸಹಿತ ಹಲವರಿಂದ ನಾವು ಸಲಹೆಗಳನ್ನು ಸ್ವೀಕರಿಸಿದ್ದೇವೆ. ಹೊಸ ಸಮಿತಿ ಇವುಗಳನ್ನೆಲ್ಲ ಪರಿಶೀಲಿಸಲಿದೆ' ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದರು.

ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯ ಸರ್ಕಾರಗಳ ಪ್ರತಿನಿಧಿಗಳೊಂದಿಗೆ ಆಕ್ಷೇಪಗಳ ಕುರಿತು ಸಮಗ್ರ ಚರ್ಚೆ ನಡೆಸುವುದು, ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಈಚೆಗೆ ಸಂಭವಿಸಿದ ನೈಸರ್ಗಿಕ ವಿಕೋಪಗಳನ್ನು ಗಮನದಲ್ಲಿ ಇಟ್ಟುಕೊಂಡು ಬಂದಿರುವ ಸಲಹೆಗಳನ್ನು ಪರಶೀಲಿಸುವ ಹೊಣೆಗಾರಿಕೆಯನ್ನು ಈ ಸಮಿತಿಗೆ ನೀಡಲಾಗಿದೆ.

ಜನರ ಧ್ವನಿ ಆಲಿಸುವ ಆಶಯ

ಪರಿಸರ ಸೂಕ್ಷ್ಮ ಪ್ರದೇಶವನ್ನು ಗುರುತಿಸುವಾಗ ಗ್ರಾಮವೊಂದನ್ನು ಒಂದು ಘಟಕವೆಂದ ಪರಿಗಣಿಸಬೇಕೇ? ಅರಣ್ಯ, ಅರಣ್ಯೇತರ ಪ್ರದೇಶಗಳನ್ನು ಗುರುತಿಸುವುದು, ಅಧಿಸೂಚಿತ ಪ್ರದೇಶಗಳಿಂದ ಕಂದಾಯ ಪ್ರದೇಶಗಳನ್ನು ಹೊರಗಿಡುವುದರ ಬಗ್ಗೆ ಸಮಿತಿ ನಿರ್ಧಾರ ಕೈಗೊಳ್ಳಲಿದೆ. ಜತೆಗೆ ಸ್ಥಳೀಯ ಜನರ ಅಗತ್ಯಗಳ ಬಗ್ಗೆಯೂ ಪರಿಶೀಲನೆ ನಡೆಸಲಿದೆ.

ಸಾಂದರ್ಭಿಕ ಚಿತ್ರ

ಸಿಡಿಎಸ್ ಆಯ್ಕೆ ನಿಯಮ ಬದಲು

ಪ್ರಜಾವಾಣಿ ವಾರ್ತೆ

ನವದೆಹಲಿ: ರಕ್ಷಣಾ ಪಡೆಗಳ ಮುಖ್ಯಸ್ಥರ (ಸಿಡಿಎಸ್) ಹುದ್ದೆಗೆ 62 ವರ್ಷದೊಗಿನ ಸೇವಾ ನಿರತ ಅಥವಾ ನಿವೃತ್ತ ಲೆಫ್ಟಿನೆಂಟ್ ಜನರಲ್‌ಗಳು, ಏರ್ ಮಾರ್ಷಲ್‌ಗಳ, ವೈಸ್ ಅಡ್ಮಿರಲ್‌ಗಳನ್ನು ಆಯ್ಕೆ ಮಾಡುವುದಕ್ಕೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ನಿಯಮಗಳಿಗೆ ತಿದ್ದುಪಡಿ ತಂದಿದೆ.

ಸದ್ಯ ಇರುವ ನಿಯಮದಂತೆ ಮೂರೂ ರಕ್ಷಣಾ ಪಡೆಗಳ ಮುಖ್ಯ-ಸ್ಥರಾಗಿದ್ದವರು ಮಾತ್ರ ಸಿಡಿಎಸ್ ಹುದ್ದೆಗೆ ಏರಲು ಸಾಧ್ಯವಿತ್ತು. ಇನ್ನು ಮುಂದೆ ಆಯ್ಕೆಯಲ್ಲಿ ಇನ್ನಷ್ಟು ವೈವಿಧ್ಯ ಸಾಧ್ಯವಾಗಲಿದೆ.

ಕಳೆದ ವರ್ಷ ಡಿಸೆಂಬರ್ 8ರಂದು ಹೆಲಿಕಾಪ್ಟರ್ ದುರಂತದಲ್ಲಿ ಬಿಪಿನ್ ರಾವತ್ ಅವರು ಮೃತಪಟ್ಟ ಬಳಿಕ ಸಿಡಿಎಸ್ ಹುದ್ದೆ ಖಾಲಿ ಉಳಿದಿತ್ತು. ಇದೀಗ ಸಿಡಿಎಸ್ ನೇಮಕಾತಿ ನಿಯಮದಲ್ಲಿ ಬದಲಾವಣೆ ತಂದಿರುವುದರಿಂದ ದೇಶದ ರಕ್ಷಣಾ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಬಲ್ಲ ಅಧಿಕಾರಿಯನ್ನೇ ಸಿಡಿಎಸ್ ಆಗಿ ಆಯ್ಕೆ ಮಾಡಲು ಸರ್ಕಾರ ಮುಂದಾಗಲಿದೆ ಎಂದು ಹೇಳಲಾಗುತ್ತಿದೆ.

ಲಾಲು ಕೊಠಡಿಯಲ್ಲಿ ಅಗ್ನಿ ಅವಘಡ

ಮೇದಿನಿನಗರ್ (ಜಾರ್ಖಂಡ್) (ಪಿಟಿಐ): ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ಉಳಿದುಕೊಂಡಿದ್ದ ಕೊಠಡಿಯಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಸ್ವಲ್ಪದರಲ್ಲೇ ಅವರು ಅಪಾಯದಿಂದ ಪಾರಾಗಿದ್ದಾರೆ.

ಮಂಗಳವಾರ ಬೆಳಿಗ್ಗೆ ಸುಮಾರು 8 ಗಂಟೆ ವೇಳೆಗೆ ಲಾಲು ಅವರು ಉಪಾಹಾರ ಸೇವಿಸುತ್ತಿದ್ದ ವೇಳೆ ಫ್ಯಾನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಅವರ ಸಹಾಯಕರು ಬೆಂಕಿಯನ್ನು ನಂದಿಸಿದ್ದಾರೆ. ಯಾರಿಗೂ ಯಾವುದೇ ಅಪಾಯವಾಗಿಲ್ಲ.

13 ವರ್ಷಗಳ ಹಿಂದಿನ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿ ಬುಧವಾರ ವಿಶೇಷ ನ್ಯಾಯಲಯದ ಮುಂದೆ ಹಾಜರಾಗಲು ಲಾಲು ಪ್ರಸಾದ್ ಅವರು ಸೋಮವಾರ ಮೇದಿನಿನಗರಕ್ಕೆ ಬಂದಿದ್ದಾರೆ.

ಪಿಯು ಪಠ್ಯ ಪರಿಷ್ಕರಣೆ ಇಲ್ಲ

ಒಂದನೇ ಪುಟದಿಂದ

ಸಚಿವರ ನಿರ್ದೇಶನವನ್ನು ಪರಿಗಣಿಸುವಂತೆ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಪ್ರಧಾನ ಕಾರ್ಯದರ್ಶಿ ಪತ್ರ ಬರೆದಿದ್ದರು.

ವೈದಿಕ ಧರ್ಮ, ಬ್ರಾಹ್ಮಣ ಸಮುದಾಯದ ಭಾವನೆಗಳಿಗೆ ಧಕ್ಕೆ ತರುವ ಅಂಶಗಳಿವೆ ಎಂದು ಕಾರಣಕ್ಕೆ ದ್ವಿತೀಯ ಪಿಯುಸಿಯಲ್ಲಿ ಇತಿಹಾಸ ಪಠ್ಯದಲ್ಲಿ ಅಧ್ಯಾಯ 4.2ರ 'ಹೊಸ ಧರ್ಮಗಳ ಉದಯ' ಪಠ್ಯಕ್ಕೆ ಅಖಿಲ ಭಾರತ ಬ್ರಾಹ್ಮಣ ಸಮಾಜ ಆಕ್ಷೇಪ ವ್ಯಕ್ತಪಡಿಸಿತ್ತು. ಪಠ್ಯದಲ್ಲಿ-ರುವ ಈ ಆಕ್ಷೇಪಾರ್ಹ ಅಂಶಗಳನ್ನು ತೆಗೆದುಹಾಕುವುದಾಗಿ ನಿಕಟಪೂರ್ವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಕೂಡಾ ಹೇಳಿದ್ದರು.

ಸ್ವಾಮೀಜಿಗಳ ಮಾಹಿತಿಗೂ ಕತ್ತರಿ

ಒಂದನೇ ಪುಟದಿಂದ

ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯು ಪಠ್ಯಪುಸ್ತಕ ಪರಿಷ್ಕರಣೆ ಮಾಡಿದಾಗ, 'ಸಿದ್ಧಗಂಗಾ ಮಠವು ಶ್ರೀ ಶಿವಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅಕ್ಷರ ಮತ್ತು ಅನ್ನ ದಾಸೋಹದ ಕಾರ್ಯ ನಡೆಸುತ್ತಿದೆ. ರಾಮನಗರ ಜಿಲ್ಲೆಯಲ್ಲಿ ನೆಲೆಸಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಬೆಳೆದ ಆದಿ ಚುಂಚನಗಿರಿ ಮಠದ ಶೈಕ್ಷಣಿಕ ಸೇವೆಯು ಅಪೂರ್ವವಾಗಿದ್ದು, ಮೂಲ ಶಿಕ್ಷಣ, ವೃತ್ತಿ ಶಿಕ್ಷಣ ಕಾಲೇಜುಗಳನ್ನು ನಡೆಸುತ್ತಿದೆ. ಚಿತ್ರದುರ್ಗದ ಮುರುಘರಾಜೇಂದ್ರ ಮಠ ಮತ್ತು ಸಿರಿಗೆರೆ ತರಳಬಾಳು ಮಠಗಳ ಶೈಕ್ಷಣಿಕ ಸೇವೆಯೂ ಗಮನಾರ್ಹ' ಎಂಬ ಭಾಗವನ್ನು ಅಳವಡಿಸಿತ್ತು.

ಆದರೆ, ಚಕ್ರತೀರ್ಥ ಸಮಿತಿಯು ಈ ಭಾಗಕ್ಕೆ ಕತ್ತರಿ ಪ್ರಯೋಗಿಸಿದೆ. 'ಸಿದ್ಧಗಂಗಾ ಮಠ ಹಾಗೂ ಆದಿ ಚುಂಚನಗಿರಿ ಮಠ, ಮುರುಘರಾಜೇಂದ್ರ ಮಠ ಮತ್ತು ಸಿರಿಗೆರೆ ತರಳಬಾಳು ಮಠಗಳ ಶೈಕ್ಷಣಿಕ ಸೇವೆಯೂ ಗಮನಾರ್ಹ' ಎಂಬ ಒಂದು ವಾಕ್ಯವನ್ನು ಮಾತ್ರ ಉಳಿಸಿಕೊಂಡಿದೆ. ಸಿದ್ಧಗಂಗಾ ಮಠ ಹಾಗೂ ಆದಿಚುಂಚನಗಿರಿ ಮಠಗಳ ಕುರಿತು ವಿವರಗಳನ್ನು ಪಾಠದಿಂದ ಕೈ ಬಿಡುವ ಮೂಲಕ ಸಮಿತಿಯು ಅನ್ಯಾಯ ಮಾಡಿದೆ ಎಂಬ ಆರೋಪ ಕೇಳಿಬಂದಿದೆ.

ನಮಾಜ್ ನಿಷೇಧಕ್ಕೆ ಆಗ್ರಹ: ಪ್ರಕರಣ ದಾಖಲು

ಲಖನೌ (ಪಿಟಿಐ): ನಮಾಜ್ ನಿಷೇಧಿಸಬೇಕು ಎಂದು ಹೇಳಿಕೆ ನೀಡಿದ ಅಖಿಲ ಭಾರತೀಯ ಹಿಂದೂ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿ ಮಹಾಮಂಡಲೇಶ್ವರ್ ಅನ್ನಪೂರ್ಣ ಭಾರತಿ ಉರುಫ್ ಪೂಜಾ ಶಕುನ್ ಪಾಂಡೆ ವಿರುದ್ಧ ಅಲೀಗಡ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೂಜಾ ಶಕುನ್ ಪಾಂಡೆಗೆ ಅಲೀಗಡದ ಹೆಚ್ಚುವರಿ ನಗರ ಮ್ಯಾಜಿಸ್ಟ್ರೇಟರು ನೋಟಿಸ್ ನೀಡಿದ್ದಾರೆ.

ನೋಟಿಸ್‌ಗೆ ಉತ್ತರಿಸಿರುವ ಪಾಂಡೆ, ಸತ್ಯವನ್ನು ಹೇಳಿದ್ದರಿಂದ ಯಾವುದೇ ಧರ್ಮದವರ ಭಾವನೆಗಳಿಗೆ ನೋವಾಗಿದ್ದರೆ ವಿಷಾದಿಸುತ್ತೇನೆ ಎಂದಿದ್ದಾರೆ. ತಮ್ಮ ಹೇಳಿಕೆಯು ಪ್ರಚೋದನಾಕಾರಿಯಲ್ಲ ಎಂದೂ ಅವರು ಸಮರ್ಥಿಸಿಕೊಂಡಿದ್ದಾರೆ.

ಪ್ರಕರಣ ದಾಖಲಿಸಿರುವುದ-ಕ್ಕೆ 'ಅಖಿಲ ಭಾರತೀಯ ಹಿಂದೂ ಮಹಾಸಭಾ' ವಕ್ತಾರ ಅಶೋಕ್ ಪಾಂಡೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್‌ನಿಂದ ನಾಳೆ ಧರಣಿ: ಡಿಕೆಶಿ

ಒಂದನೇ ಪುಟದಿಂದ

ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ ಎಂಬ ಸಚಿವ ನಾಗೇಶ್ ಆರೋಪ ಕುರಿತಂತೆ, 'ಬಸವಣ್ಣ, ಅಂಬೇಡ್ಕರ್, ಕುವೆಂಪು ವಿಚಾರಗಳು ರಾಜಕೀಯ ಮಾಡುವ ವಿಚಾರ ಗಳೇ? ಸಿದ್ದಗಂಗಾ ಶ್ರೀ, ನಿರ್ಮಲಾನಂದ ಸ್ವಾಮೀಜಿ, ಮುರುಘಾ ಶರಣರು ರಾಜಕಾರಣಿಗಳೇ' ಎಂದು ಪ್ರಶ್ನಿಸಿದರು.

'ಬರಗೂರು ರಾಮಚಂದ್ರಪ್ಪ ಅವರ ಸಮಿತಿ ಅನೇಕ ವಿಚಾರಗಳನ್ನು ಕೈಬಿಟ್ಟಿತ್ತು' ಎಂಬ ಬಿಜೆಪಿ ಆರೋಪದ ಬಗ್ಗೆ, 'ಅವರು ಯಾವುದಾದರು ವಿಚಾರ ಕೈಬಿಟ್ಟಿದ್ದರೆ ಸೇರಿಸಲಿ. ಆದರೆ, ಕುವೆಂಪು ಸೇರಿದಂತೆ ಹಲವು ಮಹನೀಯರ ವಿಚಾರವನ್ನು ಕೈಬಿಟ್ಟು, ತಿರುಚಿ ಅವರಿಗೆ ಅಪಮಾನ ಮಾಡುತ್ತಿರುವುದೇಕೆ?' ಎಂದು ಪ್ರಶ್ನಿಸಿದರು.

ಅತ್ಯಾಚಾರ ಪ್ರಕರಣ: ವಿಡಿಯೊ ಹಂಚಿದ ಶಾಸಕನ ವಿರುದ್ಧ ಪ್ರಕರಣ

ಹೈದರಾಬಾದ್ (ಪಿಟಿಐ): ಜುಬಿಲಿ ಹಿಲ್ಸ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರದ ಚಿತ್ರಗಳು ಮತ್ತು ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಆರೋಪದ ಮೇಲೆ ತೆಲಂಗಾಣದ ಬಿಜೆಪಿ ಶಾಸಕ ಎಂ.ರಘುನಂದನ್ ರಾವ್ ವಿರುದ್ಧ ಹೈದರಾಬಾದ್ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತ ಬಾಲಕಿಯ ಗುರುತನ್ನು ಬಹಿ-ರಂಗಪಡಿಸಿದ ಆರೋಪದ ಮೇರೆಗೆ ಐಪಿಸಿ ಸೆಕ್ಷನ್ 228ಎ ಅಡಿಯಲ್ಲಿ ಶಾಸಕರ ವಿರುದ್ಧ ಭಾರತೀಯ ದಂಡ ಸಂಹಿತೆಯ (ಐಪಿಸಿ) ಕಲಂ 228ಎ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಜೂನ್ 4ರಂದು ಪತ್ರಿಕಾಗೋಷ್ಠಿ-ಯಲ್ಲಿ ಮಾತನಾಡಿದ್ದ ಬಿಜೆಪಿ ಶಾಸಕರು, ವಿಡಿಯೊದಲ್ಲಿ ಕಂಡುಬರುವ ಯುವಕ ಎಐಎಂಐಎಂ ಶಾಸಕರೊಬ್ಬರ ಮಗ. ಆತನು ಗ್ಯಾಂಗ್‌ರೇಪ್‌ನ-ಲ್ಲಿ ಭಾಗಿಯಾಗಿದ್ದಾನೆ ಎಂದು ಆರೋಪಿಸಿದ್ದರು. ಈ ಪ್ರಕರಣ-ದಲ್ಲಿ ಶಾಸಕರ ಪುತ್ರನ ಪಾತ್ರವನ್ನು ಸಾಬೀತುಪಡಿಸಲು ತಮ್ಮ ಬಳಿ ಹೆಚ್ಚಿನ ಪುರಾವೆಗಳಿವೆ ಎಂದೂ ಹೇಳಿದ್ದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

facebook LIVE

ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

ITIಯಲ್ಲಿ ಹೊಸದೇನಿದೆ ಗೊತ್ತೇ?

ಬೆಳಿಗ್ಗೆ 11ರಿಂದ 12

ಮಾಹಿತಿ ನೀಡುವವರು: ಯೋಗೇಶ್ವರ ಎಸ್. (ಕೆಎಎಸ್) ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9

ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

2 ವರ್ಷದ ಮಗುವಿಗೆ ಸಿಕ್ಕ ಗನ್: ಗುಂಡು ಸಿಡಿದು ತಂದೆ ಸಾವು

ಒರ್ಲಾಂಡೊ, ಅಮೆರಿಕ (ಎಪಿ): ಮನೆಯಲ್ಲಿ ಸಿಕ್ಕ ಗನ್‌ನಿಂದ ಎರಡು ವರ್ಷದ ಮಗು ಆಕಸ್ಮಿಕವಾಗಿ ಹಾರಿಸಿದ ಗುಂಡಿನಿಂದ ತಂದೆ ಮೃತಪಟ್ಟ ಘಟನೆ ಫ್ಲಾರಿಡಾದಲ್ಲಿ ನಡೆದಿದೆ. ತಾಯಿಯ ವಿರುದ್ಧ ನಿರ್ಲಕ್ಷ್ಯ ಮತ್ತು ಉದ್ದೇಶಪೂರ್ವಕವಲ್ಲದ ಕೊಲೆ ಪ್ರಕರಣ ದಾಖಲಿಸಿದ್ದಾರೆ.

ಗನ್ ಅನ್ನು ಸುಲಭವಾಗಿ ಕೈಗೆ ಸಿಗುವಂತೆ ಇಡಲಾಗಿತ್ತು. ಆಟವಾಡುತ್ತಿದ್ದ ಮಗು ಗನ್ ಎತ್ತಿಕೊಂಡಿದ್ದು, ಆಕಸ್ಮಿಕವಾಗಿ ಗುಂಡು ಸಿಡಿದಿದೆ.

ಲಂಡನ್: ವಿಶ್ವಾಸಮತ ಗೆದ್ದ ಬ್ರಿಟನ್ ಪ್ರಧಾನಿ, ಪಕ್ಷದ ನಾಯಕತ್ವ ಆಬಾಧಿತ

ಲಂಡನ್ (ಪಿಟಿಐ): ಕನ್ಸರ್ವೇಟಿವ್ ಪಕ್ಷದ ನಾಯಕತ್ವ ಕುರಿತಂತೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ತಮ್ಮ ವಿರುದ್ಧದ ಅವಿಶ್ವಾಸ ನಿರ್ಣಯದಲ್ಲಿ ಗೆಲುವು ಸಾಧಿಸಿದ್ದಾರೆ. ಪಕ್ಷದ 211 ಸಂಸದರು ಜಾನ್ಸನ್ ಅವರ ನಾಯಕತ್ವಕ್ಕೆ ಬೆಂಬಲ ಸೂಚಿಸಿದರು.

ಸಂಸತ್ತಿನಲ್ಲಿ ಸೋಮವಾರ ತಡರಾತ್ರಿ ನಿರ್ಣಯದ ಮೇಲೆ ಮತದಾನ ನಡೆಯಿತು. ಜಾನ್ಸನ್ ನಾಯಕತ್ವದ ವಿರುದ್ಧ 148 ಸದಸ್ಯರು ಹಕ್ಕು ಚಲಾಯಿಸಿದರು. ಈ ಫಲಿತಾಂಶದ ಮೂಲಕ ಆಡಳಿತರೂಢ ಕನ್ಸರ್ವೇಟಿವ್ ಪಕ್ಷದಲ್ಲಿ ಪಕ್ಷದ ನಾಯಕತ್ವ ಕುರಿತಂತೆ ಬೋರಿಸ್ ಜಾನ್ಸನ್ ಸ್ಥಾನ ಆಬಾಧಿತವಾಗಿದೆ. ಫಲಿತಾಂಶ ಕುರಿತು ಪ್ರತಿಕ್ರಿಯಿಸಿದ ಜಾನ್ಸನ್, 'ರಾಜಕಾರಣ ಮತ್ತು ದೇಶದ ಹಿತದೃಷ್ಟಿಯಿಂದ ಇದು ಅತ್ಯುತ್ತಮ ಫಲಿತಾಂಶ' ಎಂದರು.

ಇದು ನಿರ್ಣಾಯಕ ಹಾಗೂ ಸಮಾಧಾನ ನೀಡಬಹುದಾದ ಫಲಿತಾಂಶ. ಇದರ ಅರ್ಥ, ಸರ್ಕಾರವು ನಾವು ಇನ್ನು ಜನರಿಗೆ ಸಂಬಂಧಿಸಿದ ವಿಷಯಗಳತ್ತ ಗಮನಹರಿಸಲು ನೆರವಾಗಲಿದೆ. ನನಗೆ, ನನ್ನದೇ ಪಕ್ಷದ ಸಂಸದರಿಂದ ಉತ್ತಮ ತೀರ್ಪು ವ್ಯಕ್ತವಾಗಿದೆ. 2019ಕ್ಕಿಂತಲೂ ಹೆಚ್ಚಿನ ಶಕ್ತಿ ಬಂದಿದೆ' ಎಂದು ತಿಳಿಸಿದರು.

ಗೋಪ್ಯ ಮತದಾನ ನಡೆದಿದ್ದು, ನಾಯಕತ್ವ ಉಳಿಸಿಕೊಳ್ಳಲು ಜಾನ್ಸನ್ ಅವರು ಕನಿಷ್ಠ 180 ಸದಸ್ಯರ ಬೆಂಬಲ ಪಡೆಯಬೇಕಿತ್ತು.

₹76,390 ಕೋಟಿ ಮೌಲ್ಯದ ಶಸ್ತ್ರಾಸ್ತ್ರ ಖರೀದಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ದೇಶೀಯ ಕೈಗಾರಿಕೆಗಳಿಂದ ₹76,390 ಕೋಟಿ ಮೌಲ್ಯದ ಶಸ್ತ್ರಾಸ್ತ್ರಗಳ ಖರೀದಿಗೆ ಕೇಂದ್ರ ಸರ್ಕಾರ ಸೋಮವಾರ ಅನುಮೋದನೆ ನೀಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮುಖ್ಯಸ್ಥರಾಗಿರುವ ಭದ್ರತಾ ಸ್ವಾಧೀನ ಮಂಡಳಿ (ಡಿಎಸಿ), ಮುಂದಿನ ಪೀಳಿಗೆಯ ಅತ್ಯಾಧುನಿಕ ಕಣ್ಗಾವಲು ನೌಕಾ ವ್ಯವಸ್ಥೆ (ಎನ್‌ಜಿಸಿ), ಸುಕೊಯ್-30 ಎಂಕೆಐ ಏರೊ ಎಂಜಿನ್ಸ್, ರಾಡಾರ್‌ಗಳು ಸೇರಿದಂತೆ ಇನ್ನಿತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಖರೀದಿಗೆ ಅನುಮೋದನೆ ನೀಡಿದೆ ಎಂದು ರಕ್ಷಣಾ ಇಲಾಖೆ ಮಾಹಿತಿ ನೀಡಿದೆ. ಡಿಜಿಟಲ್ ಕರಾವಳಿ ಗಾರ್ಡ್ ಯೋಜನೆಯನ್ನು ಸಹ ಮಂಡಳಿ ಅನುಮೋದಿಸಿದೆ.

ಶ್ರೀಲಂಕಾ: ಅಧ್ಯಕ್ಷರ ಅಧಿಕಾರ ಮೊಟಕು, ಚರ್ಚೆ ಮುಂದೂಡಿಕೆ

ಕೊಲಂಬೊ (ಪಿಟಿಐ): ಶ್ರೀಲಂಕಾ ಅಧ್ಯಕ್ಷರ ಅಧಿಕಾರ ಮೊಟಕುಗೊಳಿಸುವ ಸಂವಿಧಾನದ 21ನೇ ತಿದ್ದುಪಡಿ ಪ್ರಸ್ತಾವ ಅಂಗೀಕರಿಸುವುದನ್ನು ಶ್ರೀಲಂಕಾದ ಸಚಿವ ಸಂಪುಟ ಒಂದು ವಾರ ಮುಂದೂಡಿದೆ. ಆಡಳಿತ ಪಕ್ಷದ ಕೆಲ ಸದಸ್ಯರಿಂದಲೇ ವ್ಯಕ್ತವಾದ ತೀವ್ರ ಪ್ರತಿರೋಧ ವಿಷಯದ ಚರ್ಚೆ ಮುಂದೂಡಿಕೆಗೆ ಕಾರಣವಾಗಿದೆ.

ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಹೆಚ್ಚಿನ ಅಧಿಕಾರ ನೀಡುವ ಸಂವಿಧಾನದ 20ಎ ವಿಧಿಯನ್ನು ರದ್ದುಗೊಳಿಸಲು ಈಗ 21ನೇ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಕರಡು ಪ್ರಸ್ತಾವವನ್ನು ಸೋಮವಾರ ಸಂಪುಟ ಸಭೆಯ ಪರಾಮರ್ಶೆಗೆ ಇಡಲಾಗಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

HAEID REQUIRES Experienced Educated 4WH Automatic Car Driver at Rajajinagar Bangalore. Attractive Package & Immediate Placement Contact:+91 6366443134.

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

ಕಾರ್ಪೊರೇಟ್ ಕಂಪನಿಯಲ್ಲಿ ಟ್ರೈನಿಂಗ್ನೊಂದಿಗೆ 30 ಸಾವಿರ ಸಂಬಳ. ಪದವೀಧರರಿಗೆ ಮಾತ್ರ. ಕರೆ ಮಾಡಿ 7605058339

Hospital & Medical Jobs

ತಕ್ಷಣ ಬೇಕಾಗಿದ್ದಾರೆ: ಮಹಿಳೆಯರು, ಪುರುಷರು, ಹೋಂನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ, ವಸತಿಯೊಂದಿಗೆ (ಸರ್ಕಾರಿ ನೊಂದಾಯಿತ ಸಂಸ್ಥೆ). 9739292222, 9742892222, 9743135666

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Security & Detectives

REPUTED SECURITY Agency Requires Security Guards, Security Supervisors, Field Officers, Area/ Training/ Operations Manager. Contact: 9886349781/ 8073668816

Wanted

ಮನೆಕೆಲಸ (12,000-15,000) / ಹೋಂನರ್ಸ್ (15,000-18,000), ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ- ವಸತಿ ಉಚಿತ. ಉಡುಪಿ- 7411499276

Walk-in

ಕನ್ನಡ ಮಾತನಾಡುವ ಟೆಲಿಕಾಲರ್ಸ್ ಯುವತಿಯರು ತಕ್ಷಣ ಬೇಕಾಗಿದ್ದಾರೆ,ವಯಸ್ಸು 30 ವರ್ಷದ ಕೆಳಗೆ, ಕಲ್ಯಾಣ್ ನಗರ ಸುತ್ತಮುತ್ತ ವಾಸಿಸುವವರಿಗೆ ಆದ್ಯತೆ. 8884773331/ 08048531033

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

Out-Station

HASSAN BELURU Road Ring Road to 3 km 45000 Sqft Commercial Alination Land Contact: 9590353813

Sites

Airport Road

BDA BIAAPA approved Corner Sites for Sale 14 kms Before Airport 500 meters from Stone Hill School Direct Owner 7337616557 8904050690

ವ್ಯಾಪಾರ

Business to Business

Services

ನಾವು ವೈಯಕ್ತಿಕ, ವ್ಯಾಪಾರ, ಆಸ್ತಿ, ಕೃಷಿ ಮತ್ತು ಶೈಕ್ಷಣಿಕ ಸಾಲವನ್ನು ಒದಗಿಸುತ್ತೇವೆ. (ಏಜೆಂಟರು ಸ್ವಾಗತ) Ph. 8222841175, 8278291749

Business Offers

General

ಭಾರತದಾದ್ಯಂತ ಶಾಖೆ ಹೊಂದಿರುವ IMC ಕಂಪನಿಯ ದಿನಬಳಕೆ ವಸ್ತುಗಳು ಬ್ಯೂಟಿಕೇರ್ ವಸ್ತುಗಳನ್ನು ನೀವಿರುವ ಜಾಗದಲ್ಲಿ ಮಾರಾಟಮಾಡಿ ಸಾವಿರ ಹಣಗಳಿಸಿ.9743309498

ಪ್ರವಾಸ

Travel

22.07.2022ರಿಂದ 12ದಿನಗಳು ವಿಮಾನ ಮತ್ತು ಏಸಿ ಬಸ್ಸು ಹಾಗೂ ಏಸಿ ರೂಂಸಹಿತ 45000/...ಅಮರನಾಥ್, ವೈಷ್ಣೋದೇವಿ,ಕಾಶ್ಮೀರ,ದೆಹಲಿ, ಅಮೃತಸರ್,ವಾಘಬಾರ್ಡರ್. ವಿಷ್ಣನ್ ಟ್ರಾವಲ್ ಲೈನ್ಸ್,163/3 ಆರ್.ವಿ.ರಸ್ತೆ,ಬೆಂಗಳೂರು 8105657052, 9480182865.

27.06.2022, 14 ದಿನಗಳ ವೈಷ್ಣವಿದೇವಿ ಕಾಶ್ಮಿರ,ಗುಲ್ಮಾರ್ಗ್ ಅಮರನಾಥ ಯಾತ್ರೆ. 17.07.2022, 11 ದಿನಗಳ ಕಾಶಿಯಾತ್ರೆ. ಸಂಪರ್ಕಿಸಿ: ವಿಷ್ಣನ್ ಟೂರ್ಸ್ ಅಂಡ್ ಟ್ರಾವಲ್ಸ್ ತ್ಯಾಗರಾಜನಗರ ಬೆಂಗಳೂರು-70. 9342287551 8050629305

ಶ್ರೀರಾಜರಾಜೇಶ್ವರಿ ಟೂರ್ಸ್ 9743895346 9739618243, 22.6.2022 5ದಿನ ತಮಿಳುನಾಡು. 3.7.22 8ದಿನ ಶಿರಡಿ ಪಂಚಜ್ಯೋತಿರ್ಲಿಂಗ. 7.8.22 7ದಿನ ಕಾಶಿ,ಅಯೋಧ್ಯ, ನೈಮೀಶಾರಣ್ಯ 18.9.22 14ದಿನ ಚಾರ್ಧಾಮ್ 6.10.22 12ದಿನ ನಾರ್ತ್ಈಸ್ಟ್

26.06.2022 07.07.2022 ರಿಂದ 10/13/24 ದಿನಗಳ ಪುರಿಜಗನ್ನಾಥ್ ಕಾಶಿ.,ಗಯಾ, ಅಯೋಧ್ಯ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ, ವೈಷ್ಣೋದೇವಿ ಅಮೃತ್‌ಸರ್ ದೆಹಲಿ/ 07.08.2022 07.09.2022 ರಿಂದ 11/13 ದಿನಗಳ ಮುಕ್ತಿನಾಥ್, ಜನಕಪುರಿ,ನೇಪಾಳ ನೈಮೀಶಾರಣ್ಯ, ಗೋರಕ್‌ಪುರ್ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290 9019301300

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಸೂಚನೆ

ನಾನು ಡಾಕ್ಟರ್ ಸುಹಾಸ್ ಎಸ್, ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ ನಾನು ಟಿವಿ 5 ಕನ್ನಡ ಚಾನೆಲ್ ಅಥವಾ ಶ್ರೀ ಬಾಲಕೃಷ್ಣ ಅವರ ಸೋಶಿಯಲ್ ಟಿವಿ ಅಥವಾ ಸ್ಕಿನ್ ಅಂಡ್ ಹೇರ್ ಫ್ಯಾಕ್ಟರಿ ಇವರೊಂದಿಗೆ ಯಾವುದೇ ರೀತಿಯ ವೃತ್ತಿಪರ ಅಥವಾ ಇನ್ನಾವುದೇ ರೀತಿಯ ಸಂಬಂಧವನ್ನು ಹೊಂದಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇನೆ. ಈ ಮೇಲಿನ ವ್ಯಕ್ತಿಗಳು ಅಥವಾ ಸಂಸ್ಥೆಗಳು ಯಾವುದೇ ಆಡಿಯೋ/ ವಿಡಿಯೋ/ ಪ್ರಿಂಟ್/ ಇತರೆ ವಿಷಯವನ್ನು ನೇರವಾಗಿ ಆಗಲಿ ಅಥವಾ ಪರೋಕ್ಷವಾಗಿ ಆಗಲಿ ಪ್ರಚಾರ ಮಾಡುವ ಅಥವಾ ಯಾವುದೇ ಉತ್ಪನ್ನ ಅಥವಾ ಸೇವೆಯನ್ನು ಬೆಂಬಲಿಸುವದನ್ನು ನಾನು ಸ್ಪಷ್ಟವಾಗಿ ಅಥವಾ ಸೂಚ್ಯವಾಗಿ ಅನುಮೋದಿಸುವುದಿಲ್ಲ. ಅಂತಹ ಪ್ರಾತಿನಿಧ್ಯಕ್ಕೆ ನಾನು ಯಾರಿಗೂ ಜವಾಬ್ದಾರನಾಗಿರುವುದಿಲ್ಲ

ಡಾ॥ ಸುಹಾಸ್.ಎಸ್
ಲೈಫ್ ಇಸ್ ಬ್ಯೂಟಿಫುಲ್ ಕ್ಲಿನಿಕ್, ಬಸವನಗುಡಿ, ಬೆಂಗಳೂರು, ಫೋನ್–9844627550

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Classifieds EDUCATION SPECIAL

For More Details Contact:
Jerry Louis : 9731810277
Vishal GM : 9845114560
080- 45557161 | 163 |164

SPECIAL RATES FOR
Admission Notice,
Education Success
Congratulation Ads

Email : dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರಣಜಿ: ಒಂದೇ ದಿನ 21 ವಿಕೆಟ್‌ಗಳ ಪತನ; ಉತ್ತರ ಪ್ರದೇಶಕ್ಕೆ ಹಿನ್ನಡೆ, ಮರುಹೋರಾಟ

ವೇಗಿಗಳ ದಾಳಿಗೆ ಒಲಿದ ಮುನ್ನಡೆ

● ಗಿರೀಶ ದೊಡ್ಡಮನಿ

ಬೆಂಗಳೂರು: ಒಂದೇ ದಿನದಲ್ಲಿ ಇಪ್ಪತ್ತೊಂದು ವಿಕೆಟ್‌ಗಳ ಪತನ ಮತ್ತು ಕರ್ನಾಟಕ ಬಳಗಕ್ಕೆ ಇನಿಂಗ್ಸ್ ಮುನ್ನಡೆ..

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ಚುರುಕುಬಿಸಿಲಿನಲ್ಲಿ ನಡೆದ ಕರ್ನಾಟಕ ಮತ್ತು ಉತ್ತರಪ್ರದೇಶ ನಡುವಣ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದ ಎರಡನೇ ದಿನದಾಟದ ಸಾರಾಂಶ ಇದು. ಇದಲ್ಲದೇ ಮೂರನೇ ದಿನವಾದ ಬುಧವಾರವೇ ರೋಚಕ ಫಲಿತಾಂಶ ನೀಡುವ ನಿರೀಕ್ಷೆಯನ್ನೂ ಈ ಪಂದ್ಯ ಹುಟ್ಟುಹಾಕಿದೆ. ಮೊದಲ ಇನಿಂಗ್ಸ್‌ನಲ್ಲಿ ತ್ರಿವಳಿ ವೇಗಿಗಳು ತೋರಿರುವ ಪ್ರತಾಪದಿಂದಾಗಿ ಕರ್ನಾಟಕವೇ ಜಯಿಸುವ ನೆಚ್ಚಿನ ತಂಡವಾಗಿದೆ.

ಪಂದ್ಯದ ಮೊದಲ ದಿನವಾದ ಸೋಮವಾರ ಕರ್ನಾಟಕವು 72 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 213 ರನ್ ಗಳಿಸಿತ್ತು. ಎರಡನೇ ದಿನ ಬೆಳಿಗ್ಗೆ ಕ್ರೀಸ್‌ನಲ್ಲಿದ್ದ ಶ್ರೇಯಸ್ ಅಯ್ಯರ್ (ಅಜೇಯ 56; 80ಎ) ಪೂರೈಸಿದರು. ತಂಡವು 84 ಓವರ್‌ಗಳಲ್ಲಿ 253 ರನ್ ಗಳಿಸಿ ಆಲೌಟ್ ಆಯಿತು.

ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಉತ್ತರಪ್ರದೇಶ ತಂಡವು ರೋನಿತ್ ಮೋರೆ (47ಕ್ಕೆ3), ವೈಶಾಖ್ ವಿಜಯಕುಮಾರ್ (29ಕ್ಕೆ2) ಮತ್ತು ವಿದ್ವತ್ ಕಾವೇರಪ್ಪ (19ಕ್ಕೆ2) ಅವರ ವೇಗದ ದಾಳಿಯ ಮುಂದೆ ತತ್ತರಿಸಿತು. 155 ರನ್‌ಗಳಿಗೆ ಕುಸಿಯಿತು. ಮನೀಷ್ ಪಾಂಡೆ ಬಳಗ 98 ರನ್‌ಗಳ ಮುನ್ನಡೆ ಗಳಿಸಿತು. ಎರಡನೇ ಇನಿಂಗ್ಸ್‌ನಲ್ಲಿ ಕರ್ನಾಟಕವು 34 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 100 ರನ್ ಗಳಿಸಿದೆ. ಒಟ್ಟು 198 ರನ್‌ಗಳ ಮುನ್ನಡೆ ಹೊಂದಿದೆ.

ಬಾಲಂಗೋಚಿ ಬ್ಯಾಟರ್‌ಗಳಾದ ಶಿವಂ ಮಾವಿ (32 ರನ್)ಮತ್ತು ಅಂಕಿತ್ ರಜಪೂತ್ (ಔಟಾಗದೆ 18) ಗಳಿಸಿದ 44 ರನ್‌ಗಳ ಜೊತೆಯಾಟವೇ ಉತ್ತರ ಪ್ರದೇಶದ ಇನಿಂಗ್ಸ್‌ನ ದೊಡ್ಡ ಮೊತ್ತದ ಪಾಲುದಾರಿಕೆ ಆಟ. ರೋನಿತ್ ಮತ್ತು ವೈಶಾಖ್ ಅವರು ಅಗ್ರಕ್ರಮಾಂಕದ ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಕಳಿಸಿದರು.

ಲೈನ್ ಮತ್ತು ಲೆಂಗ್ತ್ ಶಿಸ್ತು ಕಾಪಾಡಿಕೊಂಡು ಬೌಲಿಂಗ್ ಮಾಡಿದ ಯುವಪ್ರತಿಭೆ ವಿದ್ವತ್ ಮಧ್ಯಮ ಕ್ರಮಾಂಕಕ್ಕೆ ಬಿಸಿ ಮುಟ್ಟಿಸಿದರು. ಏಳು ಓವರ್ ಬೌಲಿಂಗ್‌ನಲ್ಲಿ ಮೂರು ಮೇಡನ್ ಮಾಡಿದರು. 23 ವರ್ಷದ ವಿದ್ವತ್‌ಗೆ ಇದು ಎರಡನೇ ಪ್ರಥಮ ದರ್ಜೆ ಪಂದ್ಯ. ಸ್ಪಿನ್ನರ್ ಗೌತಮ್ ಕೂಡ ಎರಡು ವಿಕೆಟ್ ಪಡೆದರು. ಫೀಲ್ಡರ್‌ಗಳು ಎರಡು ಕ್ಯಾಚ್‌ಗಳನ್ನು ಕೈಚೆಲ್ಲದಿದ್ದರೆ ಇನ್ನೂ ಕಡಿಮೆ ಮೊತ್ತಕ್ಕೆ ಉತ್ತರಪ್ರದೇಶ ಆಲೌಟ್ ಆಗುವ ಸಂಭವವಿತ್ತು.

ಉತ್ತರಪ್ರದೇಶದ ತಿರುಗೇಟು: ಎರಡನೇ ದಿನ ಮಧ್ಯಾಹ್ನವೇ ಲಭಿಸಿದ ಮುನ್ನಡೆಯಿಂದ ಸಂತಸದಿಂದ ಎರಡನೇ ಇನಿಂಗ್ಸ್ ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ತಂಡಕ್ಕೆ ಉತ್ತರಪ್ರದೇಶ ತಿರುಗೇಟು ನೀಡಿತು.

ಬೆಳಿಗ್ಗೆಯಿಂದ ವೇಗಿಗಳು ಮೆರೆದಾಡಿದ್ದ ಪಿಚ್‌ನಲ್ಲಿ ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ (32ಕ್ಕೆ3) ಮಿಂಚಿದರು. ಹದವಾದ ವೇಗ ಬೆರೆಸಿದ ಅವರ ಸ್ಪಿನ್ ಎಸೆತಗಳಿಗೆ ಮಯಂಕ್ ಅಗರವಾಲ್, ಶ್ರೇಯಸ್ ಗೋಪಾಲ್ ಮತ್ತು ವೈಶಾಖ್ ವಿಕೆಟ್ ಒಪ್ಪಿಸಿದರು. ಒಂಟಿ ರನ್ ಗಳಿಸುವ ನಿರ್ಧಾರಕ್ಕೆ ಮನೀಷ್ ಪಾಂಡೆ ರನ್‌ಔಟ್ ಆದರು. ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದ ಆರ್. ಸಮರ್ಥ್ ಅವರನ್ನು ಪ್ರಿನ್ಸ್ ಯಾದವ್ ಕ್ಲೀನ್‌ಬೌಲ್ಡ್ ಮಾಡಿದರು. ಕರುಣ್ ನಾಯರ್ ಮತ್ತು ಕೆ.ವಿ. ಸಿದ್ಧಾರ್ಥ್ ವಿಕೆಟ್‌ಗಳನ್ನು ಗಳಿಸಿದ ಅಂಕಿತ್ ರಜಪೂತ್ ತೊಡೆ ತಟ್ಟಿ ಸಂಭ್ರಮಿಸಿದರು.

ರೋನಿತ್ ಮೋರೆ –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ವಿದ್ವತ್ ಕಾವೇರಪ್ಪ

ವೈಶಾಖ್ ವಿಜಯಕುಮಾರ್

ಸ್ಕೋರ್ ಕಾರ್ಡ್

ಕರ್ನಾಟಕ ಮೊದಲ ಇನಿಂಗ್ಸ್ 253 (84 ಓವರ್‌ಗಳಲ್ಲಿ)

ಶ್ರೇಯಸ್ ಔಟಾಗದೆ 56 (80ಎ, 4X6, 6X2), ವೈಶಾಖ್ ಸಿ ಧ್ರುವ ಬಿ ಅಂಕಿತ್ 12 (26ಎ, 4X2), ರೋನಿತ್ ಬಿ ಯಶ್ 6 (25ಎ,4X1), ವಿದ್ವತ್ ಸಿ ರಿಂಕು ಬಿ ಯಶ್ 4 (10ಎ, 4X1)

ಇತರೆ (ಲೆಗ್‌ಬೈ 1, ವೈಡ್ 1, ನೋಬಾಲ್ 1)3

ವಿಕೆಟ್ ಪತನ: : 8-214 (ವೈಶಾಖ್ ವಿಜಯಕುಮಾರ್;72.5), 9-243 (ರೋನಿತ್ ಮೋರೆ; 81.2), 10-253 (ವಿದ್ವತ್ ಕಾವೇರಪ್ಪ;83.6))

ಬೌಲಿಂಗ್: ಯಶ್ ದಯಾಳ್ 15-4-43-2, ಅಂಕಿತ್ ರಜಪೂತ್ 14-2-42-1, ಶಿವಂ ಮಾವಿ 14-4-60-3, ಸೌರಭ್ ಕುಮಾರ್ 32-7-73-4, ಪ್ರಿನ್ಸ್ ಯಾದವ್ 4-0-15-0, ಕರಣ್ ಶರ್ಮಾ 5-0-19-0

ಉತ್ತರ ಪ್ರದೇಶ ಮೊದಲ ಇನಿಂಗ್ಸ್ 155 (37.3 ಓವರ್‌ಗಳಲ್ಲಿ))

ಆರ್ಯನ್ ಸಿ ಶರತ್ ಬಿ ರೋನಿತ್ 5 (9ಎ, 4X1), ಸಮರ್ಥ್‌ಸಿಂಗ್ ಸಿ ಶರತ್ ಬಿ ವೈಶಾಖ್ 0 (3ಎ), ಪ್ರಿಯಂ ಸಿ ಮತ್ತು ಬಿ ರೋನಿತ್ 39 (59ಎ, 4X7), ಕರಣ್ ಸಿ ಶರತ್ ಬಿ ವೈಶಾಖ್ 2 (25ಎ), ರಿಂಕು ಸಿ ಕರುಣ್ ಬಿ ಗೌತಮ್ 33 (42ಎ, 4X6), ಧ್ರುವ ಸಿ ಶರತ್ ಬಿ ರೋನಿತ್ 9 (11ಎ, 4X2), ಪ್ರಿನ್ಸ್ ಬಿ ವಿದ್ವತ್ 0 (10ಎ), ಸೌರಭ್ ಸಿ ಶರತ್ ಬಿ ಗೌತಮ್ 0 (3ಎ), ಶಿವಂ ಸಿ ಕರುಣ್ ಬಿ ಶ್ರೇಯಸ್ 32 (35ಎ, 4X3, 6X1), ಯಶ್ ಸಿ ಮಯಂಕ್ ಬಿ ವಿದ್ವತ್ 13 (13ಎ, 4X1, 6X1), ಅಂಕಿತ್ ಔಟಾಗದೆ 18 (16ಎ, 4X1, 6X1)

ಇತರೆ (ಲೆಗ್‌ಬೈ 3, ನೋಬಾಲ್ 1) 4

ವಿಕೆಟ್ ಪತನ: :1-2 (ಸಮರ್ಥ್ ಸಿಂಗ್;1.1),2-10(ಆರ್ಯನ್ ಜುಯಾಲ್ 2.5), 3-34 (ಕರಣ್ ಶರ್ಮಾ; 12.3), 4-76 (ಪ್ರಿಯಂ ಗರ್ಗ್; 20.5), 5-86 (ಧ್ರುವ ಜುರೇಲ್; 22.6), 6-92 (ರಿಂಕುಸಿಂಗ್;25.4), 7-92 (ಪ್ರಿನ್ಸ್ ಯಾದವ್; 26.4), 8-92 (ಸೌರಭ್ ಕುಮಾರ್; 27.1), 9-111(ಯಶ್ ದಯಾಳ್; 30.3), 10-155 (ಶಿವಂ ಮಾವಿ;37.3)

ಬೌಲಿಂಗ್:ರೋನಿತ್ ಮೋರೆ 12-1-47-3, ವೈಶಾಖ ವಿಜಯಕುಮಾರ್ 8-1-29-2, ವಿದ್ವತ್ ಕಾವೇರಪ್ಪ 7-3-19-2, ಕೃಷ್ಣಪ್ಪ ಗೌತಮ್ 8-1-43-2, ಶ್ರೇಯಸ್ ಗೋಪಾಲ್ 2.3 -0-14-1

ಕರ್ನಾಟಕ ಎರಡನೇ ಇನಿಂಗ್ಸ್ 8ಕ್ಕೆ100 (34 ಓವರ್‌ಗಳಲ್ಲಿ)

ಸಮರ್ಥ್ 11 (24ಎ, 4X1), ಮಯಂಕ್ ಸಿ ಜುರೇಲ್ ಬಿ ಸೌರಭ್ 22 (29ಎ, 4X5), ಕರುಣ್ ಸಿ ಸಿಂಗ್ ಬಿ ರಜಪೂತ್ 10 (29ಎ, 4X1), ಸಿದ್ಧಾರ್ಥ್ ಬಿ ರಜಪೂತ್ 15 (44ಎ, 4X3), ಮನೀಷ್ ರನ್‌ಔಟ್/ ಕರಣ್ 4 (5ಎ, 4X1), ಶ್ರೇಯಸ್ ಸಿ ಆರ್ಯನ್ ಬಿ ಸೌರಭ್ 3 (28ಎ), ಶರತ್ ಔಟಾಗದೆ 10 (34ಎ, 4X1), ಗೌತಮ್ ಸಿ ಧ್ರುವ ಬಿ ಶಿವಂ 1 (5ಎ), ವೈಶಾಖ್ ಎಲ್‌ಬಿಡಬ್ಲ್ಯು ಸೌರಭ್ 5 (8ಎ, 4X1)

ಇತರೆ 19 (ಬೈ 8, ಲೆಗ್‌ಬೈ 9, ನೋಬಾಲ್ 2)

ವಿಕೆಟ್ ಪತನ: 1-33 (ಸಮರ್ಥ್; 8.1), 2-35 (ಮಯಂಕ್ ಅಗರವಾಲ್; 11.1), 3-67 (ಕರುಣ್ ನಾಯರ್; 18.3), 4-71 (ಮನೀಷ್; 20.2), 5-77 (ಸಿದ್ಧಾರ್ಥ್; 22.5), 6-84 (ಶ್ರೇಯಸ್; 29.3), 7-95 (ಗೌತಮ್; 32.1), 8-100 (ವೈಶಾಖ್; 33.6)

ಬೌಲಿಂಗ್:ಯಶ್ ದಯಾಳ್ 6-0-25-0, ಅಂಕಿತ್ ರಜಪೂತ್ 8-2-15-2, ಪ್ರಿನ್ಸ್ ಯಾದವ್ 4-2-6-1, ಸೌರಭ್ 14-4-32-3, ಮಾವಿ 2-0-5-1

ಸುವೇದ್ ದ್ವಿಶತಕ: ಮುಂಬೈ ಬೃಹತ್ ಮೊತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವಪ್ರತಿಭೆ ಸುವೇದ್ ಪಾರ್ಕರ್ ದ್ವಿಶತಕದ ಬಲದಿಂದ ಮುಂಬೈ ತಂಡವು ರಣಜಿ ಟ್ರೋಫಿ ಎಂಟರ ಘಟ್ಟದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಬೃಹತ್ ಮೊತ್ತ ದಾಖಲಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನ ಶತಕ ಗಳಿಸಿದ್ದ ಸುದೇವ್ ಎರಡನೇ ದಿನ ದ್ವಿಶತಕ ದಾಟಿದರು. 447 ಎಸೆತಗಳನ್ನು ಎದುರಿಸಿ 252 ರನ್ ಗಳಿಸಿದರು. ಇದರಿಂದಾಗಿ ಮುಂಬೈ ತಂಡವು ಉತ್ತರಾಖಂಡ ಎದುರಿನ ಪಂದ್ಯದಲ್ಲಿ 8 ವಿಕೆಟ್‌ಗಳಿಗೆ 647 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಅದಕ್ಕುತ್ತರವಾಗಿ ಉತ್ತರಾಖಂಡ ತಂಡವು 11 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 39 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಆಲೂರು ಕ್ರೀಡಾಂಗಣ: ಮೊದಲ ಇನಿಂಗ್ಸ್– ಮುಂಬೈ: 166.4 ಓವರ್‌ಗಳಲ್ಲಿ 8ಕ್ಕೆ647 ಡಿಕ್ಲೇರ್ಡ್ (ಸುವೇದ್ ಪಾರ್ಕರ್ 252, ಸರ್ಫರಾಜ್ ಖಾನ್ 153, ಶಮ್ಸ್ ಮುಲಾನಿ 59, ತನುಷ್ ಕೋಟ್ಯಾನ್ 28; ಧಪೋಲಾ 89ಕ್ಕೆ3) ಉತ್ತರಾಖಂಡ: 11 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 39 (ಕಮಲ್ ಔಟಾಗದೆ 27)

ಮೊದಲ ಇನಿಂಗ್ಸ್: ಪಂಜಾಬ್: 71.3 ಓವರ್‌ಗಳಲ್ಲಿ 219, ಮಧ್ಯಪ್ರದೇಶ: 99 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 238 (ಯಶ್ ದುಬೆ 20, ಹಿಮಾಂಶು ಮಂತ್ರಿ 89, ಶುಭಂ ಶರ್ಮಾ ಔಟಾಗದೆ 102, ರಜತ್ ಪಾಟೀದಾರ್ ಔಟಾಗದೆ 20, ಮಯಂಕ್ ಮಾರ್ಕಂಡೆ 70ಕ್ಕೆ2)

ಜಸ್ಟ್ ಕ್ರಿಕೆಟ್ ಮೈದಾನ: ಮೊದಲ ಇನಿಂಗ್ಸ್: ಬಂಗಾಳ : 178 ಓವರ್‌ಗಳಲ್ಲಿ 5ಕ್ಕೆ577 (ಸುದೀಪ್ ಕುಮಾರ್ ಘರಮಿ 186, ಅನುಸ್ಟುಪ್ ಮಜುಂದಾರ್ 117, ಮನೋಜ್ ತಿವಾರಿ ಔಟಾಗದೆ 54, ಅಭಿಷೇಕ್ ಪೊರೆಲ್ 68, ಸುಶಾಂತ್ ಮಿಶ್ರಾ 122ಕ್ಕೆ2) ಜಾರ್ಖಂಡ್ ವಿರುದ್ಧ.

ರಾಜ್ಯದ ಬಾಲಕಿಯರಿಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಬಾಲಕಿಯರ ತಂಡವು ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದೆ.

ಹರಿಯಾಣದ ಪಂಚಕುಲಾದಲ್ಲಿ ನಡೆಯುತ್ತಿರುವ ಕೂಟದ 4X100 ಮೀ. ರಿಲೇಯಲ್ಲಿ ಮಂಗಳವಾರ ರಾಜ್ಯದ ಅಂಕಿತಾ ದೇವಾಡಿಗ, ಉನ್ನತಿ ಅಯ್ಯಪ್ಪ, ಪ್ರಿಯಾಂಕಾ ಒಲೆಕಾ ಮತ್ತು ನಿಯೋಲ್ ಆ್ಯನಾ ಕಾರ್ನೆಲಿಯೊ ಅವರಿದ್ದ ತಂಡಕ್ಕೆ ಪದಕ ಒಲಿಯಿತು. 48.89 ಸೆಕೆಂಡುಗಳಲ್ಲಿ ಈ ಅಥ್ಲೀಟ್‌ಗಳು ಗುರಿ ಮುಟ್ಟಿದರು.

ಈ ವಿಭಾಗದ ಚಿನ್ನದ ಪದಕವು ಮಹಾರಾಷ್ಟ್ರ (47.27 ಸೆ.) ಗೆದ್ದುಕೊಂಡರೆ, ಕಂಚು ತಮಿಳುನಾಡು (49.92 ಸೆ.) ತಂಡದ ಬಾಲಕಿಯರ ಪಾಲಾಯಿತು.

ಸಂಯುಕ್ತಾಗೆ 5 ಚಿನ್ನ: ಮಹಾರಾಷ್ಟ್ರದ ಸಂಯುಕ್ತಾ ಕಾಳೆ ಅವರು ರಿಧಮಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ಎಲ್ಲ ಐದೂ ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

ಬಾಲಕರ 100 ಮೀ. ಓಟದಲ್ಲಿ ಜಾರ್ಖಂಡ್‌ನ ಸದಾನಂದ ಕುಮಾರ್ ಚಿನ್ನ ಜಯಿಸಿದರು. 10.63 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಫುಟ್‌ಬಾಲ್: ರಾಯಲ್ಸ್ ಎಫ್‌ಸಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಹಮ್ಮದ್ ಅನಾಸ್ ವಿ.ಎಂ. ಗಳಿಸಿದ ಗೋಲಿನ ನೆರವಿನಿಂದ ರಾಯಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ರಾಯಲ್ಸ್ 1-0ಯಿಂದ ಗೋವನ್ಸ್ ಎಫ್‌ಸಿ ಎದುರು ಗೆದ್ದಿತು. ಮೊಹಮ್ಮದ್ ಅನಾಸ್ 34ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಎ ಡಿವಿಷನ್ ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ 1-0ಯಿಂದ ಸೌತ್ ಯುನೈಟೆಡ್ ತಂಡವನ್ನು ಸೋಲಿಸಿತು. ಜೆ. ರಿತಾಥ್ 53ನೇ ನಿಮಿಷದಲ್ಲಿ ವಿಜೇತ ತಂಡದ ಪರ ಕಾಲ್ಚಳಕ ತೋರಿದರು.

ಮತ್ತೊಂದು ಪಂದ್ಯದಲ್ಲಿ ಎಜಿಒಆರ್‌ಸಿ ಎಫ್‌ಸಿ 1-0ಯಿಂದ ಬ್ಲಿಟ್ಜ್ ಎಫ್‌ಸಿ ಎದುರು ಗೆದ್ದಿತು. ಬ್ಲಿಟ್ಜ್ ತಂಡದ ರಿತ್ವಿಕ್ ಕುಮಾರ್ 77ನೇ ನಿಮಿಷದಲ್ಲಿ ವಿಜೇತ ತಂಡಕ್ಕೆ ‘ಉಡುಗೊರೆ ಗೋಲು‘ ನೀಡಿದರು.

ಬುಧವಾರ ನಡೆಯಲಿರುವ ಎ ಡಿವಿಷನ್ ಪಂದ್ಯಗಳಲ್ಲಿ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿ– ಆರ್‌ಡಬ್ಲ್ಯುಎಫ್ ಎಫ್‌ಸಿ, ಬಿಟಿಎಂ ಎಫ್‌ಸಿ– ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ, ಇನ್‌ಕಮ್ ಟ್ಯಾಕ್ಸ್ ಎಫ್‌ಸಿ– ಬೆಂಗಳೂರು ಗನ್ನರ್ಸ್ ಎಫ್‌ಸಿ, ಎಚ್‌ಎಎಲ್ ಎಫ್‌ಸಿ– ರೆಬೆಲ್ಸ್ ಎಫ್‌ಸಿ ನಡುವೆ ಸೆಣಸಾಟ ನಡೆಯಲಿದೆ.

ರಾಹುಲ್ ದ್ರಾವಿಡ್– ಪಿಟಿಐ ಚಿತ್ರ

ಐಪಿಎಲ್ ಯಶಸ್ಸು ರಾಷ್ಟ್ರೀಯ ತಂಡಕ್ಕೆ ಲಾಭ: ದ್ರಾವಿಡ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಭಾರತದ ಆಟಗಾರರು, ನಾಯಕರಾಗಿ ಯಶಸ್ಸು ಕಂಡಿರುವುದು ರಾಷ್ಟ್ರೀಯ ತಂಡಕ್ಕೆ ಲಾಭವಾಗಲಿದೆ ಎಂದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅಭಿಪ್ರಾಯಪಟ್ಟಿದ್ದಾರೆ.

ಈ ಬಾರಿಯ ಐಪಿಎಲ್‌ನಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟನ್ಸ್ ಪ್ರಶಸ್ತಿಗೆ ಮುತ್ತಿಕ್ಕಿತ್ತು. ಸಂಜು ಸ್ಯಾಮ್ಸನ್ ಸಾರಥ್ಯದ ರಾಜಸ್ಥಾನ ರಾಯಲ್ಸ್ ರನ್ನರ್ ಅಪ್ ಆಗಿತ್ತು. ಕೆ.ಎಲ್. ರಾಹುಲ್ ಮುನ್ನಡೆಸಿದ್ದ ಲಖನೌ ಪ್ಲೇ ಆಫ್ ಪ್ರವೇಶಿಸಿತ್ತು.

‘ಯುವ ಆಟಗಾರರು ತಂಡಗಳನ್ನು ಮುನ್ನಡೆಸಿದ್ದು ನಿಜಕ್ಕೂ ಅದ್ಭುತ. ಆಟದಲ್ಲಿ ಪ್ರಗತಿ ಸಾಧಿಸಲು ಇದು ನೆರವಾಗಲಿದೆ‘ ಎಂದು ಮಂಗಳವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ದ್ರಾವಿಡ್ ಹೇಳಿದ್ದಾರೆ. ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ಗುರುವಾರ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಇಲ್ಲಿ ಆಡಲಿದೆ.

ಷೇರುಪೇಟೆ ವಹಿವಾಟು 567



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16569
ಇಂದಿನ ಅಂತ್ಯ	16416
▼	153
ದಿನದ ಗರಿಷ್ಠ	16487

ವಿನಿಮಯ ದರ

$ ಡಾಲರ್	77.78
£ ಪೌಂಡ್	97.33
€ ಯುರೊ	83.17
¥ ಯೆನ್ (100ಕ್ಕೆ)	58.62

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹503

ಖಾದ್ಯ ತೈಲ ಮುಂಬೈ

	(10 ಕೆಜಿಗೆ)
ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹1525(1520)
ಸೂರ್ಯಕಾಂತಿ (ರಿಫೈನ್ಡ್)	₹1775 (1770)
ಪಾಮೋಲಿನ್	₹1485 (1480)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-26000
2ನೇ ದರ್ಜೆ ₹12000-18000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹289-618
ದ್ವಿತಳಿ (ಬಿ.ವಿ) ₹378-812

ಬೆಂಗಳೂರು ಈರುಳ್ಳಿ ಧಾರಣೆ

	ಕ್ವಿಂಟಲ್‌ಗೆ
ದೊಡ್ಡ	₹1000-1400
ಮಧ್ಯಮ	₹800-1000
ಸಣ್ಣ	₹400-800

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಬೆಂಗಳೂರು

● **ಪ್ರಶ್ನೆ: ನಾನು ಖಾಸಗಿ ಕಂಪನಿಯೊಂದರ ಉದ್ಯೋಗಿ. ನಾನು 80ಜಿ ಅಡಿ ನೋಂದಾಯಿತ ಸಂಸ್ಥೆಗಳಿಗೆ ದೇಣಿಗೆ ಕೊಡುತ್ತಿರುತ್ತೇನೆ. ಕೆಲವೊಮ್ಮೆ ಶೇಕಡ 100ರಷ್ಟು, ಇನ್ನು ಕೆಲವು ಸಂದರ್ಭಗಳಲ್ಲಿ ಶೇಕಡಾ 50ರಷ್ಟು ತೆರಿಗೆ ವಿನಾಯಿತಿ ಸಿಗುತ್ತದೆ ಎಂದು ತೆರಿಗೆ ವಿವರ ಸಲ್ಲಿಸುವಾಗಲಷ್ಟೇ ಗಮನಕ್ಕೆ ಬರುತ್ತದೆ. ಈ ಬಗ್ಗೆ ನಾವು ಮೊದಲೇ ಹೇಗೆ ಮಾಹಿತಿ ಪಡೆಯಬಹುದು? ತೆರಿಗೆ ಇನ್ನಷ್ಟು ಉಳಿಯುವಂತೆ ಮಾಡುವುದು ಹೇಗೆ?**

ಉತ್ತರ: ಆದಾಯ ತೆರಿಗೆಯ ಸೆಕ್ಷನ್ 80ಜಿ ಎಲ್ಲರೂ ತಿಳಿದಿರುವ, ದೇಣಿಗೆಗೆ ಸಂಬಂಧಪಟ್ಟಂತೆ ಸಿಗುವ ಆದಾಯ ತೆರಿಗೆ ವಿನಾಯಿತಿಯ ಸೆಕ್ಷನ್. ಆದರೆ, ಇದರ ಅಡಿ ಯಾವುದೇ ಸಂಘ, ಸಂಸ್ಥೆಗಳಿಗೆ ದೇಣಿಗೆ ಕೊಟ್ಟ ಮೊತ್ತಕ್ಕೆ ನೂರಕ್ಕೆ ನೂರರಷ್ಟು ತೆರಿಗೆ ವಿನಾಯಿತಿ ಸಿಗುತ್ತದೆ ಎನ್ನುವುದು ಬಹುತೇಕರ ಕಲ್ಪನೆ ಮಾತ್ರ. ಈ ಸೆಕ್ಷನ್ ಅಡಿ ಮುಖ್ಯವಾಗಿ ನಾಲ್ಕು ಪ್ರತ್ಯೇಕ ವಿಚಾರಗಳಿವೆ.

1) ಕೊಟ್ಟ ದೇಣಿಗೆಗೆ ಸಿಗುವ ಸಂಪೂರ್ಣ ತೆರಿಗೆ ವಿನಾಯಿತಿ, 2) ಕೊಟ್ಟ ದೇಣಿಗೆಗೆ ಸಿಗುವ ಶೇಕಡಾ 50ರಷ್ಟು ತೆರಿಗೆ ವಿನಾಯಿತಿ, 3) ಆದಾಯದ ಶೇಕಡ 10ಕ್ಕೆ ನಿರ್ಬಂಧಿತವಾಗಿ ಕೊಟ್ಟ ದೇಣಿಗೆಗೆ ಸಿಗುವ ಸಂಪೂರ್ಣ ತೆರಿಗೆ ವಿನಾಯಿತಿ, 4) ಆದಾಯದ ಶೇಕಡ 10ಕ್ಕೆ ನಿರ್ಬಂಧಿತವಾಗಿ ಕೊಟ್ಟ ದೇಣಿಗೆಗೆ ಸಿಗುವ ಶೇ 50ರ ತೆರಿಗೆ ವಿನಾಯಿತಿ.

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಕೆಲವು ನಿರ್ದಿಷ್ಟ ಫಂಡ್ ಅಥವಾ ಸಂಸ್ಥೆಗಳಿಗೆ ಕೊಡುವ ದೇಣಿಗೆಗೆ ಸಂಬಂಧಿಸಿದಂತೆ ದೇಣಿಗೆ ಮೊತ್ತ ಒಂದೇ ಆಗಿದ್ದರೂ, ಶೇಕಡಾ 30ರ ತೆರಿಗೆ ಹಂತಕ್ಕೆ ಒಳಪಡುವ ವ್ಯಕ್ತಿಗೆ ಸಿಗುವ ತೆರಿಗೆ ವಿನಾಯಿತಿ ಹಾಗೂ ಶೇಕಡಾ 5ರ ತೆರಿಗೆ ಹಂತಕ್ಕೆ ಒಳಪಡುವ ವ್ಯಕ್ತಿಗೆ ಸಿಗುವ ತೆರಿಗೆ ವಿನಾಯಿತಿಯಲ್ಲಿ ವ್ಯತ್ಯಾಸ ಇರುತ್ತದೆ. ಇದಕ್ಕೆ ಮೇಲೆ ತಿಳಿಸಿರುವ ಮೂರನೆಯ ಹಾಗೂ ನಾಲ್ಕನೆಯ ಕ್ರಮಾಂಕದಲ್ಲಿ ಉಲ್ಲೇಖಿಸಿದ ನಿರ್ಬಂಧಗಳೇ ಕಾರಣ. 80 ಜಿ ಅಡಿ ವಿನಾಯಿತಿ ಸಿಗುವ ಸಂಸ್ಥೆಗಳ ಕುರಿತ ದೀರ್ಘ ಮಾಹಿತಿಯನ್ನು ಇಲ್ಲಿ ನೀಡುವುದು ಸಾಧ್ಯವಿಲ್ಲ. ಅದನ್ನು ನೇರವಾಗಿ ಆದಾಯ ತೆರಿಗೆ ಇಲಾಖೆಯ ಜಾಲತಾಣದಲ್ಲಿ ನೋಡಬಹುದು.

ತೆರಿಗೆದಾರರು ದೇಣಿಗೆ ಕೊಟ್ಟಾಗ ಕಡ್ಡಾಯವಾಗಿ ರಸೀದಿ ಪಡೆಯಬೇಕು. ಹಣ ಕೊಟ್ಟವರ ಪ್ಯಾನ್ ಸಂಖ್ಯೆಯನ್ನು ಸರಿಯಾಗಿ ದಾಖಲಿಸಿದ್ದಾರೆಯೇ ಎನ್ನುವುದನ್ನೂ ಪರಿಶೀಲಿಸಬೇಕು. ಎರಡು ಸಾವಿರಕ್ಕೂ ಅಧಿಕ ಮೊತ್ತವನ್ನು ದೇಣಿಗೆ ನೀಡುವ ಸಂದರ್ಭದಲ್ಲಿ ಚೆಕ್, ಡಿ.ಡಿ., ನೆಫ್ಟ್ ಇತ್ಯಾದಿ ರೂಪದಲ್ಲಿ ವ್ಯವಹಾರ ನಡೆಸಿದಲ್ಲಿ ಮಾತ್ರ ತೆರಿಗೆ ವಿನಾಯಿತಿ ಲಭ್ಯ. ಮಾತ್ರವಲ್ಲ, ಯಾವುದೇ ದೇಣಿಗೆ ಪಡೆದ ಸಂಸ್ಥೆಗಳು, ಹಿಂದಿನ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ, ದೇಣಿಗೆ ನೀಡಿದ ವ್ಯಕ್ತಿಗಳ ಪ್ಯಾನ್ ಸಹಿತ ಸಂಪೂರ್ಣ ವಿವರವನ್ನು ಮೇ 31ಕ್ಕೆ ಮೊದಲು ಆದಾಯ ತೆರಿಗೆ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸುವುದು ಈಗ ಅನಿವಾರ್ಯ. ಸಂಸ್ಥೆಗಳು ಸಲ್ಲಿಸುವ ಈ ವಿವರಗಳೊಂದಿಗೆ, ತೆರಿಗೆದಾರರು ಸಲ್ಲಿಸುವ 80 ಜಿ ವಿನಾಯಿತಿ ಅರ್ಜಿಗಳಲ್ಲಿನ ಮಾಹಿತಿಯನ್ನು ತಾಳೆ ಮಾಡಲಾಗುತ್ತದೆ.

ಹೆಸರು ಬೇಡ, ಊರು ಬೇಡ

● **ಪ್ರಶ್ನೆ: ನಾನು ಕಳೆದ ವರ್ಷ ಐ.ಟಿ. ವಿವರ ಸಲ್ಲಿಸುವ ಸಂದರ್ಭದಲ್ಲಿ ಕೆಲವು ವಿನಾಯಿತಿಗಳನ್ನು ಅಗತ್ಯ ಮಾಹಿತಿಯ ಕೊರತೆಯಿಂದ ಬಿಟ್ಟಿದ್ದೆ. ಅದರ ಪರಿಣಾಮವಾಗಿ, ತೆರಿಗೆಯನ್ನೂ ಕಟ್ಟಿದ್ದೆ. ಈಗ ನಾನು ಪೂರ್ಣ ಮಾಹಿತಿ, ದಾಖಲೆ ಹೊಂದಿದ್ದೇನೆ. ಹಳೆಯ ವಿವರ ಪರಿಷ್ಕರಿಸಬಹುದೇ ಮತ್ತು ರಿಫಂಡ್ ಪಡೆಯಬಹುದೇ?**

ಉತ್ತರ: ಸಾಮಾನ್ಯ ನಿಯಮದಂತೆ ತೆರಿಗೆ ವಿವರವನ್ನು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 139(5) ಅಡಿ ಪರಿಷ್ಕರಿಸಲು ಅವಕಾಶವಿದೆ. ಪರಿಷ್ಕರಣೆಗೆ ಅರ್ಹವೆನಿಸಲು, ಆದಾಯ ತೆರಿಗೆ ವಿವರವನ್ನು ನಿಗದಿತ ಅವಧಿಯೊಳಗೆ ಸಲ್ಲಿಸಿರಬೇಕು ಹಾಗೂ ಆದಾಯ ತೆರಿಗೆ ಮೌಲ್ಯಮಾಪನ ಮಾಡುವ ಅಧಿಕಾರಿಗಳಿಂದ ತೆರಿಗೆದಾರನ ಆದಾಯ ತೆರಿಗೆ ವಿವರ ಪರಿಶೀಲನೆ ಬಾಕಿ ಇದ್ದಿರಬೇಕು. ನೀವು ಸಾಮಾನ್ಯ ಗಡುವಿನೊಳಗೆ (ಸೆಕ್ಷನ್ 139(1) ಇದರಡಿ) ಅಥವಾ ಗಡುವು ಮೀರಿ ದಂಡ ತೆತ್ತು ತಡವಾಗಿ ವಿವರ ಸಲ್ಲಿಸಿದ್ದರೂ (ಸೆಕ್ಷನ್ 139(4) ಇದರಡಿ) ಆದಾಯ ತೆರಿಗೆ ವಿವರ ಪರಿಷ್ಕರಿಸಲು ಅವಕಾಶವಿದೆ. ಇಂತಹ ಪರಿಷ್ಕರಣೆಗೂ ಕಾಲಮಿತಿ ಇದೆ. ಸಂಬಂಧಪಟ್ಟ ಅಸೆಸ್ಮೆಂಟ್ ವರ್ಷ ಮುಗಿಯುವ 3 ತಿಂಗಳ ಮೊದಲು ಅಥವಾ ತೆರಿಗೆ ಅಧಿಕಾರಿಗಳು ತೆರಿಗೆ ಮೌಲ್ಯಮಾಪನ ಮುಗಿಸುವುದರೊಳಗೆ ಯಾವುದು ಮೊದಲೋ ಆ ಅವಧಿಯೊಳಗೆ ಪರಿಷ್ಕರಣೆಗೆ ಅವಕಾಶವಿದೆ. ಈ ರೀತಿ ವಿವರ ಪರಿಷ್ಕರಣೆ ಮಾಡುವಾಗ, ಮೂಲ ವಿವರವನ್ನು ಹಿಂಪಡೆಯಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ಪರಿಷ್ಕೃತ ವಿವರವನ್ನು ಮೂಲ ವಿವರ ಸಲ್ಲಿಸಿದ ವಿಧಾನದಲ್ಲಿಯೇ ಸಲ್ಲಿಸಬೇಕು. ಮೂಲ ವಿವರವನ್ನು ಆನ್‌ಲೈನ್ ಮೂಲಕ ಸಲ್ಲಿಸಿದಂತೆ, ಪರಿಷ್ಕೃತ ವಿವರವನ್ನೂ ಸೂಕ್ತ ಫಾರಂ ಆಯ್ಕೆ ಮಾಡುವ ಮೂಲಕ ಆನ್‌ಲೈನ್ ಮೂಲಕ ಸಲ್ಲಿಸಬೇಕು. ನೀವು ಆದಾಯ ತೆರಿಗೆಯ ಮರುಪಾವತಿ ಸ್ವೀಕರಿಸಿದ್ದರೆ, ನಿಮ್ಮ ಮೌಲ್ಯಮಾಪನ ಪೂರ್ಣಗೊಂಡಿದೆ ಎಂದು ಅರ್ಥವಲ್ಲ. ಆದಾಯ ತೆರಿಗೆ ಮರುಪಾವತಿಯನ್ನು ಸ್ವೀಕರಿಸಿದ್ದರೂ ಆದಾಯ ತೆರಿಗೆ ವಿವರವನ್ನು ತೆರಿಗೆದಾರರು ಪರಿಷ್ಕರಿಸಬಹುದು. ಸಾಮಾನ್ಯ ನಿಯಮದಂತೆ ನೀವು ಆರ್ಥಿಕ ವರ್ಷ 2020-21ಕ್ಕೆ (ಅಸೆಸ್ಮೆಂಟ್ ವರ್ಷ 2021-22) ಸಂಬಂಧಿಸಿದಂತೆ, 2021ರ ಡಿಸೆಂಬರ್ 31ರವರೆಗೆ ಪರಿಷ್ಕರಣೆಗೆ ಅವಕಾಶವಿತ್ತು. ಅದಲ್ಲದೆ, ಈ ಬಾರಿ ಕೋವಿಡ್ ಕಾರಣ ಗಡುವನ್ನು ಈ ವರ್ಷದ ಮಾರ್ಚ್ 31ರವರೆಗೂ ವಿಸ್ತರಿಸಲಾಗಿತ್ತು. ಈಗ ಈ ಎರಡೂ ಕಾಲಮಿತಿಗಳು ಮೀರಿರುವುದರಿಂದ ಅದಕ್ಕೆ ಅವಕಾಶವಿಲ್ಲ.

ಇಷ್ಟೇ ಅಲ್ಲದೆ, ಉದ್ದೇಶಪೂರ್ವಕವಲ್ಲದ, ಮೂಲ ವಿವರದಲ್ಲಿ ಯಾವುದೇ ಲೋಪ ಅಥವಾ ತಪ್ಪು ಕಂಡುಬಂದಲ್ಲಿ ಮಾತ್ರ ಪರಿಷ್ಕೃತ ವಿವರವನ್ನು (ಸೆಕ್ಷನ್ 139 (5)) ಸಲ್ಲಿಸಲು ಅನುಮತಿ ನೀಡಲಾಗಿದೆ. ಈ ಅವಕಾಶ, ವಿವರ ಸಲ್ಲಿಕೆಯಲ್ಲಾದ ಲೋಪ ಅಥವಾ ತಪ್ಪುಗಳ ಪ್ರಕರಣಗಳಿಗೆ ಮಾತ್ರ ಅನ್ವಯಿಸುತ್ತದೆ. ಆದರೆ ಆದಾಯ ಮಾಹಿತಿ ಮರೆಮಾಚುವಿಕೆ ಅಥವಾ ಸುಳ್ಳು ಹೇಳಿಕೆಗಳ ಪ್ರಕರಣಗಳಿಗೆ ಅಲ್ಲ. ಮೂಲ ವಿವರ ಸಲ್ಲಿಸುವ ಸಮಯದಲ್ಲಿ, ಕೆಲವು ಆದಾಯವನ್ನು ಮರೆಮಾಚಿದ್ದರೆ ಮತ್ತು ಅಂತಹ ಆದಾಯವನ್ನು ಬಹಿರಂಗಪಡಿಸಿ ಸೆಕ್ಷನ್ 139(5) ಅಡಿಯಲ್ಲಿ ಪರಿಷ್ಕೃತ ವಿವರವನ್ನು ಸಲ್ಲಿಸಿದರೆ, ಅಂತಹ ಪ್ರಕರಣದಲ್ಲಿ ಪ್ರತ್ಯೇಕ ದಂಡ ವಿಧಿಸಲು ಅವಕಾಶವಿದೆ ಎಂಬುದನ್ನು ತೆರಿಗೆದಾರರು ಅರಿತಿರಬೇಕು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ–ಮೇಲ್: businessdesk@prajavani.co.in

ಭಾರತದ ಜಿಡಿಪಿ ಅಂದಾಜು ತಗ್ಗಿಸಿದ ವಿಶ್ವ ಬ್ಯಾಂಕ್

ವಾಷಿಂಗ್ಟನ್ (ಪಿಟಿಐ): ಹಣದುಬ್ಬರ ಏರಿಕೆ, ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಹಾಗೂ ಜಾಗತಿಕ ಬಿಕ್ಕಟ್ಟುಗಳು ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿಯಾಗುತ್ತಿರುವ ಕಾರಣ ವಿಶ್ವ ಬ್ಯಾಂಕ್ ಪ್ರಸಕ್ತ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಭಾರತದ ಬೆಳವಣಿಗೆಯ ಅಂದಾಜು ದರವನ್ನು ತಗ್ಗಿಸಿದೆ.

2022–23ರಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆಯು ಶೇಕಡ 7.5ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಮಂಗಳವಾರ ಹೇಳಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಅಂದಾಜನ್ನು ವಿಶ್ವ ಬ್ಯಾಂಕ್ ಕಡಿಮೆ ಮಾಡುತ್ತಿರುವುದು ಇದು ಎರಡನೆಯ ಬಾರಿ. ಜಿಡಿಪಿ ಬೆಳವಣಿಗೆ ಶೇ 8.7ರಷ್ಟು ಇರಲಿದೆ ಎಂದು ಈ ಹಿಂದೆ ಹೇಳಿದ್ದ ವಿಶ್ವ ಬ್ಯಾಂಕ್, ನಂತರ ಏಪ್ರಿಲ್‌ನಲ್ಲಿ ಅದನ್ನು ಶೇ 8ಕ್ಕೆ ತಗ್ಗಿಸಿತ್ತು. ಈಗ ಇನ್ನಷ್ಟು ಕಡಿಮೆ ಮಾಡಿದೆ.

ದೇಶದ ಖಾಸಗಿ ವಲಯವು ಮಾಡಿರುವ ಹೂಡಿಕೆಗಳು ಹಾಗೂ ಹಲವು ಉತ್ತೇಜನ ಕ್ರಮಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿರುವುದು ಬೆಳವಣಿಗೆಗೆ ಒತ್ತಾಸೆಯಾಗಿ ನಿಲ್ಲಲಿವೆ ಎಂದು ವಿಶ್ವ ಬ್ಯಾಂಕ್ ವರದಿಯು ಹೇಳಿದೆ. 2023–24ರ ವೇಳೆಗೆ ಬೆಳವಣಿಗೆ ಪ್ರಮಾಣವು ಶೇ 7.1ಕ್ಕೆ ತಗ್ಗುವ ಸಾಧ್ಯತೆ ಇದೆ ಎಂದೂ ಅದು ಹೇಳಿದೆ.

ಇಂಧನ, ತರಕಾರಿ ಸೇರಿದಂತೆ ಎಲ್ಲ ಬಗೆಯ ಅಗತ್ಯ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳವು ದೇಶದ ಸಗಟು ಹಣದುಬ್ಬರ ದರವನ್ನು ಏಪ್ರಿಲ್‌ನಲ್ಲಿ ಶೇ 15.08ಕ್ಕೆ ಹೆಚ್ಚಿಸಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 7.79ಕ್ಕೆ ತಲುಪಿದೆ.

ವಿಶ್ವ ಬ್ಯಾಂಕ್ ವರದಿಯ ಪ್ರಕಾರ ದೇಶದ ಬೆಳವಣಿಗೆಯ ಪ್ರಮಾಣವು ಈ ವರ್ಷದ ಮೊದಲಾರ್ಧದಲ್ಲಿ ವೇಗ ಕಳೆದುಕೊಂಡಿದೆ. ಕೋವಿಡ್ ಪ್ರಕರಣಗಳಲ್ಲಿನ ಏರಿಕೆ, ಉಕ್ರೇನ್–ರಷ್ಯಾ ಯುದ್ಧ ಹಾಗೂ ಹಣದುಬ್ಬರ ಹೆಚ್ಚಳವು ಇದಕ್ಕೆ ಕಾರಣ.

ಆರ್‌ಬಿಐ ಸಭೆಯತ್ತ ಚಿತ್ತ: ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರ 568 ಅಂಶ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 153 ಅಂಶ ಕುಸಿಯಿತು.



ಜಾಗತಿಕ ಮಾರುಕಟ್ಟೆಗಳಲ್ಲಿನ ಅಸ್ಥಿರತೆ, ವಿದೇಶಿ ಬಂಡವಾಳದ ಹೊರ ಹರಿವು ಮುಂದುವರಿದಿರುವುದು ಹಾಗೂ ರೂಪಾಯಿ ಮೌಲ್ಯವು ಮತ್ತಷ್ಟು ಕುಸಿದಿರುವುದು ಸೂಚ್ಯಂಕಗಳ ಕುಸಿತಕ್ಕೆ ಕಾರಣ ಎಂದು ವರ್ತಕರು ಹೇಳಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರ ತನ್ನ ಹಣಕಾಸು ನೀತಿಯನ್ನು ಪ್ರಕಟಿಸಲಿದೆ. ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಹಣದುಬ್ಬರ ನಿಯಂತ್ರಿಸಲು ಮತ್ತೆ ರೆಪೊ ದರ ಹೆಚ್ಚಳ ಮಾಡುವ ನಿರೀಕ್ಷೆ ದಟ್ಟವಾಗಿದೆ.

‘ಮಾರುಕಟ್ಟೆಯಲ್ಲಿ ಅಸ್ಥಿರತೆ ಇರುವ ಕಾರಣ ಹೂಡಿಕೆದಾರರು ಎಚ್ಚರಿಕೆಯಿಂದ ಹೆಜ್ಜೆ ಇರಿಸುತ್ತಿದ್ದಾರೆ. ರೆಪೊ ದರ ಹಾಗೂ ನಗದು ಮೀಸಲು ಅನುಪಾತವು ತಲಾ ಶೇ 0.50ರಷ್ಟು ಜಾಸ್ತಿ ಆಗಬಹುದು ಎಂಬ ನಿರೀಕ್ಷೆಯು ಹೂಡಿಕೆದಾರರಲ್ಲಿ ಇದೆ. ಆದರೆ, ವ್ಯವಸ್ಥೆಯಲ್ಲಿನ ನಗದು ಹರಿವಿನ ಮೇಲೆ ಇನ್ನಷ್ಟು ಹೆಚ್ಚಿನ ನಿರ್ಬಂಧಗಳನ್ನು ವಿಧಿಸಿದರೆ ಮಾರುಕಟ್ಟೆಯ ಮೇಲೆ ಪರಿಣಾಮ ಉಂಟಾಗಲಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹಾಂಗ್‌ಕಾಂಗ್, ಸೋಲ್ ಷೇರುಪೇಟೆಗಳು ಕುಸಿದಿವೆ. ಟೋಕಿಯೊ ಮತ್ತು ಶಾಂಘೈ ಮಾರುಕಟ್ಟೆಗಳು ತುಸು ಗಳಿಕೆ ಕಂಡುಕೊಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.26ರಷ್ಟು ಕುಸಿದು ಪ್ರತಿ ಬ್ಯಾರೆಲ್‌ಗೆ 119.2 ಡಾಲರ್‌ಗೆ ತಲುಪಿದೆ.

ಮತ್ತಷ್ಟು ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಗಳಲ್ಲಿ ಷೇರುಗಳ ಮಾರಾಟ ಮುಂದುವರಿಸಿದ್ದು ಹಾಗೂ ಡಾಲರ್ ಬಲವರ್ಧನೆಯ ಕಾರಣದಿಂದಾಗಿ ರೂಪಾಯಿ ಮೌಲ್ಯವು ಮಂಗಳವಾರ 12 ಪೈಸೆ ಇಳಿಕೆಯಾಗಿ, ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 77.78ಕ್ಕೆ ಕುಸಿಯಿತು.

ಎನ್‌ಎಂಡಿಸಿ ಸಿವಿಒ ಆಗಿ ವಿಶ್ವನಾಥ್

ಬೆಂಗಳೂರು: ಎನ್‌ಎಂಡಿಸಿ ಕಂಪನಿಯ ಮುಖ್ಯ ವಿಚಕ್ಷಣಾ ಅಧಿಕಾರಿಯಾಗಿ (ಸಿವಿಒ) ಬಿ. ವಿಶ್ವನಾಥ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ವಿಶ್ವನಾಥ್ ಅವರು 1996ನೇ ಬ್ಯಾಚ್‌ನ ಭಾರತೀಯ ರೈಲ್ವೆ ಉಗ್ರಾಣ ಸೇವೆ (ಐಆರ್‌ಎಸ್‌ಎಸ್) ಅಧಿಕಾರಿ. ಅವರು ಹಿಂದೆ ಆಂಧ್ರ ಪ್ರದೇಶ ಸರ್ಕಾರದಲ್ಲಿ ಕೆಲಸ ಮಾಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ
7-6-2022

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9450-9500
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1480 (1477)
ಪಾಮ್ ವಾರದ ಡೆಲಿವರಿ	1483 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1745 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
50,850 (50,950)
ಬೆಳ್ಳಿ ಕೆ.ಜಿ 62,000 (62,590)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250

ಕಾಳು ಮೆಣಸು 480

ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-54500
ಭದ್ರಾವತಿ
ರಾಶಿ 47899-49099
ಚಿತ್ರದುರ್ಗ
ಆಪಿ 48719-49129
ಬೆಟ್ಟೆ 38149-38559
ಕೆಂಪುಗೋಟು 28610-29000
ರಾಶಿ 48239-48669
ಕಾರ್ಕಳ
ಹೊಸತು 40000-45000
ಹಳತು 46000-54500
ಕುಂದಾಪುರ
ಹೊಸಚಾಲಿ 43500-44500
ಮಂಗಳೂರು
ಕೋಕ 20000-24000
ಪುತ್ತೂರು
ಹೊಸತು 27500-41500
ಸಾಗರ
ಬಿಳಿಗೋಟು 27129-27889
ಚಾಲಿ 35729-36789
ಕೆಂಪುಗೋಟು 32299-34349
ರಾಶಿ 48299-48899
ಸಿಪ್ಪೆಗೋಟು 16699-19289
ಶಿವಮೊಗ್ಗ
ಬೆಟ್ಟೆ 49719-53339
ಗೊರಬಲು 18200-37969
ರಾಶಿ 43099-49569
ಸಿದ್ದಾಪುರ
ಬಿಳಿಗೋಟು 23489-30099
ಚಾಲಿ 33899-37299
ಕೋಕ 21199-29699
ಕೆಂಪುಗೋಟು 26099-32399
ರಾಶಿ 46899-48699
ತಟ್ಟಿಬೆಟ್ಟೆ 37519-43099
ಶಿರಸಿ
ಬೆಟ್ಟೆ 21596-47599
ಬಿಳಿಗೋಟು 22098-33218
ಚಾಲಿ 32809-38201
ರಾಶಿ 38010-49109
ಸೊರಬ
ಚಾಲಿ 36700-36700
ಯಲ್ಲಾಪುರ
ಬಿಳಿಗೋಟು 26919-32130
ಚಾಲಿ 33180-37388
ಕೋಕ 18060-28899
ಕೆಂಪುಗೋಟು 30342-35030
ರಾಶಿ 45008-52777
ತಟ್ಟಿಬೆಟ್ಟೆ 37671-44129

ರಬ್ಬರ್ ಧಾರಣೆ
ನರಸಿಂಹರಾಜಪುರ ಮಾರುಕಟ್ಟೆ
ಆರ್‌ಎಸ್‌ಎಸ್ 4 – ₹173
ಆರ್ ಎಸ್‌ಎಸ್ 5 –₹165.50
ಗುಡ್ ಲಾಟ್ –₹158.50

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,500	16,350	16,450	237.55 ಸೆಂಟ್ಸ್
ಎಸಿ	9,100	8,600	9,075	
ಆರ್‌ಪಿ	9,750	10,000	10,100	
ಆರ್‌ಸಿ	4,850	4,500	4,650	2133 ಡಾಲರ್ಸ್

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

BHARAT ELECTRONICS
QUALITY. TECHNOLOGY. INNOVATION.
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ ತನ್ನ ಬೆಂಗಳೂರು ಘಟಕದ ಸಾಫ್ಟ್ ವೇರ್ ಎಸ್ ಬಿ ಯು ಗೆ ಯೋಜನಾ ಅಭಿಯಂತರರು-೧ ರ ಆವಶ್ಯಕತೆ ಇದೆ.

ಸಾಫ್ಟ್ ವೇರ್ ನಲ್ಲಿ ಕನಿಷ್ಠ ಎರಡು ವರ್ಷಗಳ ಅರ್ಹತೋತ್ತರ ಅನುಭವ ಸಹಿತ ಸಾಮಾನ್ಯ / ಇ.ಹಿ.ವ. / ಇ ಡಬ್ಲ್ಯೂ ಎಸ್ ಅಭ್ಯರ್ಥಿಗಳಿಗೆ ಶೇಕಡ ೫೫ ಮತ್ತು ಪ.ಜಾ./ಪ.ಪಂ. / ಪಿ ಡಬ್ಲ್ಯೂ ಬಿಡಿ ಅಭ್ಯರ್ಥಿಗಳಿಗೆ ಉತ್ತೀರ್ಣ ಶ್ರೇಣಿಯೊಂದಿಗೆ (ಕಂಪ್ಯೂಟರ್ ವಿಜ್ಞಾನ/ ಮಾಹಿತಿ ತಂತ್ರಜ್ಞಾನ / ಮಾಹಿತಿ ವಿಜ್ಞಾನ / ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ / ಮೆಕ್ಯಾನಿಕಲ್) ವಿಷಯದಲ್ಲಿ ಬಿ.ಇ./ಬಿ.ಟೆಕ್.

(*ವಿಷಯ ಆಧಾರಿತ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್ (C++ ಅಥವಾ Java) ಉಪಯೋಗಿಸಿ ಸಾಫ್ಟ್ ವೇರ್ ಅಭಿವೃದ್ಧಿಯಲ್ಲಿ ಕನಿಷ್ಠ ಎರಡು ವರ್ಷಗಳ ಅರ್ಹತೋತ್ತರ ಅನುಭವ, ಯಾವುದೇ ಏಕೀಕೃತ ವಿಕಸನದಲ್ಲಿ ಕಾರ್ಯನಿರ್ವಹಿಸುವ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು).

ಸಂಬಂಧಿತ ವಿಷಯದಲ್ಲಿ ಅರ್ಹತೋತ್ತರ ಅನುಭವ ಹೊಂದಿದ ಅಭ್ಯರ್ಥಿಗಳು ಈ ಹುದ್ದೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅಧಿಕ ವಿವರಗಳಿಗೆ ದಯವಿಟ್ಟು ನಮ್ಮ ವೆಬ್ ಸೈಟ್ www.bel-india.in/career. ನ್ನು ವೀಕ್ಷಿಸಿ.

‘ಪ್ರತಿ ದೇಶದ ಹೆಸರು’

ಹೈಕೋರ್ಟ್ ಮೆಟ್ಟಿಲೇರಿದ್ದ ಟೇಬಲ್ ಟೆನಿಸ್ ಆಟಗಾರ್ತಿ

ದಿಯಾಗೆ ಸ್ಥಾನ; ಅರ್ಚನಾ ಔಟ್

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಆಡಲಿರುವ ಭಾರತ ಟೇಬಲ್ ಟೆನಿಸ್ ತಂಡದಲ್ಲಿ ದಿಯಾ ಚಿತಳೆ ಅವರಿಗೆ ಕೊನೆಗೂ ಸ್ಥಾನ ನೀಡಲಾಗಿದೆ. ತಮ್ಮನ್ನು ತಂಡದಿಂದ ಕೈಬಿಟ್ಟ ಕ್ರಮವನ್ನು ಪ್ರಶ್ನಿಸಿ ಚಿತಳೆ, ಹೈಕೋರ್ಟ್ ಮೊರೆಹೋಗಿದ್ದರು.

ಕಳೆದ ವಾರ ಪ್ರಕಟಿಸಿದ್ದ ತಂಡದಲ್ಲಿದ್ದ ಅರ್ಚನಾ ಕಾಮತ್ ಅವರನ್ನು ಕೈಬಿಡಲಾಗಿದೆ. ಪುರುಷರ ತಂಡದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಮನುಷ್ ಶಾ ಅವರು ಮೀಸಲು ಆಟಗಾರರಾಗಿ ಮುಂದುವರಿದಿದ್ದಾರೆ. ಮನುಷ್ ಕೂಡಾ ತಮಗೆ ಅನ್ಯಾಯವಾಗಿದೆ ಎಂದು ಸೋಮವಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಭಾರತ ಟೇಬಲ್ ಟೆನಿಸ್ ಫೆಡರೇಷನ್‌ಗೆ (ಟಿಟಿಎಫ್‌ಐ) ಹೈಕೋರ್ಟ್ ನೇಮಕ ಮಾಡಿರುವ ಆಡಳಿತ ಸಮಿತಿಯ (ಸಿಒಎ) ಎಸ್.ಡಿ.ಮೌದ್ಗಿಲ್ ನೇತೃತ್ವದ ಆಯ್ಕೆ ಸಮಿತಿಯು ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳುವ ಟಿಟಿ ತಂಡವನ್ನು ಈಚೆಗೆ ಆಯ್ಕೆ ಮಾಡಿತ್ತು. ಮಹಿಳೆಯರ ಡಬಲ್ಸ್‌ನಲ್ಲಿ ಮಣಿಕಾ ಬಾತ್ರಾ ಅವರಿಗೆ ಜೋಡಿಯಾಗಿರಲು ಅರ್ಚನಾ ಕಾಮತ್‌ಗೆ ಅವಕಾಶ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ದಿಯಾ ನ್ಯಾಯಾಲಯದ ಮೆಟ್ಟಿಲೇರಿದ್ದರು.

ತಂಡದ ಆಯ್ಕೆಯಲ್ಲಿ ಭಾರತ ಕ್ರೀಡಾ ಪ್ರಾಧಿಕಾರದ ತೀರ್ಮಾನವೇ ಅಂತಿಮ ಎಂದು ಸಿಒಎ ಹೇಳಿತ್ತು. ಆದರೆ 'ತಂಡದ ಆಯ್ಕೆ ಆಯಾ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಜವಾಬ್ದಾರಿ' ಎಂದು ಕ್ರೀಡಾ ಸಚಿವಾಲಯ ಸೋಮವಾರ ಸ್ಪಷ್ಟಪಡಿಸಿತ್ತು. ಇದರಿಂದ ಮೌದ್ಗಿಲ್ ನೇತೃತ್ವದ ಆಯ್ಕೆ ಸಮಿತಿ ಮತ್ತೆ ಸಭೆ ಸೇರಿ, ಮಂಗಳವಾರ ಅಂತಿಮ ತಂಡವನ್ನು ಪ್ರಕಟಿಸಿದೆ.

'ತಂಡದಲ್ಲಿ ಒಂದು ಬದಲಾವಣೆ ಮಾಡಲಾಗಿದ್ದು, ಅರ್ಚನಾ ಸ್ಥಾನಕ್ಕೆ ದಿಯಾ ಅವರನ್ನು ಆಯ್ಕೆ ಮಾಡಲಾಗಿದೆ. ತಂಡಕ್ಕೆ ಆಯ್ಕೆಯಾಗಲು ನಿಗದಿ ಪಡಿಸಿದ್ದ ಮಾನದಂಡಗಳನ್ನು ಅರ್ಚನಾ ಹೊಂದಿಲ್ಲ. ಆದರೂ ಪದಕ ಗೆಲ್ಲುವ ಸಾಮರ್ಥ್ಯ ಅವರಲ್ಲಿದೆ ಎಂದು ಭಾವಿಸಿದ್ದೆವು. ನಮ್ಮಲ್ಲಿ ಉಂಟಾಗಿದ್ದ ಗೊಂದಲ ಬಗೆಹರಿಸಲು ಭಾರತ ಕ್ರೀಡಾ ಪ್ರಾಧಿಕಾರದ ಮೊರೆ ಹೋಗಿದ್ದೆವು' ಎಂದು ಮೌದ್ಗಿಲ್ ಹೇಳಿದರು.

'ದೇಸಿ ಮತ್ತು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ದಿಯಾ ಅವರಿಗೆ ಸ್ಥಾನ ನೀಡಲು ಆಯ್ಕೆ ಸಮಿತಿ ನಿರ್ಧರಿಸಿತು. ಅವರು ಮಣಿಕಾ ಜತೆ ಡಬಲ್ಸ್‌ನಲ್ಲಿ ಆಡಲಿದ್ದಾರೆ' ಎಂದು ತಿಳಿಸಿದರು.

ಮಾಜಿ ಆಟಗಾರರಾದ ಎಸ್. ರಾಮನ್ ಮತ್ತು ಅನಿದಿತಾ ಚಕ್ರವರ್ತಿ ಅವರನ್ನು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ತಂಡಗಳಿಗೆ ಕೋಚ್ ಆಗಿ ನೇಮಕ ಮಾಡಲಾಗಿದೆ.

ದಿಯಾ ಚಿತಳೆ

ಅರ್ಚನಾ ಕಾಮತ್

ಮುಖ್ಯಾಂಶಗಳು

- ಕಾಮನ್‌ವೆಲ್ತ್ ಗೇಮ್ಸ್‌ಗೆ ಪರಿಷ್ಕೃತ ತಂಡ ಪ್ರಕಟ
- ಪುರುಷರ ತಂಡದಲ್ಲಿ ಬದಲಾವಣೆ ಇಲ್ಲ

ಟಿಟಿ ತಂಡ

ಪುರುಷರು: ಶರತ್ ಕಮಲ್, ಜಿ.ಸತ್ಯನ್, ಹರ್ಮೀತ್ ದೇಸಾಯಿ, ಸನಿಲ್ ಶೆಟ್ಟಿ, ಮನುಷ್ ಶಾ (ಮೀಸಲು ಆಟಗಾರ).

ಮಹಿಳೆಯರು: ಮಣಿಕಾ ಬಾತ್ರಾ, ದಿಯಾ ಚಿತಳೆ, ರೀತ್ ರಿಶ್ಯಾ, ಶ್ರೀಜಾ ಅಕುಲಾ, ಸ್ವಸ್ತಿಕಾ ಘೋಷ್ (ಕಾಯ್ದಿರಿಸಿದ ಆಟಗಾರ್ತಿ)

ಫುಟ್‌ಬಾಲ್: ಭಾರತ–ಕಾಂಬೋಡಿಯಾ ಸೆಣಸು

ಕೋಲ್ಕತ್ತ (ಪಿಟಿಐ): ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ಸುನಿಲ್ ಚೆಟ್ರಿ ನೇತೃತ್ವದ ಭಾರತ ತಂಡ ಬುಧವಾರ ಇಲ್ಲಿ ಕಾಂಬೋಡಿಯಾ ಜತೆ ಪೈಪೋಟಿ ನಡೆಸಲಿದೆ.

ಫಿಫಾ ರ್‍ಯಾಂಕಿಂಗ್‌ನಲ್ಲಿ ತನಗಿಂತ ಕೆಳಗಿನ ಸ್ಥಾನದಲ್ಲಿರುವ ಕಾಂಬೋಡಿಯಾ (171) ವಿರುದ್ಧ ಗೆಲುವು ಪಡೆದು ಅರ್ಹತಾ ಸುತ್ತಿನ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸುವ ವಿಶ್ವಾಸದಲ್ಲಿ ಭಾರತ ಇದೆ. 'ಡಿ' ಗುಂಪಿನಲ್ಲಿರುವ ಭಾರತ, ಬಳಿಕದ ಪಂದ್ಯಗಳಲ್ಲಿ ಅಫ್ಗಾನಿಸ್ತಾನ (150ನೇ ರ್‍ಯಾಂಕ್) ಮತ್ತು ಹಾಂಕಾಂಗ್ (147) ತಂಡಗಳನ್ನು ಎದುರಿಸಲಿದೆ.

126ನೇ ಅಂತರರಾಷ್ಟ್ರೀಯ ಪಂದ್ಯವನ್ನಾಡಲಿರುವ ಚೆಟ್ರಿ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. ಎಎಫ್‌ಸಿ ಏಷ್ಯನ್ ಕಪ್ 2023ರ ಕೊನೆಯಲ್ಲಿ ಅಥವಾ 2024ರ ಆರಂಭದಲ್ಲಿ ನಡೆಯಲಿದೆ. 'ಏಷ್ಯನ್ ಕಪ್‌ಗೆ ಅರ್ಹತೆ ಪಡೆಯುವುದು ನನ್ನ ಗುರಿ. ಆ ಟೂರ್ನಿಯಲ್ಲಿ ನಾನು ಆಡುವೆನೋ, ಇಲ್ಲವೋ ಎಂಬುದು ಗೊತ್ತಿಲ್ಲ. ನಮ್ಮ ದೇಶದ ತಂಡ ಅಲ್ಲಿ ಆಡಬೇಕು' ಎಂದು ಚೆಟ್ರಿ ಹೇಳಿದ್ದಾರೆ.

ಅರ್ಹತಾ ಟೂರ್ನಿಗೆ ಪೂರ್ವಭಾವಿಯಾಗಿ ನಡೆದಿದ್ದ ಅಭ್ಯಾಸ ಪಂದ್ಯಗಳಲ್ಲಿ ಭಾರತ ತಂಡ ಉತ್ತಮ ಪ್ರದರ್ಶನ ನೀಡಿಲ್ಲ. ಐಎಸ್‌ಎಲ್ ಚಾಂಪಿಯನ್ ಎಟಿಕೆ ಮೋಹನ್ ಬಾಗನ್ ಎದುರು 1–2 ಗೋಲುಗಳ ಸೋಲು ಎದುರಾಗಿತ್ತು. ಐ–ಲೀಗ್ ಆಲ್‌ಸ್ಟಾರ್ಸ್ ವಿರುದ್ಧ 2–1 ಗೋಲುಗಳ ಗೆಲುವು ಪಡೆದಿದ್ದರೆ, ಸಂತೋಷ್ ಟ್ರೋಫಿ ರನ್ನರ್ ಅಪ್ ಬಂಗಾಳ ಜತೆ 1–1 ಗೋಲುಗಳ ಡ್ರಾ ಸಾಧಿಸಿತ್ತು.

ಸ್ನಾಯು ಸೆಳೆತಕ್ಕೆ ಒಳಗಾಗಿರುವ ಸ್ಟ್ರೈಕರ್ ರಹೀಂ ಅಲಿ ಅವರು ಈ ಪಂದ್ಯದಲ್ಲಿ ಆಡದಿರುವುದು ಭಾರತಕ್ಕೆ ಅಲ್ಪ ಹಿನ್ನಡೆಯಾಗಿ ಪರಿಣಮಿಸಿದೆ. ಅವರ ಅನುಪಸ್ಥಿತಿಯಲ್ಲಿ ಲಿಸ್ಟನ್ ಕೊಲಾಸೊ, ಮನ್ವೀರ್ ಮತ್ತು ಉದಾಂತ ಸಿಂಗ್ ಮೇಲಿನ ಜವಾಬ್ದಾರಿ ಹೆಚ್ಚಿದೆ.

ಪಂದ್ಯದ ಆರಂಭ: ರಾತ್ರಿ 8.30


ಸುನಿಲ್ ಚೆಟ್ರಿ– ಪಿಟಿಐ ಚಿತ್ರ

ನಾರ್ವೆ ಚೆಸ್: ಡ್ರಾ ಸಾಧಿಸಿದ ಆನಂದ್

ಸ್ಟಾವೆಂಜರ್, ನಾರ್ವೆ (ಪಿಟಿಐ): ವಿಶ್ವನಾಥನ್ ಆನಂದ್ ಅವರು ನಾರ್ವೆ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಜತೆ ಡ್ರಾ ಸಾಧಿಸಿದರು. ಇದರಿಂದ ಅಗ್ರಸ್ಥಾನದಿಂದ ಎರಡನೇ ಸ್ಥಾನಕ್ಕೆ ಕುಸಿತ ಕಂಡರು.

ಮಂಗಳವಾರ ನಡೆದ ಆನಂದ್–ಗಿರಿ ನಡುವಿನ ಕ್ಲಾಸಿಕಲ್ ಪಂದ್ಯ 35 ನಡೆಗಳಲ್ಲಿ ಕೊನೆಗೊಂಡಿತು. ಫಲಿತಾಂಶ ನಿರ್ಣಯಿಸಲು ನಡೆದ ಆರ್ಮಗೆಡನ್ (ಸಡನ್ ಡೆತ್) ಗೇಮ್ 45 ನಡೆಗಳಲ್ಲಿ ಡ್ರಾದಲ್ಲಿ ಅಂತ್ಯಕಂಡಿತು. 11.5 ಪಾಯಿಂಟ್ಸ್ ಹೊಂದಿರುವ ಆನಂದ್ ಎರಡನೇ ಸ್ಥಾನದಲ್ಲಿದ್ದಾರೆ. ಭಾರತದ ಗ್ರ್ಯಾಂಡ್‌ಮಾಸ್ಟರ್ 8ನೇ ಸುತ್ತಿನಲ್ಲಿ ತೈಮೂರ್ ರಜಬೊವ್ ಅವರನ್ನು ಎದುರಿಸುವರು.

ಅಜರ್‌ಬೈಜಾನ್‌ನ ಶಕ್ರಿಯಾರ್ ಮಮೆದ್ಯರೋವ್ ಅವರನ್ನು ಮಣಿಸಿದ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತೆ ಅಗ್ರಸ್ಥಾನಕ್ಕೇರಿದರು. ಅವರ ಬಳಿ ಒಟ್ಟು 12.5 ಪಾಯಿಂಟ್ಸ್‌ಗಳಿವೆ.

ಫ್ರಾನ್ಸ್‌ನ ಮ್ಯಾಕ್ಸಿಮ್ ವಾಶಿರ್ ಲಗ್ರಾವ್, ಚೀನಾದ ಹವೊ ವಾಂಗ್ ವಿರುದ್ಧ; ಅಮೆರಿಕದ ವೆಸ್ಲಿ ಸೊ, ನಾರ್ವೆಯ ಆರ್ಯನ್ ತರಿ ವಿರುದ್ಧ ಗೆದ್ದರು. ಬಲ್ಗೇರಿಯದ ವ್ಯಾಸೆಲಿನ್ ಟೊಪಾಲೋವ್– ರಜಬೊವ್ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.



ಡಾಲ್ 14 ನೆಯ ಫ್ರೆಂಚ್ ಓಪನ್ ಟೈಟಲ್ ತಮ್ಮದಾಗಿಸಿಕೊಂಡಿದ್ದಾರೆ.

ಮೈಸೂರು ರೇಸ್

ಫೈತ್ ಗೆಲ್ಲುವ ನಿರೀಕ್ಷೆ

ಮೈಸೂರು ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ 2022 ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫೈತ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕಂಟ್ರೀಸ್ ಸಾಂಗ್ 6, ಸೋ ಫಾರ್ 7, ಲೇಡಿಬ್ಲೂ 12
2ನೇ ರೇಸ್: ಸ್ಟಾರ್ ಜ್ಯೂಯಲ್ 12, ಫಾರೆಸ್ಟ್ ವ್ಯೂ 4, ಎಗೆನ್ಸ್ಟ್ ಆಲ್ ಆಡ್ಸ್ 2
3ನೇ ರೇಸ್: ಸ್ಟ್ಯಾಂಡ್‌ಔಟ್ 1, ಶಿವಾಲಿಕ್ ಸ್ಟೈಲ್ 6, ಡಿ ಡಿಯರ್ 2
4ನೇ ರೇಸ್: ಡಿ ದುರ್ಗಾ 5, ನಿಷೆ ಕ್ಯನ್ನಾಬಿಸ್ 10, ಲೈಕ್ ಮೈ ಡ್ಯಾಡಿ 8
5ನೇ ರೇಸ್: ಲೀಡ್ ಸಿಂಗರ್ 6, ಒಕ್ರೆ 4, ಗ್ಯಾಲರಿ ಕ್ವೀನ್ 1
6ನೇ ರೇಸ್: ಫೈತ್ 3, ಅಮ್ರೆಲಿ 4, ಫಾರೆವರ್ 6
7ನೇ ರೇಸ್: ಹಿಯೊಕ್ಟೇನ್ 2, ಟ್ರೆಮಂಡಸ್ 7, ರೈಸಿಂಗ್ ಸನ್ 5
8ನೇ ರೇಸ್: ರಿದ್ಮಿಕ್ 6, ಫ್ಲಾಶ್ ಬಾಂಡ್ 5, ಲೀಪ್ ಆಫ್ ಫೇತ್ 11

ಉತ್ತಮ ಬೆಟ್: ಕಂಟ್ರೀಸ್ ಸಾಂಗ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಸಂಕ್ಷಿಪ್ತ ಸುದ್ದಿ

ಚೆಸ್ ಒಲಿಂಪಿಯಾಡ್; ಒಲಿಂಪಿಕ್ ರೀತಿಯ ಜ್ಯೋತಿಯಾತ್ರೆ

ಚೆನ್ನೈ (ಪಿಟಿಐ): ಈ ವರ್ಷದ ಜುಲೈ–ಆಗಸ್ಟ್‌ನಲ್ಲಿ ಚೆನ್ನೈನಲ್ಲಿ ನಡೆಯಲಿರುವ 44ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಮೊದಲ ಬಾರಿಗೆ ಒಲಿಂಪಿಕ್ಸ್ ರೀತಿಯ ಜ್ಯೋತಿಯಾತ್ರೆ ಪರಿಚಯಿಸಲಾಗುತ್ತಿದೆ.

'ಮುಂಬರುವ ಎಲ್ಲ ಒಲಿಂಪಿಯಾಡ್‌ಗೂ ಇದೇ ರೀತಿ ಕ್ರೀಡಾಜ್ಯೋತಿ ಸಂಚರಿಸಲಿದೆ. ಚೆಸ್ ಕ್ರೀಡೆಯು ಜನ್ಮತಾಳಿದ ದೇಶವಾದ ಭಾರತದಿಂದಲೇ ಜ್ಯೋತಿಯಾತ್ರೆ ಆರಂಭವಾಗಿ ಎಲ್ಲ ಖಂಡಗಳಿಗೂ ತೆರಳಿ ಬಳಿಕ ಆತಿಥೇಯ ದೇಶವನ್ನು ತಲುಪಲಿದೆ' ಎಂದು ಚೆಸ್ ಆಡಳಿತ ಮಂಡಳಿ ಫಿಡೆ ತಿಳಿಸಿದೆ.

ಸಮಯದ ಕೊರತೆಯಿಂದ ಈ ಬಾರಿ ಜ್ಯೋತಿಯಾತ್ರೆಯನ್ನು ಭಾರತಕ್ಕೆ ಮಾತ್ರ ಸೀಮಿತಗೊಳಿಸಲಾಗುತ್ತದೆ. ಮಾಜಿ ವಿಶ್ವ ಚಾಂಪಿಯನ್, ಭಾರತದ ವಿಶ್ವನಾಥನ್ ಆನಂದ್ ಯಾತ್ರೆಯ ಭಾಗೀದಾರರಲ್ಲಿ ಒಬ್ಬರಾಗಲಿದ್ದಾರೆ.

'ಚೆಸ್ ಕ್ರೀಡೆಯನ್ನು ಜನಪ್ರಿಯಗೊಳಿಸಲು ಮತ್ತು ಅಭಿಮಾನಿಗಳನ್ನು ಹೆಚ್ಚಿಸಲು ಈ ಉಪಕ್ರಮ ಸಹಾಯವಾಗಲಿದೆ' ಎಂದು ಫಿಡೆ ಅಧ್ಯಕ್ಷ ಅರ್ಕಾಡಿ ಡೊರ್ಕೊವಿಚ್ ಹೇಳಿದ್ದಾರೆ.

'ಕ್ರೀಡಾಜ್ಯೋತಿ ಸಂಚಾರದ ದಿನಾಂಕ ಮತ್ತು ಮಾರ್ಗವನ್ನು ಶೀಘ್ರ ತಿಳಿಸಲಾಗುವುದು' ಎಂದು ಒಲಿಂಪಿಯಾಡ್ ನಿರ್ದೇಶಕ ಭರತ್ ಸಿಂಗ್ ಚೌಹಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ಯಾರಾ ಶೂಟಿಂಗ್: ಅವನಿ ವಿಶ್ವದಾಖಲೆ

ಅವನಿ ಲೇಖರಾ

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ಅವನಿ ಲೇಖರಾ ಅವರು ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್ ಪ್ಯಾರಾ ಶೂಟಿಂಗ್‌ನಲ್ಲಿ ವಿಶ್ವದಾಖಲೆ ಸಾಧನೆಯೊಂದಿಗೆ ಚಿನ್ನದ ಪದಕ ಗೆದ್ದುಕೊಂಡರು.

ಮಂಗಳವಾರ ನಡೆದ ಮಹಿಳೆಯರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಅವರು 250.6 ಸ್ಕೋರ್ ಕಲೆಹಾಕಿ ಅಗ್ರಸ್ಥಾನ ಪಡೆದರು. 20 ವರ್ಷದ ಅವನಿ ತಮ್ಮದೇ ಹೆಸರಿನಲ್ಲಿದ್ದ ದಾಖಲೆ (249.6) ಉತ್ತಮಪಡಿಸಿಕೊಂಡರಲ್ಲದೆ, 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದರು.

247.6 ಸ್ಕೋರ್ ಮಾಡಿದ ಪೋಲೆಂಡ್‌ನ ಎಮಿಲಿಯಾ ಬಬ್‌ಸ್ಕಾ ಬೆಳ್ಳಿ ಗೆದ್ದರೆ, ಸ್ವೀಡನ್‌ನ ಅನ್ನಾ ನಾರ್ಮನ್ (225.6) ಕಂಚು ಜಯಿಸಿದರು. ಅವನಿ ಅವರ ಕೋಚ್‌ಗೆ ವೀಸಾ ನಿರಾಕರಿಸಿದ್ದರಿಂದ ಅವರು ಈ ಟೂರ್ನಿಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತಿದ್ದರು. ಆದರೆ ಭಾರತ ಕ್ರೀಡಾ ಪ್ರಾಧಿಕಾರ ಮತ್ತು ಕ್ರೀಡಾ ಸಚಿವಾಲಯ ಮಧ್ಯಪ್ರವೇಶಿಸಿ, ಗೊಂದಲ ಬಗೆಹರಿಸಿತ್ತು.

ಕಳೆದ ಆಗಸ್ಟ್‌ನಲ್ಲಿ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವನಿ 10 ಮೀ. ಏರ್ ರೈಫಲ್‌ನಲ್ಲಿ ಬಂಗಾರ ಜಯಿಸಿದ್ದರು. ಪ್ಯಾರಾಲಿಂಪಿಕ್ಸ್‌ನಲ್ಲಿ ಒಂದಕ್ಕಿಂತ ಹೆಚ್ಚು ಸಲ ಪದಕ ಜಯಿಸಿದ ಭಾರತದ ಮೊದಲ ಮಹಿಳಾ ಶೂಟರ್ ಎಂಬ ಗೌರವ ಅವರಿಗೆ ಒಲಿದಿತ್ತು.

ಅಮೆರಿಕ ಓಪನ್‌ಗೆ ಟೈಗರ್ ವುಡ್ಸ್ ಇಲ್ಲ

ಲಾಸ್ ಏಂಜಲೀಸ್ (ಎಎಫ್‌ಪಿ): ಮುಂದಿನ ವಾರ ಆರಂಭವಾಗಲಿರುವ ಅಮೆರಿಕ ಓಪನ್ ಟೂರ್ನಿಯಲ್ಲಿ ಆಡುವುದಿಲ್ಲ ಎಂದು ಗಾಲ್ಫ್ ಆಟಗಾರ ಟೈಗರ್ ವುಡ್ಸ್ ಹೇಳಿದ್ದಾರೆ.

ಬ್ಯಾಡ್ಮಿಂಟನ್: ಪ್ರಧಾನ ಸುತ್ತಿಗೆ ಅಶ್ವಿನಿ–ಸುಮೀತ್

ಜಕಾರ್ತ (ಪಿಟಿಐ): ಭಾರತದ ಅಶ್ವಿನಿ ಪೊನ್ನಪ್ಪ ಮತ್ತು ಸುಮೀತ್ ರೆಡ್ಡಿ ಜೋಡಿ ಇಲ್ಲಿ ಆರಂಭವಾದ ಇಂಡೊನೇಷ್ಯಾ ಓಪನ್ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದ ಪ್ರಧಾನ ಸುತ್ತು ಪ್ರವೇಶಿಸಿತು.

ಮಂಗಳವಾರ ನಡೆದ ಅರ್ಹತಾ ಹಂತದ ಪಂದ್ಯದಲ್ಲಿ ಭಾರತದ ಜೋಡಿ 17–21, 21–18, 21–14 ರಲ್ಲಿ ಜಪಾನ್ ಯುಜಿರೊ ನಿಶಿಕಾವ– ಸವೊರಿ ಒಜಾಕಿ ವಿರುದ್ಧ ಜಯ ಸಾಧಿಸಿತು. ಮೊದಲ ಗೇಮ್‌ನಲ್ಲಿ ಸೋತರೂ, ಪುಟಿದೆದ್ದು ನಿಂತ ಅಶ್ವಿನಿ– ಸುಮೀತ್ 50 ನಿಮಿಷಗಳಲ್ಲಿ ಗೆಲುವು ತಮ್ಮದಾಗಿಸಿಕೊಂಡರು. ಮೊದಲ ಸುತ್ತಿನ ಪಂದ್ಯದಲ್ಲಿ ಅವರು ಇಂಡೊನೇಷ್ಯದ ಹಾಫಿಜ್ ಫೈಜಲ್– ಸೆರೆನಾ ಕನಿ ವಿರುದ್ದ ಪೈಪೋಟಿ ನಡೆಸುವರು.

ಆದರೆ ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ– ಸಿಕ್ಕಿ ರೆಡ್ಡಿ ಜೋಡಿ 18-21 9-21ರಲ್ಲಿ ಇಂಡೊನೇಷ್ಯಾದ ಮೆಲಿಸಾ ಪುಸ್ಪಿತಾ ಮತ್ತು ರಚೆಲ್ ಅಲೆಸ್ಯಾ ಕೈಯಲ್ಲಿ ಪರಾಭವಗೊಂಡಿತು.

ಆಕರ್ಷಿಗೆ ಜಯ: ಯುವ ಪ್ರತಿಭೆ ಆಕರ್ಷಿ ಕಶ್ಯಪ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಧಾನ ಸುತ್ತು ಪ್ರವೇಶಿಸಿದರು. ಅರ್ಹತಾ ಹಂತದ ಪಂದ್ಯದಲ್ಲಿ ಅವರು 13-21 21-9 21-9 ರಲ್ಲಿ ಥಾಯ್ಲೆಂಡ್‌ನ ಸಿರದ ರೂಂಗ್ಪಿಬೂನ್‌ಸೊಪಿತ್ ಅವರನ್ನು ಪರಾಭವಗೊಳಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಶುಭಾಂಕರ್ ಡೇ, ಪ್ರಧಾನ ಹಂತ ಪ್ರವೇಶಿಸಲು ವಿಫಲರಾದರು. ಮಹಿಳಾ ಡಬಲ್ಸ್‌ನಲ್ಲಿ ಸಿಮ್ರಾನ್ ಸಿಂಘಿ ಮತ್ತು ರಿತಿಕಾ ಥಾಕರ್ ಅವರು ಮಹಿಳೆಯರ ಡಬಲ್ಸ್‌ನಲ್ಲಿ 10-21 11-21 ರಲ್ಲಿ ಕೊರಿಯದ ಲೀ ಸೊ ಹೀ–ಶಿನ್ ಸುಂಗ್ ಚಾನ್ ಎದುರು ಸೋಲು ಅನುಭವಿಸಿದರು.

ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲಿ ಮನು ಅತ್ರಿ– ಸುಮೀತ್ 21-19 11-21 8-21 ರಲ್ಲಿ ಪ್ರಮುದ್ಯಾ ಕುಸುಮವರ್ದನ– ಯೆರೆಮಿಯಾ ಯಾಕೊಬ್ ಎದುರು ಸೋತರು.

ಹಾಕಿ ಇಂಡಿಯಾ ಮೇಲೆ ವಿಶ್ವಾಸ: ಎಫ್‌ಐಎಚ್

ಲಾಸನ್ (ಪಿಟಿಐ): 'ಹಾಕಿ ಇಂಡಿಯಾ ಮೇಲೆ ನಮಗೆ ಪೂರ್ಣ ವಿಶ್ವಾಸವಿದೆ' ಎಂದಿರುವ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್), 'ತನ್ನ ಎಲ್ಲ ಸದಸ್ಯ ಫೆಡರೇಷನ್‌ಗಳು ಆಯಾ ದೇಶದ ಕ್ರೀಡಾ ನೀತಿಗಳನ್ನು ಪಾಲಿಸಬೇಕೆಂಬುದನ್ನು ಬಯಸುತ್ತದೆ' ಎಂದು ಹೇಳಿದೆ.

ರಾಷ್ಟ್ರೀಯ ಕ್ರೀಡಾ ನೀತಿಯನ್ನು ಸಮರ್ಪಕವಾಗಿ ಜಾರಿಗೊಳಿಸಿಲ್ಲ ಎಂಬ ಕಾರಣ ನೀಡಿ ದೆಹಲಿ ಹೈಕೋರ್ಟ್, ಹಾಕಿ ಇಂಡಿಯಾ (ಎಚ್‌ಐ) ಆಡಳಿತವನ್ನು ನೋಡಿಕೊಳ್ಳಲು ಆಡಳಿತ ಮಂಡಳಿ (ಸಿಒಎ) ನೇಮಿಸಿತ್ತು. ಇದರ ಬೆನ್ನಲ್ಲೇ ಎಫ್‌ಐಎಚ್ ಹೇಳಿಕೆ ಹೊರಬಿದ್ದಿದೆ.

ಗಾಲ್ಫ್ ಇಂದಿನಿಂದ

ಬೆಂಗಳೂರು: ಮಹಿಳಾ ಪ್ರೊ ಗಾಲ್ಫ್ (ಡಬ್ಲ್ಯುಪಿಜಿ) ಟೂರ್ ಇಲ್ಲಿನ ಪ್ರೆಸ್ಟೀಜ್ ಗಾಲ್ಫ್‌ಶೈರ್‌ನಲ್ಲಿ ಬುಧವಾರ ಆರಂಭವಾಗಲಿದ್ದು, ರಿಧಿಮಾ ದಿಲಾವರಿ ಹಾಗೂ ನೇಹಾ ತ್ರಿಪಾಠಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಡಬ್ಲ್ಯುಪಿಜಿ ಟೂರ್ ಎರಡು ತಿಂಗಳ ಬಿಡುವಿನ ಬಳಿಕ ಪುನರಾರಂಭವಾಗುತ್ತಿದ್ದು, 30 ಸ್ಪರ್ಧಿಗಳು ಕಣದಲ್ಲಿದ್ದಾರೆ.